ಸಾಹಿತ್ಯ ದಾಸೋಹ – ೨೧೩

ಸಂಚಿಕೆ ೪೧ – ಅಕ್ಟೋಬರ್ ೨೦೨೩

೨೩.೦೯.೨೦೨೩ರ ದಾಸೋಹದ ಬರಹಗಳ ಸಂಕಲನ



ಸಮನ್ವಯ ಸಮಿತಿ * ಕನ್ನಡವೇ ಸತ್ಯ

ನೋಡಿಯೋ ಸಾಹಿತ್ಯ ವೇದಿಕೆ

ಪುಟ ತೆರೆಯುವ ಮುನ್ನ . . .

ಆತ್ಮೀಯರೆ,

ಸೆಪ್ಟೆಂಬರ್ ತಿಂಗಳ ನೋಡಿಯೋ ಸಾಹಿತ್ಯ. ದಾಸೋಹ 217ರ ಸಂಚಿಕೆಯನ್ನು ನಿಮ್ಮ ಕೈಗಿರಿಸಲು ನಮಗೆ ಸಂತಸವೆನಿಸುತ್ತಿದೆ.

ಎಂದಿನಂತೆ ಈ ಬಾರಿಯೂ ಸದಸ್ಯರು ಕವನ, ಕತೆ, ಪ್ರಬಂಧ ಮುಂತಾದ ಅಭಿವ್ಯಕ್ತಿಗಳನ್ನು ದಾಖಲಿಸಿದ್ದಾರೆ. ಲೇಖಕವರ್ಗಕ್ಕೆ ಧನ್ಯವಾದಗಳು. ದಾಸೋಹದ ಅಧ್ಯಕ್ಷತೆವಹಿಸಿ, ಹಲವು ಸದಸ್ಯರು ಪ್ರಸ್ತುತಪಡಿಸಿದ ಎಲ್ಲಾ ಬರಹಗಳನ್ನು ತುಲನಾತ್ಮಕವಾಗಿ ವಿಶ್ಲೇಷಿಸಿ, ತಮ್ಮ ಅನಿಸಿಕೆಗಳನ್ನು ಬರಹ ರೂಪದಲ್ಲಿ ನೀಡಿದ ಶ್ರೀಮತಿ ಮಾಧುರಿ ಕೃಷ್ಣ ಅವರಿಗೂ ಕೃತಜ್ಞತೆಗಳು.

'ಸಣ್ಣ ಕತೆಗಳ ಶ್ರಾವಣ ಅಭಿಯಾನ' ದಲ್ಲಿ ಕಥಾರಚನೆಗಳು ಸಂಪನ್ನಗೊಂಡಿದ್ದು ಈಗ ಆ ಕತೆಗಳ ಧ್ವನಿಯನ್ನು ವೇದಿಕೆಯಲ್ಲಿ ಕೇಳಿಸುವ ಕಾರ್ಯ ಭರದಿಂದ ಸಾಗಿದೆ. ಎಲ್ಲ ಕಥಾ ಪ್ರತಿಭೆಗಳಿಗೆ ಅಭಿನಂದನೆಗಳು.

ಈ ಬಾರಿ ವಿಶೇಷ ಕಾರ್ಯಕ್ರಮವಾಗಿ ಅಕ್ಟೋಬರ್ 8ರಂದು ವೇದಿಕೆಯ ಕ್ರಿಯಾಶೀಲ ಸದಸ್ಯೆ ಹಾಗೂ ಪ್ರಸಿದ್ಧ ಲೇಖಕಿ ಶ್ರೀಮತಿ ಗಿರಿಜಾರಾಜ್ ಅವರ 'ನೀಲಾಂಜನೆ' ಕೃತಿಯ ಲೋಕಾರ್ಪಣೆ ನೋಡಿಯೋ ಸಾಹಿತ್ಯ ವೇದಿಕೆಯಲ್ಲಿ ಸಂಭ್ರಮದಿಂದ ನಡೆದಿದೆ. ಕೃತಿಯ ಲೋಕಾರ್ಪಣೆ ಮಾಡಿದವರು ಶ್ರೀ ಶಶಿಧರ ಹಾಲಾಡಿ ಮತ್ತು ಪರಿಚಯಿಸಿದವರು ಶ್ರೀ ಗುರುರಾಜ ಶಾಸ್ತ್ರಿಯವರು. ಈ ಕುರಿತ ವಿಸ್ತೃತ ವರದಿ ಈ ಸಂಚಿಕೆಯಲ್ಲಿದೆ.

ನೋಡಿಯೋ ಸಾಹಿತ್ಯ ದಾಸೋಹ ಅಭಿಯಾನವನ್ನು ಪ್ರೋತ್ಸಾಹಿಸುತ್ತ ಬಂದಿರುವ ಎಲ್ಲ ಸದಸ್ಯರಿಗೆ ಅಭಿನಂದನೆಗಳು. ಎಂದಿನಂತೆ ಈ ಸುಂದರ ಸಂಚಿಕೆಯ ರೂವಾರಿ ಶ್ರೀ ಎಸ್. ಶೃಂಗೇಶ್ವರ ಶರ್ಮ ಅವರಿಗೂ ನಮ್ಮ ಧನ್ಯವಾದಗಳು.

ಸಂಚಿಕೆಯನ್ನು ಸದಸ್ಯರು ಓದಿ, ಪ್ರತಿಕ್ರಿಯಿಸಲು ಕೋರಿಕೆ. ಸಲಹೆ, ಸೂಚನೆಗಳಿಗೂ ಸ್ವಾಗತವಿದೆ.

ಶುಭವಾಗಲಿ.

ಸಂಚಾಲಕ ಸಮಿತಿ
ಸಮನ್ವಯ ಸಮಿತಿ ಕನ್ನಡವೇ ಸತ್ಯ
ನೋಡಿಯೋ ದಾಸೋಹ ವೇದಿಕೆ, ಬೆಂಗಳೂರು 22.10.2023

ದಾಸೋಹದ ಪುಟಗಳಲ್ಲಿ ...

ಮುಖಚಿತ್ರ: 'ನಮಸ್ತೇ ಶಾರದಾ ದೇವಿ...'

ಚಿತ್ರಕೃಪೆ : ಡಾ. ಶುಭಶ್ರೀ ಪ್ರಸಾದ್ ಅವರ ಮನೆಯ ನವರಾತ್ರಿ ಗೊಂಬೆ ಪ್ರದರ್ಶನದಿಂದ

ಸಮನ್ವಯ ಸಮಿತಿ – ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ 217

ಕಾರ್ಯಕ್ರಮ ವರದಿ: ಎಸ್.ಶೃಂಗೇಶ್ವರ ಶರ್ಮ

217ನೇ ಸಾಹಿತ್ಯ ದಾಸೋಹವು, 23ನೆಯ ಸೆಪ್ಟೆಂಬರ್ 2023ರಂದು ಶನಿವಾರ ಮಧ್ಯಾಹ್ನ 3.30ಕ್ಕೆ ಶ್ರೀಮತಿ ಮಾಧುರಿ ಕೃಷ್ಣ ಅವರ ಅಧ್ಯಕ್ಷತೆಯಲ್ಲಿ ಗೂಗಲ್ ಮೀಟ್ ಅಂತರಜಾಲ ವೇದಿಕೆಯಲ್ಲಿ ನಡೆಯಿತು.

ಆರಂಭದಲ್ಲಿ ಶ್ರೀಮತಿ ರಾಧಿಕಾ ವಿ.ಗುಜ್ಜರ್ ಅವರು ಎಲ್ಲರನ್ನೂ ಸ್ವಾಗತಿಸಿ, ಅಧ್ಯಕ್ಷತೆ ವಹಿಸಿದ ಶ್ರೀಮತಿ ಮಾಧುರಿ ಕೆ. ಭಟ್ (ಕಾವ್ಯನಾಮ–ಮಾಧುರಿಕೃಷ್ಣ) ಅವರನ್ನು ಪರಿಚಯಿಸಿದರು. ಸಾಹಿತಿ, ವಿಮರ್ಶಕಿ, ಕತೆ–ಕಾದಂಬರಿಗಾರ್ತಿಯಾಗಿ ಮಾತ್ರವಲ್ಲದೆ, ಕಡಿಮೆ ಅವಧಿಯ ನಾಟಕ, ಪ್ರಹಸನಗಳ ರಚನೆ ಹಾಗೂ ನಿರ್ದೇಶನದಲ್ಲಿ ತಮ್ಮದೇ ಆದ



ಛಾಪು ಮೂಡಿಸಿರುವ ಮಾಧುರಿಕೃಷ್ಣ ಅವರು, ಸದಾ ಹೊಸ ಬಗೆಯ ಸಾಹಿತ್ಯಕ ಬರಹಗಳ ಪ್ರಯೋಗಗಳಿಗೆ ತೆರೆದುಕೊಂಡು ಕಲಿಕೆಯ ಪಥದಲ್ಲಿ ನಡೆಯುವ ಸ್ಥಿರ ಪ್ರೌಢಿಮೆಯ ಮಹಿಳೆ. ಅವರ ನಾಲ್ಕು ಕಾದಂಬರಿಗಳು ಪ್ರಕಟವಾಗಿದ್ದು, ಅವರು ರಚಿಸಿದ ಮಕ್ಕಳ ಇಂಗ್ಲಿಷ್ ಪ್ರಹಸನವೊಂದು 50ಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿದೆ. ಅವರು ಮಂಜೇಶ್ವರ ಗೋವಿಂದ ಪೈ ಸ್ಮಾರಕ ಕಥಾ ಸ್ಪರ್ಧೆಯಲ್ಲಿ ಬಹುಮಾನ ಗಳಿಸಿರುವರಲ್ಲದೆ, ಕರ್ನಾಟಕ ಲೇಖಕಿಯರ ಸಂಘದ ಪ್ರಶಸ್ತಿಗೂ ಭಾಜನರಾಗಿದ್ದಾರೆ. ಅವರು ರಚಿಸಿದ ‘ಕೋಟೇಸ್ರ ಜಾತ್ರೆ’ ಗ್ರಾಮಗೀತೆ ಸುಮಾರು 50 ವರ್ಷಗಳಿಂದಲೂ ಪ್ರಚಲಿತದಲ್ಲಿರುವುದು ಅಭಿನಂದನೀಯ. ಅವರ ಅನೇಕ ಬರಹಗಳು ವಿವಿಧ ಪತ್ರಿಕೆ ಮತ್ತು ನಿಯತಕಾಲಿಕಗಳಲ್ಲಿ ಪ್ರಕಟವಾಗಿರುವುದಲ್ಲದೆ, ಅವರ ಆಸಕ್ತಿಯ ಹರಹು ಫ್ಯಾಷನ್ ಶೋ ಸಂಘಟಿಸುವವರೆಗೂ ವಿಸ್ತಾರವಾಗಿದೆ ಎಂದು ಹೇಳಿ, ಮಾಧುರಿಕೃಷ್ಣ ಅವರನ್ನು ಸ್ವಾಗತಿಸಿದರು.

ವೇದಿಕೆಯು ಕಳೆದ ತಿಂಗಳು ಏರ್ಪಡಿಸಿದ್ದ ‘ಸಣ್ಣ ಕತೆಗಳ ಶ್ರಾವಣ ಅಭಿಯಾನ’ದ ಬಗ್ಗೆ ಮಾತನಾಡಿದ ಶ್ರೀ ಹು.ವಾ.ಶ್ರೀಪ್ರಕಾಶ್ ಅವರು, ಇದೊಂದು ಅಪರೂಪದ ಅಭಿಯಾನವಾಗಿದ್ದು, ಇದಕ್ಕೆ ಪೂರ್ವಭಾವಿಯಾಗಿ ನಡೆದ ಸಣ್ಣ ಕಥಾ ಶಿಬಿರದಲ್ಲಿ 43 ಜನ ಭಾಗವಹಿಸಿದ್ದು ವಿಶೇಷ. ವೇದಿಕೆಯ ಸದಸ್ಯರಿಗೆ ಒಂದು ತಿಂಗಳ ಅವಧಿಯಲ್ಲಿ ಕನಿಷ್ಠ ಒಂದು ನೂರು ಹೊಸ ಸಣ್ಣ ಕತೆಗಳನ್ನು ರಚಿಸಬೇಕೆಂಬ ಗುರಿ ನೀಡಲಾಗಿತ್ತು. ಆದರೆ ಅಭಿಯಾನ ಮುಗಿಯುವ ವೇಳೆಗೆ ವೇದಿಕೆಯ 57 ಸದಸ್ಯರು 158 ಕತೆ ಬರೆದು ದಾಖಲೆಯನ್ನೇ ನಿರ್ಮಿಸಿದರು ಎಂದರಲ್ಲದೆ, ಒಬ್ಬ ಕತೆಗಾರ ಗರಿಷ್ಠ ಮೂರು ಕತೆಗಳನ್ನು ಬರೆಯಬಹುದೆಂಬ ನಿಯಮವಿದ್ದರೂ, ಕೆಲವರು ಕಡಿಮೆ ಅವಧಿಯಲ್ಲಿ

ನಾಲ್ಕರಿಂದ ಎಂಟು ಕತೆಗಳನ್ನು ಬರೆದು ವೇದಿಕೆಯಲ್ಲಿ ಪ್ರಸ್ತುತಪಡಿಸಿದ ಬಗ್ಗೆ ಶ್ಲಾಘನೆಯನ್ನು ವ್ಯಕ್ತಪಡಿಸಿದರು. ಎಲ್ಲ ಕತೆಗಾರರು ತಂತಮ್ಮ ಕತೆಗಳನ್ನು ಓದಿ, ಧ್ವನಿಮುದ್ರಿಸಿ ವೇದಿಕೆಯಲ್ಲಿ ಪ್ರಕಟಿಸುವುದರ ಮೂಲಕ ಸ್ವರಚಿತ ಕತೆಗಳ ಧ್ವನಿಮುದ್ರಣ ಅಭಿಯಾನದ ಯಶಸ್ಸಿಗೆ ಸಹಕರಿಸಬೇಕು ಎಂದೂ ಅವರು ಕರೆ ನೀಡಿದರು.

ನಂತರ ಒಟ್ಟು 18 ಬರಹಗಾರರು ತಮ್ಮ ಸ್ವರಚಿತ ಕತೆ, ಕವನ, ಲೇಖನಗಳನ್ನು ದಾಸೋಹದಲ್ಲಿ ವಾಚಿಸಿದರು. ಕೊನೆಯಲ್ಲಿ, ದಾಸೋಹದ ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಮಾಧುರಿಕೃಷ್ಣ ಅವರು, ಪ್ರತಿಯೊಂದು ಬರಹಗಳನ್ನೂ ವಿಶ್ಲೇಷಿಸಿ, ಅವುಗಳ ಬಗ್ಗೆ ತಮ್ಮ ಮುಕ್ತ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಸಂಚಾಲಕ ಸಮಿತಿಯ ಶ್ರೀ ಕೆ.ಎನ್. ಮಹಾಬಲ ಅವರು ಕಾರ್ಯಕ್ರಮ ನಿರೂಪಿಸಿದರಲ್ಲದೆ, 8ನೆಯ ಅಕ್ಟೋಬರ್ 2023ರಂದು ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಆಶ್ರಯದಲ್ಲಿ ಜರುಗಲಿರುವ ವೇದಿಕೆಯ ಸದಸ್ಯರಾದ ಶ್ರೀಮತಿ ಗಿರಿಜಾರಾಜ್ ಅವರ ಸಣ್ಣ ಕತೆಗಳ ಸಂಕಲನ 'ನೀಲಾಂಜನೆ' ಕೃತಿಯ ಬಿಡುಗಡೆ ಬಗ್ಗೆ ಮಾಹಿತಿ ನೀಡಿ, ನೋಡಿಯೋ ಅಂತರಜಾಲ ವೇದಿಕೆಯಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸದಸ್ಯರು ಭಾಗವಹಿಸಬೇಕೆಂದು ಕೋರಿದರು.

ಇದೇ ಸಂದರ್ಭದಲ್ಲಿ 'ಸಾಹಿತ್ಯ ದಾಸೋಹ–216'ರ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ಕೊನೆಯಲ್ಲಿ ಶ್ರೀ ಎನ್.ವಿ.ರಘುರಾಂ ಅವರು ಎಲ್ಲರಿಗೂ ವಂದಿಸಿದರು.

ಇಡೀ ಕಾರ್ಯಕ್ರಮದ ವಿಡಿಯೋ ಚಿತ್ರಣವನ್ನು 'ಸಮನ್ವಯ ಸಮಿತಿ ಕನ್ನಡವೇ ಸತ್ಯ'ದ ಯುಟ್ಯೂಬ್‌ನಲ್ಲಿ ವೀಕ್ಷಿಸಬಹುದು.

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com


ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ –
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 217 ನಡೆದ ದಿನಾಂಕ: 23 ಸೆಪ್ಟೆಂಬರ್ 2023
ಸಂಚಿಕೆಯ ಬಿಡುಗಡೆ ದಿನಾಂಕ: 21 ಅಕ್ಟೋಬರ್ 2023 – ಭಾನುವಾರ

ಸಮನ್ವಯ ಸಮಿತಿ – ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಶ್ರೀಮತಿ ಎಲ್. ಗಿರಿಜಾ ರಾಜ್ ಅವರ
'ನೀಲಾಂಜನೆ' ಸಣ್ಣ ಕಥಾ ಸಂಕಲನದ ಬಿಡುಗಡೆ ಸಮಾರಂಭ

ಕಾರ್ಯಕ್ರಮ ವರದಿ: ರಾಜನ್



ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ವತಿಯಿಂದ ವೇದಿಕೆಯ ಸದಸ್ಯರಾದ ಶ್ರೀಮತಿ ಗಿರಿಜಾ ರಾಜ್‌ರವರ 'ನೀಲಾಂಜನೆ' ಕಥಾ ಸಂಕಲನದ ಬಿಡುಗಡೆ ಕಾರ್ಯಕ್ರಮವನ್ನು ದಿನಾಂಕ 8.10.2023ರಂದು ಸಂಜೆ 5 ಗಂಟೆಗೆ ನೋಡಿಯೋ ಸಾಹಿತ್ಯ ವೇದಿಕೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. .

ಅಂತರ್ಜಾಲ ಮುಖೇನ ನಡೆದ ಈ ಕಾರ್ಯಕ್ರಮವು ಶ್ರೀಮತಿ ಮಾಲತಿ ಶ್ರೀನಿವಾಸನ್‌ರವರ ಸಿಂಧು ಭೈರವಿ ರಾಗದ ಸುಮಧುರ ಪ್ರಾರ್ಥನೆಯೊಂದಿಗೆ 'ಇಂದುಧರನ ಸುತ ಮಂಗಳ ದಾತ'ನ ಧ್ಯಾನಿಸುತ್ತಾ ಪ್ರಾರಂಭವಾಯಿತು.

ಶ್ರೀಮತಿ ಲಕ್ಷ್ಮಿ ವಿಠ್ಠಲ್‌ರವರು ಕಾರ್ಯಕ್ರಮದ ಮುಖ್ಯ ವ್ಯಕ್ತಿಗಳನ್ನು ಆತ್ಮೀಯವಾಗಿ ಪರಿಚಯಿಸಿ, ಸ್ವಾಗತಿಸಿದರು.

ಬೆಂಗಳೂರಿನ ವಿವೇಕಾನಂದ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿರುವ ಶ್ರೀಮತಿ ಗಿರಿಜಾ ರಾಜ್‌ರವರು ಪ್ರಸಕ್ತ ಪಿಹೆಚ್‌ಡಿ ಪದವಿಗಾಗಿ ವ್ಯಾಸಂಗ ಮಾಡುತ್ತಿದ್ದಾರೆ. ಆಕಾಶವಾಣಿಯಲ್ಲಿ ಕೂಡಾ ಹಲವು ಕಾರ್ಯಕ್ರಮಗಳನ್ನು ನೀಡಿರುವರಲ್ಲದೆ, ನಾಡಿನ ಅನೇಕ ಪತ್ರಿಕೆಗಳಲ್ಲಿ ಅವರ ಕಥೆ, ಲೇಖನಗಳು ಪ್ರಕಟವಾಗಿದ್ದು ಓದುಗರ ಮನಸ್ಸನ್ನು ಸೆಳೆದಿವೆ. ಅವರೊಬ್ಬರು ಪ್ರಗತಿಪರ ಲೇಖಕಿ ಮತ್ತು ಚಿಂತಕರು ಎಂಬುದನ್ನು ಅವರ ಕೃತಿಗಳು ತೋರಿಸಿಕೊಟ್ಟಿವೆ. ಸಂಗೀತ, ಕರಕುಶಲ ಕಲೆ, ಛಾಯಾಗ್ರಹಣ, ಚಿತ್ರಕಲೆಯಲ್ಲೂ ಆಸಕ್ತಿ ಹೊಂದಿರುವ ಅವರು ಈಗಾಗಲೇ ತಮ್ಮ ಮೂರು ಕಥಾ ಸಂಕಲನಗಳು ಹಾಗೂ ಇತರ ಕೃತಿಗಳನ್ನು ಪ್ರಕಟಿಸಿದ್ದು, ತಮ್ಮ ನಿರಂತರ ಸಾಹಿತ್ಯ ಸೇವೆಗಾಗಿ ಅನೇಕ ಬಹುಮಾನ, ಪ್ರಶಸ್ತಿ, ಪುರಸ್ಕಾರಗಳನ್ನು ಗಳಿಸಿದ್ದಾರೆ ಎಂದು ತಿಳಿಸಿ, ಶ್ರೀಮತಿ ಗಿರಿಜಾ ರಾಜ್ ಅವರನ್ನು ಅಭಿನಂದಿಸಿ ಸ್ವಾಗತಿಸಿದರು.

ಕಥಾ ಸಂಕಲನವನ್ನು ಬಿಡುಗಡೆ ಮಾಡಲಿರುವ ಶ್ರೀ ಶಶಿಧರ ಹಾಲಾಡಿಯವರು ಪತ್ರಕರ್ತರು, ವಿಶ್ವವಾಣಿ ಪತ್ರಿಕೆಯ ಉಪಸಂಪಾದಕರು. ನಮ್ಮ ವೇದಿಕೆಯ ಅನೇಕ ಲೇಖಕ, ಲೇಖಕಿಯರ ಕಥೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಿ ಪ್ರೋತ್ಸಾಹಿಸುವ ಸುಂದರ ಹೃದಯದವರು. ಪರಿಸರವನ್ನು ಪ್ರೀತಿಸುವ ಅವರು ಕಾಡು, ಪಕ್ಷಿಸಂಕುಲ, ವೃಕ್ಷಗಳ ಪರಿಚಯವನ್ನು ತಮ್ಮ ಹಲವು ಲೇಖನಗಳಲ್ಲಿ ಮಾಡಿಕೊಟ್ಟಿದ್ದಾರೆ. ಅವರ ಇತ್ತೀಚಿನ ಕೃತಿಗಳಾದ 'ಕಾಲಕೋಶ' ಮತ್ತು 'ಅಬ್ಬೆ' ಸಾಕಷ್ಟು ಜನಪ್ರಿಯವಾಗಿದ್ದು, ಹಲವು ಪ್ರಶಸ್ತಿಗಳಿಗೆ ಭಾಜನವಾಗಿವೆ ಎಂದು ಹೇಳಿ, ಶ್ರೀ ಶಶಿಧರ ಹಾಲಾಡಿಯವರನ್ನು ಅಭಿಮಾನದಿಂದ ಸ್ವಾಗತಿಸಿದರು.

ಶ್ರೀ ಗುರುರಾಜ ಶಾಸ್ತ್ರಿಯವರು, ಚಾರಣಿಗ, ಛಾಯಾಚಿತ್ರಗ್ರಾಹಕ, ಕಥೆಗಾರ, ನಾಟಕಕಾರ, ಅವರೊಬ್ಬ ಸಕಲ ಕಲಾ ವಲ್ಲಭ ಮತ್ತು ಎಲ್ಲರ ಮನ ಗೆದ್ದಿದ್ದಾರೆ ಎಂದು ಪರಿಚಯಿಸಿ ಸ್ವಾಗತ ಕೋರಿದರು.

ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಅಧ್ವರ್ಯು, ಶ್ರೀ ಬೆಂ.ಶ್ರೀ.ರವೀಂದ್ರರವರು ತಮ್ಮ ಪ್ರಸ್ತಾವಿಕ ನುಡಿಗಳಲ್ಲಿ, ವೇದಿಕೆಯ ಆಶ್ರಯದಲ್ಲಿ ಯಶಸ್ವಿಯಾಗಿ ನಡೆದ ಸಣ್ಣ ಕಥೆಗಳ ಶ್ರಾವಣದಲ್ಲಿ ಕಥೆಗಳನ್ನು ಬರೆದವರು ತಮ್ಮ ಕತೆಗಳನ್ನು ಓದಿ ಧ್ವನಿಮುದ್ರಿಸಿ ಪ್ರಸ್ತುತಪಡಿಸಬೇಕೆಂದು ಕೋರಿದರಲ್ಲದೆ, ವೇದಿಕೆಯು ಹಮ್ಮಿಕೊಂಡಿರುವ ಮುಂದಿನ ಸಾಹಿತ್ಯ ದಾಸೋಹ ಹಾಗೂ ಶ್ರೀ ಧೀರೇಂದ್ರರವರ ಕನ್ನಡ ಹವ್ಯಾಸಿ ರಂಗಭೂಮಿ ಕಲಾವಿದರ ಕುರಿತ ಪುಸ್ತಕ ಬಿಡುಗಡೆಯ ಬಗ್ಗೆ ತಿಳಿಸಿದರು. ಶ್ರೀಮತಿ ಗಿರಿಜಾ ರಾಜ್ ಅವರ 12ನೇ ಪುಸ್ತಕದ ಬಿಡುಗಡೆ ಇಂದು ನಡೆಯಲಿದ್ದು, ಇವರು ಹೀಗೆಯೇ ಅನೇಕ ಪುಸ್ತಕಗಳನ್ನು ಬರೆಯಲೆಂದು ಹಾರೈಸಿದರು.



ಶ್ರೀ ಗುರುರಾಜ ಶಾಸ್ತ್ರಿಗಳು ಪುಸ್ತಕದ ಬಗ್ಗೆ ಮಾತನಾಡುತ್ತಾ ಇದು ಪುಸ್ತಕದ ವಿಮರ್ಶೆಯಲ್ಲ ಪುಸ್ತಕದ ಪರಿಚಯ ಎಂದು ಆರಂಭಿಸಿ, ಶ್ರೀಮತಿ ಗಿರಿಜಾ ರಾಜ್ ಅವರ 15 ಕಥೆಗಳಲ್ಲಿ ಸಾಮಾಜಿಕ ಕಾಳಜಿ ಇದೆ, ತಿಳಿ ಹಾಸ್ಯ ಇದೆ, ಇತಿಹಾಸ ಇದೆ, ಕೌಟುಂಬಿಕ ಸಮಸ್ಯೆ ಇದೆ, ಹೆಣ್ಣು ಗಂಡಿನ ಪ್ರೀತಿ ಇದೆ, ಅಪ್ಪ-ಅಮ್ಮ ಮಕ್ಕಳ ವಾತ್ಸಲ್ಯವಿದೆ, ಸುಖ ಸಂತೋಷ ದುಃಖವೂ ಇದೆ. ನಿಗೂಢ ರಹಸ್ಯಗಳಿವೆ. ವೇದಾಂತದ ದರ್ಶನವಿದೆ ಎಂದರು. ಬಳಸಿರುವ ಭಾಷೆ ಅತಿ ಸರಳವಾದ ಆಡು ಭಾಷೆಯ ಪದಗಳು. ಎಲ್ಲರೂ ಸುಲಭವಾಗಿ ಓದಬಹುದಾದ ಕಥೆಗಳು. ತಿಳಿಯಾದ ಭಾಷೆಯ ಬಳಕೆ, ಕುಟುಂಬದವರೆಲ್ಲರೂ ಓದಬಹುದಾದ ಕಥೆಗಳು ಎಂದ ಅವರು ಇದರಲ್ಲಿನ ಎಲ್ಲಾ ಕಥೆಗಳೂ ತಾರ್ಕಿಕ ಅಂತ್ಯದಿಂದ ಕೂಡಿದ್ದು, ಒಂದೇ ಬಾರಿಗೆ ಎಲ್ಲಾ ಕಥೆಗಳನ್ನು ಓದಿಸಿಕೊಂಡು ಹೋಗುವ ಕುತೂಹಲ ಹೊಂದಿವೆ. ಮುಖಪಟ ತುಂಬಾ ಆಕರ್ಷಕವಾಗಿ ಮೂಡಿ ಬಂದಿದೆ ಎಂದರು. ಲೇಖಕಿಗೆ ಕಾಡಿದ ನೀಲಾಂಜನೆಯ ಪಾತ್ರದ ಬಗ್ಗೆ ಮಾತಾಡಿದ ಅವರು ಈ ಕಥೆಯಲ್ಲಿ ನೀಲಾಂಜನೆಯ ಮತ್ತು ಸಖಿಯ ಸಂಭಾಷಣೆಗಳು ಅತ್ಯದ್ಭುತವಾಗಿ ಮೂಡಿಬಂದಿವೆ ಎಂದರು. 'ಅಪ್ಪ ಎಲ್ಲಿಗೆ ಹೋದರು' ಕಥೆಯ ಬಗ್ಗೆ ಮಾತನಾಡುತ್ತಾ ತಮ್ಮ ಪರಿಚಯದವರ ಮನೆಯಲ್ಲಿ ನಡೆದ ಘಟನೆಯಂತೆಯೇ ಈ ಕಥೆ

ಮೂಡಿಬಂದಿದೆ. ಮನೆಯ ಹಿರಿಯನೊಬ್ಬ ಕಾಣೆಯಾದರೆ ಕುಟುಂಬದವರಲ್ಲಿ ಉಂಟಾಗುವ ಮನಸ್ಸಿನ ಭಾವನೆಗಳನ್ನು ಮತ್ತು ವ್ಯಕ್ತಿಯ ಮನಸ್ಸಿನಲ್ಲಾಗುವ ವೇದನೆಯನ್ನು ತುಂಬಾ ಸುಂದರವಾಗಿ ನಿರೂಪಿಸಿದ್ದಾರೆ ಎಂದರು. 'ಗಂಗೆ' ಕಥೆಯ ಬಗ್ಗೆ ನುಡಿಯುತ್ತಾ ಅಮೃತ ಗಳಿಗೆ ಮೂಡುವ ಸಮಯ ಮತ್ತು ಮನಸ್ಸಿನ ಮೇಲೆ ಮೂಡುವ ಪರಿಣಾಮದ ಬಗ್ಗೆ ಹೇಳಿದರು.

ಶ್ರೀ ಶಶಿಧರ ಹಾಲಾಡಿಯವರು 'ನೀಲಾಂಜನೆ' ಕಥಾ ಸಂಕಲನವನ್ನು ಬಿಡುಗಡೆ ಮಾಡಿ, ಶ್ರೀಮತಿ ಗಿರಿಜಾ ರಾಜ್ ಅವರು 15 ಕತೆಗಳನ್ನೊಳಗೊಂಡ ಕಥಾಸಂಕಲನ ಹೊರತಂದಿದ್ದಾರೆ. ಇದರಲ್ಲಿನ ಕತೆಗಳಿಗೆ ಹಲವು ಪುರಸ್ಕಾರಗಳು ದೊರೆತಿವೆ. ಅವರ ಕೆಲವೊಂದು ಕಥೆಗಳನ್ನು ನಾನು ಮೊದಲೇ ಓದಿ ಸಂತೋಷಪಟ್ಟಿದ್ದೆ. ಆ ಸಂದರ್ಭದಲ್ಲಿ ಅವರ ಕಥಾ ಸಂಕಲನವನ್ನು ನಾನು ಬಿಡುಗಡೆ ಮಾಡುತ್ತೇನೆ ಎಂದು ಯೋಚಿಸಿರಲಿಲ್ಲ. ನಾನು ಸಂತೋಷದಿಂದ ಈ ಕಥಾ ಸಂಕಲನವನ್ನು ಬಿಡುಗಡೆ ಮಾಡಿದ್ದೇನೆ ಎಂದರು. 'ಅಪ್ಪ ಎಲ್ಲಿಗೆ ಹೋದರು' ಎಂಬ ಕಥೆಯ ಬಗ್ಗೆ ಮಾತನಾಡುತ್ತಾ, ಕಥೆಯ ಆರಂಭದ ಕೆಲವೊಂದು ಸಾಲುಗಳನ್ನು ಓದಿದ ಅವರು, ಈ ಸಾಲುಗಳಲ್ಲಿರುವ ಚಿತ್ರಕ ಭಾಷೆ ನನಗೆ ಇಷ್ಟವಾಯಿತು ಎಂದರು. ಒಬ್ಬ ಸಮರ್ಥ ಕಥೆಗಾರ ಮುಂದೆ ಉಂಟಾಗುವ ಘಟನೆಯನ್ನು ತನ್ನ ಕಥೆಯಲ್ಲಿ ತರಬಲ್ಲ ಎಂದು ನುಡಿದರು. ವೇದಿಕೆ ಆಯೋಜಿಸಿದ್ದ 'ಸಣ್ಣ ಕಥಾ ಶ್ರಾವಣ ಅಭಿಯಾನ'ದ ನಂತರ ಈ ಕಥಾ ಸಂಕಲನ ಬಿಡುಗಡೆ ಆಗುತ್ತಿರುವುದು ಅರ್ಥಪೂರ್ಣ ಎಂದರು.

ಲೇಖಕಿ ಶ್ರೀಮತಿ ಗಿರಿಜಾ ರಾಜ್ ಅವರು 'ನೀಲಾಂಜನೆ'ಯ ಮುಖಪುಟ ವಿನ್ಯಾಸದ ಬಗ್ಗೆ ತಿಳಿಸಿದರಲ್ಲದೆ, ಪಂಪನ ನೀಲಾಂಜನೆಯ ಬಗ್ಗೆ ವಿವರಿಸಿ ತಮ್ಮ ಮನದಲ್ಲಿದ್ದ ಆ ನೀಲಾಂಜನೆ ಈ ಕತೆಯಾಗಿ ಮೂಡಿ ಬಂದಿದ್ದಾಳೆ ಮತ್ತು ಅವಳಿಗೆ ಒಬ್ಬಳು ಸಖಿಯನ್ನು ಸೃಷ್ಟಿಸಿ ಕತೆಯಾಗಿಸಿದ್ದೇನೆ ಎಂದು ಹೇಳಿ, ಪಂಪನ ಕಾವ್ಯದಲ್ಲಿ ವರ್ಣಿಸಿರುವ ಆದಿದೇವ ನೀಲಾಂಜನೆಯ ಭಾಗವನ್ನು ವಿವರಿಸಿದರು. ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಬಗ್ಗೆ ತಮ್ಮ ಅಭಿಮಾನದ ಮಾತುಗಳನ್ನು ಆಡಿದರು.

ಕಾರ್ಯಕ್ರಮವನ್ನು ಶ್ರೀ ರವಿ ಕುಸುಬಿಯವರು ಸುಂದರವಾಗಿ ನಿರೂಪಿಸಿ ವಂದನಾರ್ಪಣೆಯೊಂದಿಗೆ ಸಂಪನ್ನಗೊಳಿಸಿದರು.

ಸಂಪೂರ್ಣ ಕಾರ್ಯಕ್ರಮವನ್ನು ಸಮನ್ವಯ ಸಮಿತಿ ಕನ್ನಡವೇ ಸತ್ಯದ ಯುಟ್ಯೂಬ್‌ನಲ್ಲಿ ವೀಕ್ಷಿಸಬಹುದು.

'ನೀಲಾಂಜನೆ' ಕಥಾ ಸಂಕಲನದ ಪ್ರಕಾಶಕರು: ಗಿರಿಜಾರಾಜ್ ಪ್ರಕಾಶನ, ಬೆಂಗಳೂರು. ಪುಟಗಳು –88, ಬೆಲೆ ರೂ: 110/-. ಪುಸ್ತಕಗಳಿಗಾಗಿ ಲೇಖಕಿ ಶ್ರೀಮತಿ ಗಿರಿಜಾ ರಾಜ್ ಅವರನ್ನು ಸಂಪರ್ಕಿಸಿ – ಮೊಬೈಲ್ 9964869232

***

ರುದ್ರಭಟ್ಟನ ಪಾರಿಜಾತ ಹರಣ ಕಥೆ – ಒಂದು ಪರಿಚಯ

ಲೇಖನ – ಗುರುರಾಜ ಶಾಸ್ತ್ರಿ

ಕೃಷ್ಣನು ಪಾರಿಜಾತ ಗಿಡವನ್ನು ಸ್ವರ್ಗಲೋಕದಿಂದ ಕದ್ದು ಭೂಲೋಕಕ್ಕೆ ತಂದದ್ದು ಸಾಕಷ್ಟು ಜನರಿಗೆ ಗೊತ್ತಿರುತ್ತದೆ. ಈ ಕಥೆಯನ್ನು ನಾನು ಓದಿದ್ದು ರುದ್ರಭಟ್ಟಕವಿಯ ಜಗನ್ನಾಥ ವಿಜಯ ಕಾವ್ಯದಲ್ಲಿ. ಬನ್ನಿ, ರುದ್ರಭಟ್ಟನ ದೃಷ್ಟಿಯಿಂದ ಇದನ್ನು ಮತ್ತೊಮ್ಮೆ ತಿಳಿದುಕೊಳ್ಳೋಣ.

ಮೊದಲಿಗೆ ರುದ್ರಭಟ್ಟನ ಪರಿಚಯ ಮಾಡಿಕೊಳ್ಳೋಣ.

ರುದ್ರಭಟ್ಟ ಕವಿಯ ಕಾಲಮಾನ ಕ್ರಿ.ಶ. 1100ರಿಂದ 1200 ರ ಮಧ್ಯೆ ಎಂದು ಅಧ್ಯಯನಗಳಿಂದ ತಿಳಿದುಬಂದಿದೆ. ಸಾಮಾನ್ಯವಾಗಿ ಹಿಂದಿನ ಕವಿಗಳು ತಮ್ಮ ನಿರ್ಧಿಷ್ಟವಾದ ಕಾಲಮಾನವನ್ನು ಯಾವ ಕಾವ್ಯದಲ್ಲೂ ನೀಡಿರುವುದಿಲ್ಲ. ಆ ಕವಿಗಳು ತಮ್ಮ ಕಾವ್ಯಗಳಲ್ಲಿ ತಿಳಿಸಿದ ರಾಜರ ಹೆಸರುಗಳು, ಶಾಸನಗಳು ಇನ್ನಿತರ ವಿಷಯಗಳನ್ನು ಆಧರಿಸಿ ಕವಿಗಳ ಕಾಲಮಾನವನ್ನು ಗುರುತಿಸಲಾಗುತ್ತದೆ.

ಹೊಯ್ಸಳ ಅರಸ ವೀರಬಲ್ಲಾಳನ ಆಸ್ಥಾನದಲ್ಲಿ ಚಂದ್ರಮೌಳಿ ಎಂಬ ಮಂತ್ರಿ. ಇದ್ದ. ಈ ಚಂದ್ರಮೌಳಿಯೇ ರುದ್ರಭಟ್ಟನ ಆಶ್ರಯದಾತ. ನಮಗೆ ದೊರಕಿರುವ ಕಾವ್ಯಗಳನ್ನು ನೋಡಿದಾಗ ರುದ್ರಭಟ್ಟ ಕನ್ನಡದ ಮೊದಲ ಬ್ರಾಹ್ಮಣ ಕವಿ ಎಂದು ತಿಳಿದುಬರುತ್ತದೆ. ಈ ಕವಿಯ ಕುಲದೇವರು ಶಿವನಾದರೂ ಇವನ ಇಷ್ಟದೇವತೆ ಕೃಷ್ಣ..

ರುದ್ರಭಟ್ಟ ಕವಿ ಕನ್ನಡದಲ್ಲಿ 'ಜಗನ್ನಾಥ ವಿಜಯ' ಮತ್ತು ಸಂಸ್ಕೃತದಲ್ಲಿ 'ರಸಕಳಿಕೆ' ಎಂಬ ಎರಡು ಕಾವ್ಯಗಳನ್ನು ರಚಿಸಿದ್ದಾರೆ. ರಸಕಳಿಕೆ ಕಾವ್ಯ ನಮಗೆ ಸಿಕ್ಕಿಲ್ಲ, ಆದರೆ ಈ ಕವಿಯ ನಂತರ ಕಾವ್ಯಗಳನ್ನು ಬರೆದ ಇತರ ಕವಿಗಳು ಈ ರಸಕಳಿಕೆ ಬಗ್ಗೆ ಉಲ್ಲೇಖಿಸಿರುವುದರಿಂದ ಇದೂ ರುದ್ರಭಟ್ಟನ ಇನ್ನೊಂದು ರಚನೆ ಎಂದು ತಿಳಿದುಬರುತ್ತದೆ.

ರುದ್ರಭಟ್ಟನಿಗೆ ಕವಿರಾಜ, ಕೃತಿಶಾರದಾಭ್ರ, ಚಂದ್ರಾತಾಪ ಎಂಬ ಬಿರುದುಗಳೂ ಇದೆ.

ಪಾರಿಜಾತ ಹರಣದ ಕಥೆಯನ್ನು ಸಂಕ್ಷಿಪ್ತವಾಗಿ ಹೇಳಬಯಸುತ್ತೇನೆ.

ಜಗನ್ನಾಥ ವಿಜಯ ಮುಖ್ಯವಾಗಿ ವಿಷ್ಣು ಪುರಾಣವನ್ನು ಆಧರಿಸಿ ಬರೆದ ಕಾವ್ಯ. ಇದರ ಹದಿಮೂರನೇ ಆಶ್ವಾಸದಲ್ಲಿ 'ಪಾರಿಜಾತ ಹರಣ' ಕಥೆ ಬರುತ್ತದೆ.

ಸ್ವರ್ಗಲೋಕದಲ್ಲಿ ಒಂದು ವಿಶೇಷ ಕಾರ್ಯಕ್ರಮ. ಆ ಕಾರ್ಯಕ್ರಮಕ್ಕೆ ಕೃಷ್ಣನನ್ನು ಆಹ್ವಾನಿಸಲು ತ್ರಿಲೋಕಸಂಚಾರಿ ನಾರದರನ್ನು ನೇಮಿಸುತ್ತಾರೆ. ಈಗೆಲ್ಲಾ ಮದುವೆ ಉಪನಯನಗಳಿಗೆ ಆಹ್ವಾನಿಸುವಾಗ ನಾವು ಅಕ್ಷತೆ ಕೊಡುವಂತೆ ನಾರದರು ಪಾರಿಜಾತ ಹೂವನ್ನು ತಂದಿರುತ್ತಾರೆ. ಕೃಷ್ಣನಿಗೆ ಆ ಪಾರಿಜಾತ ಹೂವನ್ನು ನೀಡಿ ಕಾರ್ಯಕ್ರಮಕ್ಕೆ ಆಹ್ವಾನಿಸುತ್ತಾರೆ. ಆ ಪಾರಿಜಾತ ಹೂವನ್ನು ಕೃಷ್ಣ ತನ್ನ ಪಕ್ಕದಲ್ಲೇ ಇದ್ದ ರುಕ್ಮಿಣಿಗೆ ತಲೆಯಲ್ಲಿ ಮುಡಿದುಕೊಳ್ಳಲು ಕೊಡುತ್ತಾನೆ. ಈ ಸಂದರ್ಭದಲ್ಲಿ ನಾರದರು ಆ ಪಾರಿಜಾತ ಹೂವಿನ ವಿಶೇಷತೆಯನ್ನು ವರ್ಣಿಸುತ್ತಾರೆ. "ಇದು

ಸಾಮಾನ್ಯದ ಹೂವಲ್ಲ. ಸಮುದ್ರಮಥನದ ಸಮಯದಲ್ಲಿ ಸಿಕ್ಕ ಪಾರಿಜಾತ ಗಿಡ ಇಂದ್ರನ ಪಾಲಾಗಿ ಸ್ವರ್ಗಲೋಕ ಸೇರುತ್ತದೆ. ಮೂರೂ ಲೋಕಕ್ಕೆ ಇದೊಂದೇ ಪಾರಿಜಾತ ಗಿಡ. ರುಕ್ಮಿಣಿದೇವಿ, ಇದರ ಹೂವು ನಿನ್ನ ಮುಡಿಗೆ ಏರಿದೆ ಎಂದರೆ ಕೃಷ್ಣನ ಪತ್ನಿಯರಲ್ಲಿ ಇದನ್ನು ಮುಡಿಯಲು ನೀನೇ ಅರ್ಹಳೆಂದು ತಿಳಿದುಕೋ" ಎನ್ನುತ್ತಾರೆ. ಅಲ್ಲೇ ಪಕ್ಕದಲ್ಲಿ ನಿಂತಿದ್ದ ಕೃಷ್ಣನ ಮತ್ತೊಬ್ಬಳು ಪತ್ನಿ ಸತ್ಯಭಾಮೆಯ ಸಖಿಯ ಕಿವಿಗೆ ನಾರದರ ಮಾತು ಬೀಳುತ್ತದೆ, ಅವಳ ಮೂಲಕ ವಿಷಯ ಸತ್ಯಭಾಮೆಗೆ ತಿಳಿಯುತ್ತದೆ.

ಸತ್ಯಭಾಮೆಗೆ ಕೋಪಬಂದು ತನ್ನ ಬಣ್ಣದ ವಸ್ತ್ರಗಳನ್ನು ಕಳಚಿ ಬಿಳಿ ವಸ್ತ್ರ ತೊಟ್ಟು ಕೋಪಗೃಹಕ್ಕೆ ತೆರಳುತ್ತಾಳೆ. ಸತ್ಯಭಾಮೆಯ ಕೋಪಕ್ಕೆ ಕಾರಣವನ್ನು ತಿಳಿದುಕೊಂಡು ಕೃಷ್ಣ ಅವಳಿಗೆ ಪಾರಿಜಾತ ಗಿಡವನ್ನೇ ಸ್ವರ್ಗದಿಂದ ತಂದುಕೊಡುವುದಾಗಿ ತಿಳಿಸುತ್ತಾನೆ.

ತಾನು ಹಿಂದೆ ಇಂದ್ರನಿಗೆ ಒಂದೆರೆಡು ಸಲ ಸಹಾಯ ಮಾಡಿದ್ದರಿಂದ ಇಂದ್ರನು ತಾನು ಕೇಳಿದ ತಕ್ಷಣ ಪಾರಿಜಾತ ನೀಡುತ್ತಾನೆಂಬುದು ಕೃಷ್ಣನ ನಂಬಿಕೆ. ಆದರೆ ಹಾಗಾಗುವುದಿಲ್ಲ. ಏಕೆಂದರ ಪಾರಿಜಾತ ಗಿಡ ಇಂದ್ರನ ಹೆಂಡತಿ ಶಚಿ ದೇವಿಗೆ ಪ್ರೀತಿಯದ್ದಾಗಿರುತ್ತದೆ. ಇಂದ್ರನೊಡನೆ ಹೋರಾಡಿ ಪಾರಿಜಾತ ಗಿಡ ತರುವಲ್ಲಿಗೆ ಕಥೆ ಮುಕ್ತಾಯವಾಗುತ್ತದೆ.

ಈ ಕಥೆಯನ್ನು ರುದ್ರಭಟ್ಟನು ಇನ್ನೂ ಸ್ವಾರಸ್ಯವಾಗಿ ನೀಡಿರುವ ಕೆಲವು ಅಂಶಗಳನ್ನು ಮತ್ತು ಪಾತ್ರಗಳ ವಿಸ್ತಾರವನ್ನು ನಾವು ಗಮನಿಸಲೇಬೇಕು.

ಮೊದಲನೆಯದಾಗಿ ನಾರದನ ಪಾತ್ರ.

ನಾರದನು ಕೃಷ್ಣನಿಗೆ ಸ್ವರ್ಗದ ಕಾರ್ಯಕ್ರಮಕ್ಕೆ ಆಹ್ವಾನ ನೀಡಲು ಹೋದಾಗ ಅಲ್ಲಿ ಸತ್ಯಭಾಮೆಯ ಸಖಿ ಇರುವುದನ್ನು ಖಾತ್ರಿಪಡಿಸಿಕೊಂಡೇ ಕಲಹ ಆರಂಭವಾಗಲೆಂದೇ ರುಕ್ಮಿಣಿಯನ್ನು ಹಾಗೂ ಪಾರಿಜಾತವನ್ನು ಹೊಗಳಿರುತ್ತಾನೆ. ಮುಂದೆ ಕೃಷ್ಣನು ಪಾರಿಜಾತ ಗಿಡವನ್ನು ಸತ್ಯಭಾಮೆಗೆ ತಂದುಕೊಡುವುದಾಗಿ ತಿಳಿಸಿದ ನಂತರ ನಾರದನನ್ನು ಭೇಟಿ ಮಾಡುತ್ತಾನೆ ಮತ್ತು ತನಗಾಗಿರುವ ತೊಂದರೆಯನ್ನು ನಾರದರಿಗೆ ತಿಳಿಸುವ ಆ ದೃಶ್ಯ ತುಂಬಾ ಚೆನ್ನಾಗಿದೆ.

"ನೋಡು ನಾರದ, ಅವತ್ತು ನೀನು ಪಾರಿಜಾತ ತಂದುಕೊಟ್ಟೆಯಲ್ಲಾ, ನಾನು ರುಕ್ಮಿಣಿಗೆ ಮುಡಿದುಕೊಳ್ಳಲು ಕೊಟ್ಟನೆಲ್ಲಾ" ಅಂತಾ ನಾರದರಿಗೆ ಏನೂ ವಿಷಯವೇ ಗೊತ್ತಿಲ್ಲವೇನೋ ಎಂಬಂತೆ ವರ್ಣಿಸುತ್ತಾನೆ. ನಾರದರೂ ಹಾಗೆಯೇ ನಟಿಸುತ್ತಾರೆ.

ಕಾವ್ಯದಲ್ಲಿ ಇನ್ನೊಂದು ಕಡೆ ಸ್ವರ್ಗಲೋಕದಲ್ಲಿ ಪಾರಿಜಾತ ಕಳ್ಳತನವಾಗಿದೆ. ಕೃಷ್ಣ ಇಂದ್ರನೊಡನೆ ಯುದ್ಧ ಮಾಡಲು ಸಿದ್ಧನಾಗಿದ್ದಾನೆ. ಆಗ ದೇವತೆಗಳ ಗುರುಗಳಾದ ಬೃಹಸ್ಪತಿಯು "ಕೃಷ್ಣನೋ ಮೊದಲೇ ಪುಂಡ, ಎಲ್ಲರಿಗಿಂತ ಶಕ್ತಿವಂತನೆಂಬುದು ಗೊತ್ತೇ ಇದೆ. ಅವನೊಡನೆ ಹೋರಾಡುವುದಕ್ಕಿಂತ ಸುಮ್ಮನೆ ಪಾರಿಜಾತ ಗಿಡವನ್ನು ತೆಗೆದುಕೊಂಡು ಹೋಗಲು ಬಿಟ್ಟುಬಿಡುವುದು ಒಳ್ಳೆಯದು" ಎಂದು ಸೂಚಿಸುತ್ತಾನೆ. ಇಂದ್ರನಿಗೂ ಇದು ಸರಿ ಇರಬಹುದು ಅನಿಸುತ್ತೆ.

ಆದರೆ ನಮ್ಮ ನಾರದರು ಬಿಡಬೇಕಲ್ಲ. ಇಂದ್ರ ಮತ್ತು ಕೃಷ್ಣರಿಗೆ ಯುದ್ಧ ಮಾಡಿಸಲೇಬೇಕೆಂದು ಅವರು ತೀರ್ಮಾನಿಸಿಯಾಗಿದೆ. ಹಾಗಾಗಿ ನಾರದರ ಮಾತುಗಳನ್ನು ರುದ್ರಭಟ್ಟನು ಹೀಗೆ ಬರೆಯುತ್ತಾನೆ. "ಅಲ್ಲ, ಸ್ವರ್ಗ ಬೆಳಗುತ್ತಿರುವುದೇ ಎರಡು ವಿಷಯಗಳಿಂದ, ಒಂದು ಪಾರಿಜಾತ ಮತ್ತೊಂದು ಇಂದ್ರನ ಹೆಂಡತಿ ಶಚಿದೇವಿ, ಇಂದು ಯಾರೋ ಮುಂಡ ಬಂದು ಪಾರಿಜಾತ ಗಿಡ ತೆಗೆದುಕೊಂಡು ಹೋದ ಎಂದು ನಾವು ಸುಮ್ಮನಾದರೆ, ನಾಳೆ ಮತ್ತೊಬ್ಬ ಮುಂಡ ಬಂದು ಶಚಿದೇವಿಯನ್ನು ಕದ್ದೊಯ್ಯುತ್ತಾನಷ್ಟೆ" ಎಂದು. ಈ ಮಾತುಗಳಿಂದ ಇಂದ್ರನು ಯುದ್ಧ ಮಾಡುವ ನಿರ್ಧಾರವನ್ನು ತೆಗೆದುಕೊಳ್ಳುತ್ತಾನೆ.

ನಾರದರಿಗಾದರೂ ಯುದ್ಧ ಏಕೆ ಬೇಕು ಎಂದು ನಿಮಗೆ ಅನಿಸಿರಬಹುದಲ್ಲವೇ. ಯಾವುದೇ ವಿಷ್ಣುವಿನ ಅವತಾರ ಭೂಮಿಯಲ್ಲಿ ಆದಾಗ ಆ ಅವತಾರಕ್ಕೆ ಹೆಚ್ಚು ಪ್ರಾಮುಖ್ಯತೆ ಮತ್ತು ಪ್ರಖ್ಯಾತಿಯನ್ನು ತರುವುದು ನಾರದರ ಕರ್ತವ್ಯವಾಗಿರುತ್ತದೆ.

ಅದೇ ಸಂದರ್ಭದಲ್ಲಿ ನಾರದರು ಶಚಿದೇವಿಗೆ ಹೇಳುವ ಮಾತು ಸ್ವಾರಸ್ಯಕರವಾಗಿದೆ. "ಅಲ್ಲಮ್ಮಾ ಶಚಿದೇವಿ, ನೀನು ಯಾವುದಕ್ಕೂ ಉಪಯೋಗವಿಲ್ಲ. ಆ ಸತ್ಯಭಾಮೆಯನ್ನು ನೋಡಿ ಕಲಿ. ಅವಳು ಕೋಪಿಸಿಕೊಂಡಳು, ಕೃಷ್ಣನ ಶಕ್ತಿ ದ್ವಿಗುಣವಾಯಿತು, ಸ್ವರ್ಗದ ಪಾರಿಜಾತ ಗಿಡವನ್ನೇ ತೆಗೆದುಕೊಂಡು ಹೋಗುವಂತಾದ, ಆದರೆ ನೀನು ಇಂದ್ರನ ಮುಂದೆ ನಿಂತೆ, ಇಂದ್ರನಲ್ಲಿದ್ದ ಶಕ್ತಿಯೆಲ್ಲಾ ಹೊರಟೇ ಹೋಗಿ ಇಂದ್ರನು ಯುದ್ಧ ಬೇಡವೆಂದುಕೊಂಡಿದ್ದಾನೆ' ಎಂದು.

ಈ ಪ್ರಸಂಗದ ಇನ್ನೊಂದು ವಿಶೇಷ ಸನ್ನಿವೇಶವೆಂದರೆ ಸತ್ಯಭಾಮೆ ಮತ್ತು ಶಚಿದೇವಿಯ ಸಂವಾದ. ಒಂದೆಡೆ ಇಂದ್ರ ಕೃಷ್ಣನಿಂದ ಸೋಲುತ್ತಿದ್ದರೆ ಮತ್ತೊಂದೆಡೆ ಸತ್ಯಭಾಮೆ ತನ್ನ ಮಾತಿನ ಹೊಡೆತಗಳನ್ನು ಶಚಿದೇವಿಗೆ ನೀಡುತ್ತಿರುತ್ತಾಳೆ. ರುದ್ರಭಟ್ಟನ ಕಾವ್ಯದಲ್ಲಿ ಸತ್ಯಭಾಮೆ ಹೇಳುತ್ತಾಳೆ '''ನಿನ್ನ ಗಂಡ ಇಂದ್ರನು ಹೆಚ್ಚೇನೂ ಕೊಟ್ಟಿಲ್ಲ ಬಿಡು, ಪಾರಿಜಾತ ಅವನಲ್ಲಿತ್ತು, ಕೊಟ್ಟ, ಆದರೆ ನನ್ನ ಗಂಡ ಕೃಷ್ಣ ತನ್ನಲ್ಲಿಲ್ಲದ ಸೋಲನ್ನು ನಿನ್ನ ಗಂಡನಿಗೆ ಕೊಟ್ಟಿದ್ದಾನೆ" ಅದಕ್ಕೆ ಶಚಿ ದೇವಿಯ ಉತ್ತರ. "ನಿನ್ನ ಗಂಡನಿಗೆ ಎರಡು ಕಣ್ಣು ಮಾತ್ರ, ನನ್ನ ಗಂಡನಿಗೆ ಸಾವಿರ ಕಣ್ಣುಗಳಿವೆ" ಎಂದು ಹೇಳಿದಾಗ ಸತ್ಯಭಾಮೆ "ನಾಚಿಕೆಯಾಗಬೇಕು ನಿನಗೆ, ನಿನ್ನ ಗಂಡನಿಗೆ ಶಾಪದಿಂದ ಬಂದ ಸಾವಿರ ಕಣ್ಣುಗಳನ್ನು ಅವನ ಶೌರ್ಯ ಎಂದು ಹೇಳುತ್ತೀಯೆಲ್ಲಾ" ಎಂದಾಗ ಶಚಿದೇವಿ, "ಹೋಗಲಿಬಿಡು, ಕೃಷ್ಣ ಮತ್ತು ಇಂದ್ರ ಯುದ್ಧ ಮಾಡುತ್ತಿದ್ದಾರೆ, ಗೆಲುವು ಸೋಲು ಇದ್ದದ್ದೇ, ಕಾದು ನೋಡೋಣ" ಎಂದಾಗ ಸತ್ಯಭಾಮೆಯ ಉತ್ತರ "ಆಹಾ, ಕೃಷ್ಣ-ಇಂದ್ರ, ಗೆಲುವು-ಸೋಲು. ಕೃಷ್ಣನಿಗೆ ಗೆಲುವು, ಇಂದ್ರನಿಗೆ ಸೋಲು ಎಂದು ನೀನು ಒಪ್ಪಿದಹಾಗಾಯಿತು" ಎನ್ನುತ್ತಾಳೆ.

ಸಾಹಿತ್ಯ ವಿದ್ಯಾರ್ಥಿಯಾಗಿ ಈ ಕಾವ್ಯವನ್ನು ನೋಡಿದರೆ, ಇದರಲ್ಲಿ ಶೇಕಡ 70ರಷ್ಟು ಸಂಸ್ಕೃತ ಪದಗಳನ್ನು ಬಳಸಿದ್ದಾನೆ ರುದ್ರಭಟ್ಟ. ಹಾಗಾಗಿಯೇ ನಮಗೆ ಹಳೆಗನ್ನಡ ಡಿಪ್ಲೊಮೋ ತರಗತಿಯಲ್ಲಿ ಈ ಪಠ್ಯವನ್ನು ಸಂಸ್ಕೃತ ಮತ್ತು ಕನ್ನಡ ಎರಡೂ ಬಲ್ಲ ಡಾ.ಲಕ್ಷ್ಮೀನಾರಾಯಣ ಅವರು ತೆಗೆದುಕೊಂಡಿದ್ದು.

ಆದರೆ ಈ ಕಾವ್ಯವನ್ನು ಓದುತ್ತಿದ್ದರೆ ಕೃಷ್ಣ, ಇಂದ್ರ, ಪಾರಿಜಾತ ಈ ಹೆಸರುಗಳಿಗೆ ಪರ್ಯಾಯ ಪದಗಳನ್ನು ನಾವು ಎಷ್ಟು ಬಳಸಬಹುದೆಂದು ತಿಳಿದುಕೊಳ್ಳಬಹುದು. ಈ 13ನೇ ಆಶ್ವಾಸದಲ್ಲೇ ಸುಮಾರು 16 ಕಡೆ ಕೃಷ್ಣನ ಹೆಸರು ಉಲ್ಲೇಖವಾಗಿದೆ ಆದರೆ ಒಮ್ಮೆ ಬಳಸಿದ ಕೃಷ್ಣನ ಅದೇ ಹೆಸರನ್ನು ಮತ್ತೊಂದು ಕಡೆ ಬಳಸಿಲ್ಲ

***

ಭಿಕ್ಷೆ

– ಸರಸ್ವತಿ ನಟರಾಜ್

ಬೆಳಗಿನಿಂದ ಸಣ್ಣಗೆ ಜಿನುಗುತ್ತಿದ್ದ ಮಳೆಯಿಂದಾಗಿ ಆ ಚಿಕ್ಕ ಮನೆಯೊಳಗೂ ಕತ್ತಲು ತುಂಬಿತ್ತು. ರಾತ್ರಿ ಗಂಡನೊಂದಿಗಾದ ಜಗಳದಿಂದ ಇನ್ನೂ ಮಾಮೂಲಿನ ಸ್ಥಿತಿಗೆ ಬಂದಿರಲಿಲ್ಲ. ಅದಕ್ಕೆ ಸರಿಯಾಗಿ ಮಳೆ. ಮಕ್ಕಳು ಶಾಲೆಗೆ ಹೋಗಿಯಾಗಿತ್ತು. ಎಷ್ಟೇ ಬೇಜಾರಾಗಿದ್ದರೂ ಬೆಳಗ್ಗೆ ಗಂಡನಿಗೆ, ಮಕ್ಕಳಿಗೆ ಊಟ ತಿಂಡಿ ಅಚ್ಚುಕಟ್ಟಾಗಿ ಮಾಡುವುದನ್ನು ಮಾತ್ರ ಎಂದೂ ವನಜಾ ತಪ್ಪಿಸುತ್ತಿರಲಿಲ್ಲ, ಅಡಿಗೆ ಕೆಲಸ ಬೆಳಗ್ಗೆಯೇ ಮುಗಿದಿದೆ. ಅವರೆಲ್ಲರಿಗೆ ಕ್ಯಾರಿಯರ್ ಕಟ್ಟಿ, ತನ್ನ ಪಾಲಿನದನ್ನು ಮುಚ್ಚಿಟ್ಟು, ಸುಮ್ಮನೆ ಕಿಟಕಿಯಾಚೆ ನೋಡುತ್ತಾ ಕುಳಿತಿದ್ದಳು.

ವನಜಳದೂ ಸೇರಿ ಆ ವಠಾರದಲ್ಲಿ ಒಟ್ಟು ಎಂಟು ಮನೆಗಳಿದ್ದವು, ಕೆಳಮದ್ಯಮ ವರ್ಗದವರಿಗಾಗಿ ಕಟ್ಟಿರುವುದು. ಎಲ್ಲವೂ ಒಂದು ಹಾಲ್, ಒಂದು ರೂಮು, ಅಡುಗೆಮನೆ, ಪುಟ್ಟ ಬಚ್ಚಲಿದ್ದ ಮನೆಗಳು, ಚಿಕ್ಕದಾದರೂ ಎಲ್ಲ ಅಚ್ಚುಕಟ್ಟಾಗಿದ್ದ ಮನೆಗಳು, ಎಲ್ಲರೂ ಸಾಧಾರಣ ಕೆಲಸದಲ್ಲಿದ್ದವರು. ನಾಲ್ಕೈದು ಮನೆಗಳಲ್ಲಿ ಒಂದೊ ಎರಡೋ ಮಕ್ಕಳು, ಮಕ್ಕಳು ಹೋಗುತ್ತಿದ್ದುದೂ ಸಮೀಪವೇ ಇದ್ದ ಸರ್ಕಾರಿ ಅನುದಾನದ ಶಾಲೆಗೆ. ಒಬ್ಬರ ಮನೆಯಲ್ಲಿ ಜೋರಾಗಿ ಮಾತಾಡಿದ್ದು ಮತ್ತೊಬ್ಬರ ಮನೆಗೆ ಕೇಳುವಷ್ಟು ಪಕ್ಕಪಕ್ಕವಿದ್ದ ಮನೆಗಳು, ತಿಂಗಳ ಕೊನೆಯಲ್ಲಿ ಒಂದು ಮನೆಯಲ್ಲಿಲ್ಲವಾದರೆ ಇನ್ನೊಂದರಲ್ಲಿ ಅದಿಲ್ಲ. ಇದಿಲ್ಲ ಎಂಬ ರಗಳೆ ಇದ್ದಿದ್ದೇ. ಕಷ್ಟವನ್ನೂ ಅಭ್ಯಾಸ ಮಾಡಿಕೊಂಡು ಬದುಕುವುದು ಗೊತ್ತಿದೆ. ಆದರೂ ಆ ಕಷ್ಟಗಳಲ್ಲಿಯೇ ಸಣ್ಣ ಪುಟ್ಟ ಸಂತೋಷವನ್ನು ಹುಡುಕಿಕೊಳ್ಳುವ ಮನಸ್ಥಿತಿ.

ರಾತ್ರಿ ಶ್ರೀಧರನೊಂದಿಗೆ ಸಣ್ಣದಾಗಿ ಶುರುವಾದ ಜಗಳ ಸ್ವಲ್ಪ ತಾರಕಕ್ಕೇರಿತ್ತು. ಮಕ್ಕಳೊಂದಿಗೆ ಹಬ್ಬಕ್ಕೆ ಊರಿಗೆ ಹೋಗ್ತಿನಿ ಅಂತ ವನಜ. ಅವನು ಈ ಸಲ ಬೇಡ, ಒಂದೆರಡು ದಿನದ ಮಟ್ಟಿಗೆ ಬೇರೆ ಎಲ್ಲಾದರೂ ಟೂರ್ ಹೋಗೋಣ ಅಂತ. ಚೆನ್ನಾಗಿ ಕೈಬಿಚ್ಚಿ ಖರ್ಚು ಮಾಡಲು ಸಾಕಷ್ಟು ಇಲ್ಲದ ಮೇಲೆ ಎಲ್ಲೆಲ್ಲೋ ಹೋಗಲೇಬಾರದು, ಅಪ್ಪನ ಮನೆಗಾದ್ರೆ ಹೋಗೋ ಬಸ್ ಚಾರ್ಜ್ ಮಾತ್ರ ಖರ್ಚು ಅಂತ ಅವಳು. ಅವಳ ಮಾತಿನಿಂದ ಅವನ ಅಭಿಮಾನಕ್ಕೆ ಸ್ವಲ್ಪ ಪೆಟ್ಟಾಗಿದ್ದು ಸಹಜ, ರೇಗಿದ.

"ಹೂ, ನಾನು ದುಡಿದು ನನಗೇಂತ ಏನು ಮಾಡ್ಕೊಂಡಿದೀನಿ ಹೇಳು, ಎಲ್ಲಾ ಮಾಡ್ತಿರೋದು ನಿಮಗೋಸ್ಕರ ತಾನೇ?"

"ನಾನೂ ನನ್ನ ಸ್ವಂತಕ್ಕೆ ಅಂತ ಏನು ಪೀಡಿಸಿದೀನಿ?" ಅಂತ ಅವಳು. ಮಾತಿಗೆ ಮಾತು ಬೆಳೆದು ಅವಳು ಅತ್ತು ಮಲಗಿದಳು, ಅವನು ನಿದ್ರೆಯಿಲ್ಲದೆ ರಾತ್ರಿ ಕಳೆದ, ಬೆಳಗ್ಗೆ ಹೇಗೋ ಬೇಗ ಬೇಗ ಅವಳು ಕ್ಯಾರಿಯರ್ ಸಿದ್ಧ ಮಾಡಿದಳು. ಬರ್ತೀನಿ ಅಂತ ನಿತ್ಯದ ಹಾಗೆ ಹೇಳದೇ ಅವನು ಹೊರಟುಬಿಟ್ಟ. ಅವಳೂ ಪೆಚ್ಚಾದಳು.

ಮಕ್ಕಳೂ ಹೋದ ಮೇಲೆ ಯಾಕೋ ಏನು ಮಾಡುವುದೂ ಬೇಡವೆನಿಸಿ, ಸುಮ್ಮನೆ ಒಂದಿಷ್ಟು ಹೊತ್ತು ಮಲಗಿದಳು. ಜಡಿ ಮಳೆ ಬೇರೆ ಶುರುವಾಗಿತ್ತು. ಒಂದಷ್ಟು ಹೊತ್ತು ಅತ್ತಿತ್ತ ಹೊರಳಾಡಿ ಕಳೆಯುವಾಗ ಮಧ್ಯಾಹ್ನಕ್ಕಿಂತ ಮುಂಚೆಯೇ ಇನ್ನೂ ಬಿಟ್ಟು ಬಿಟ್ಟು ಬರುತ್ತಿರುವ ಮಳೆ ಗೋಳುಕರೆಯಂತೆನಿಸತೊಡಗಿತು.

ಅದೇ ಸಮಯಕ್ಕೆ ಬಾಗಿಲು ಬಡಿದಳು ಆ ಮುದುಕಿ.

ಆ ಬಡ ಮುದುಕಿ ಸಮೀಪದ ಪುಟ್ಟ ಗಣೇಶ ದೇವಸ್ಥಾನದ ಪಾಳಿಯಲ್ಲೇ ಇರುತ್ತಾಳೆ, ಕಸಗಿಸ ಗುಡಿಸಿ, ಬೆಳಗ್ಗೆ ಒಂದಿಷ್ಟು ನೀರು ಹಾಕಿ ರಂಗೋಲೆ ಹಾಕುತ್ತಾಳೆ. ಹೆಚ್ಚುವರಿ ದಿನಗಳಲ್ಲಿ ಯಾರಾದರೂ ಭಕ್ತರು ಪ್ರಸಾದ ಮಾಡಿಸಿದ್ದರೆ

ಅವಳ ಹೊಟ್ಟೆಗೆ ಯೋಚನೆಯಿಲ್ಲ. ತೀರಾ ಚಿಕ್ಕ ದೇವಸ್ಥಾನವಾದ್ದರಿಂದ ಜನ ಬರುವುದೂ ಕಡಿಮೆ, ಅದ್ದೂರಿ ದೇವರುಗಳನ್ನು ತಾನೇ ಜನರೂ ಹುಡುಕಿಕೊಂಡು ಹೋಗುವುದು, ಹಾಗಾಗಿ ದಿನಾ ಅಜ್ಜಿಯ ಹೊಟ್ಟೆಯೇನೂ ತುಂಬುವುದಿಲ್ಲ. ಅಲ್ಲೇ ಚಿಕ್ಕದೊಂದು ಗೂಡಿನಲ್ಲಿ ಒಂದು ಸ್ಟೌವ್, ಒಂದೆರಡು ಪಾತ್ರೆ ಇಟ್ಟುಕೊಂಡಿದ್ದಾಳೆ. ಒಂದೊಂದು ದಿನ ಎರಡು ಹಿಡಿ ಅಕ್ಕಿ ಹಾಕಿ ಅನ್ನವೊಂದನ್ನು ಮಾಡಿಕೊಂಡು, ಕೈಲೊಂದು ಲೋಟ ಹಿಡಿದುಕೊಂಡು ಈ ವಠಾರಕ್ಕೆ ಬರುತ್ತಾಳೆ. ಮೊದಲೆಲ್ಲಾ ಚೆನ್ನಾಗಿ ಬಾಳ ಬದುಕಿದವಳು, ಈಗ ಒಂಟಿಯಾಗಿ ಇದ್ದರೂ ಎಲ್ಲರೊಂದಿಗೆ ವಿಶ್ವಾಸವಾಗಿದ್ದಾಳೆ. ಈ ವಠಾರದಲ್ಲೂ ಎಲ್ಲರ ಜೊತೆಗೂ ಚೆನ್ನಾಗಿದ್ದರೂ ಏನಾದರೂ ಬೇಕಾದರೆ ಬರುತ್ತಿದ್ದುದು ವನಜಳ ಬಳಿ, ಇಲ್ಲ ಕೊನೇ ಮನೆಯ ಗಾಯತ್ರಿಯ ಬಳಿ, ಕಾರಣ ಇವೆರಡೇ ಮನೆಗಳು ಸಸ್ಯಾಹಾರಿಗಳದು. ಅಜ್ಜಿಯೂ ಪೂರ್ತಿ ಸಸ್ಯಾಹಾರಿ, ತೀರಾ ಸಮಯವಾದಾಗ ವನಜಳನ್ನೋ, ಗಾಯತ್ರಿಯನ್ನೋ ಒಂದು ಲೋಟ ಸಾರು ಕೊಡು, ಒಂದು ಲೋಟ ಮಜ್ಜಿಗೆ ಇದ್ರೆ ಕೊಡು ಅನ್ನ ಮಾಡಿಕೊಂಡಿದೀನಿ. ಅಂತ ಕೇಳುತ್ತಾಳೆ.

ಹೆಚ್ಚಿನ ದಿನಗಳಲ್ಲಿ ವನಜ ತನ್ನ ಪಾಲಿನದರಲ್ಲೇ ಏನಾದರೂ ಊಟ ತಂದು ಹಾಕುತ್ತಾಳೆ, ಬೆಳಗಿನ ತಿಂಡಿ ಮಿಕ್ಕಿದ್ದರೆ ಅದೂ ಅವಳ ಪಾತ್ರೆ ಸೇರುತ್ತದೆ, ತೀರಾ, ಊಟ ಮುಗಿದು ಮಾಡಿದ್ದೇನೂ ಇರದ ದಿನ ವನಜ ಪೇಚಾಡಿಕೊಳ್ಳುತ್ತಾಳೆ. 'ಅಯ್ಯೋ ಅಜ್ಜಿ, ಸ್ವಲ್ಪ ಬೇಗ ಬರ್ಬಾರದಿತ್ತಾ? ಬೆಳಗ್ಗೆ ತಿಂಡಿ ತಿಂದಿಲ್ಲ. ಹಾಗಾಗಿ ಹನ್ನೆರಡಕ್ಕೇ ಊಟ ಮಾಡಿಟ್ಟೆ.' ಆಗ ಅಜ್ಜಿಯೇ ಸಮಾಧಾನ ಮಾಡುತ್ತೆ, "ಬಿಡು ತಾಯಿ, ಯಾಕೆ ನೊಂದ್ಕೋತೀಯಾ, ಗಾಯತ್ರಿ ಏನಾದ್ರೂ ಇದ್ರೆ ಕೊಡ್ತಾಳೆ." ವನಜಳ ಕೈಅಡುಗೆ ಅಂದ್ರೆ ಅಜ್ಜಿಗೆ ವಿಶೇಷ ಪ್ರೀತಿ, "ನಿನ್ ಕೈ ಸಾರು ಕುಡಿದ್ರೆ, ಜ್ವರ ಇದ್ರೂ ಬಿಟ್ಹೋಗತ್ತೆ. ರುಚಿ ಕೆಟ್ಟೋದ ನಾಲ್ಗೆಗೆ ಬಾಳ ಚೆನ್ನಾಗಿರುತ್ತೆ" ಅಂತ ಹೊಗಳ್ತರ್ತಾಳೆ.

ಅವಳಿಗೆ ಒಂದು ತುತ್ತು ಕೊಟ್ಟ ದಿನ ವನಜಳಿಗೂ ಏನೋ ಸಮಾಧಾನ. ತೃಪ್ತಿ. ಇದ್ದುದರಲ್ಲಿ ತನ್ನ ಕೈಲಾದ ದಾನ ಮಾಡಿದೆ ಅಂತ ಹೆಮ್ಮೆ, ಅವಳು ಹೊಗಳಿದಾಗ ಸಹಜವಾಗಿ ಸಂತೋಷ.

ಇವತ್ತು ವಠಾರವೆಲ್ಲಾ ಬಿಕೋ ಅಂತಿದೆ. ಎರಡು ಮನೆಯವರು ಊರಿಗೆ ಹೋಗಿದ್ದಾರೆ. ಉಳಿದ ನಾಲ್ಕು ಮನೆಯವರೂ ಸಮೀಪದ ಥಿಯೇಟರಿಗೆ ಮ್ಯಾಟಿನಿ ನೋಡಲು ಹೋಗಿದ್ದಾರೆ. ವನಜಳನ್ನೂ ಕರೆದಿದ್ದರು. ಆದರೆ, ವನಜ ಎಲ್ಲಿ ಹೋಗುವುದಿದ್ದರೂ ತನ್ನ ಗಂಡ ಮಕ್ಕಳ ಜೊತೆ ಮಾತ್ರ ಅಂತ ಗೊತ್ತಿದ್ದರೂ ವಾಡಿಕೆಯಂತೆ ಕರೆದಿದ್ದರು. ಹಾಗಾಗಿ ಇಡೀ ವಠಾರ ಬಿಕೋ ಅನ್ನುತ್ತಿದೆ. ಯಾರ ಮನೆಯಲ್ಲೂ ಟಿ.ವಿ. ರೇಡಿಯೋ ಗಲಾಟೆ ಕೇಳುತ್ತಿಲ್ಲ. ಮಳೆ ಸುರಿಯುತ್ತಿರೋದರಿಂದ ಎಂದಿನ ತರಕಾರಿ, ಸೊಪ್ಪು, ಹೂವು ಹಣ್ಣುಗಳ ಗಾಡಿ ವ್ಯಾಪಾರವೂ ಇಲ್ಲ. ಎಲ್ಲ ಒಂದಕ್ಕೊಂದು ತಾಳೆಯಾದಂತಾಗಿ ವನಜಳ ಒಳಗಿನ ದುಗುಡವೇ ಹೊರಗೂ ವ್ಯಾಪಿಸಿರುವಂತೆ ಕಾಣುವ ಆ ಹೊತ್ತಿನಲ್ಲೇ ಆ ಅಜ್ಜಿ ಬಂದಳು.

“ಅಮ್ಮಾ, ಅನ್ನ ಇದೆ. ಸ್ವಲ್ಪ ಸಾರೋ ಉಪ್ಪಿನಕಾಯೋ ಕೊಡ್ತೀಯಾಮ್ಮಾ, ಚಳಿ, ಮಜ್ಜಿಗೇಲಿ ತಿನ್ನೋಕೆ ಬೇಜಾರು.” ವನಜ ಸುಮ್ಮನಿದ್ದಳು. ಅವಳಿಗೆ ಮಾತಾಡಬೇಕೆನಿಸಲಿಲ್ಲ.

“ಅಮ್ಮಾ, ವನಜಾ”

“………”

"ಮನೇಲಿದೀಯೋ ಇಲ್ವೋ? ಹುಶಾರಾಗಿದೀಯಾ?

ಮತ್ತೂ ಸುಮ್ಮನಿದ್ದಳು ವನಜ. ಅಷ್ಟಕ್ಕೇ ಸುಮ್ಮನಾಗದೇ ಆ ಅಜ್ಜಿ ಬಾಗಿಲು ತಟ್ಟುತ್ತಾ "ಮಲಗಿದ್ಯಾ? ಒಂದ್ಲೋಟ ಸಾರಿದ್ರೆ ಬೇಕಾಗಿತ್ತು"

ಆ ಚಿಕ್ಕ ಮನೆಯಲ್ಲಿ ಹೊರಗಿನ ಚಿಕ್ಕ ಶಬ್ದಗಳೂ ಕೇಳುವಾಗ ಅಜ್ಜಿಯ ಕರೆ ಕೇಳದಿರಲು ಸಾಧ್ಯವೇ ಇರಲಿಲ್ಲ. ವನಜಳಿಗೆ ರೇಗಿತು.

"ಸುಮ್ಮನೆ ಯಾಕ್ ತೊಂದ್ರೆ ಕೊಡ್ತೀ ಹೋಗಜ್ಜಿ. ನಾನು ಮಲ್ಗಿದೀನಿ.. ಇವತ್ತೇನೂ ಕೊಡಕ್ಕಿಲ್ಲ."

ಒಳಗೆ ಅನ್ನ ಇತ್ತು. ರಾತ್ರಿಗೂ ಆಗುವಷ್ಟು ಹುಳಿ ಇತ್ತು. ಚಪಾತಿಗೆ ನೆಂಚಿಕೊಳ್ಳಲು ಮಾಡಿದ್ದ ಪಲ್ಯವೂ ಇತ್ತು, ಒಂದು ಲೋಟ ಹುಳಿ, ಎರಡು ಚಮಚ ಪಲ್ಯ ಕೊಟ್ಟಿದ್ದರೆ ಅಜ್ಜಿಯ ಇಂದಿನ ಕತೆ ಕಳೆಯುತ್ತಿತ್ತು. ಉಹೂ, ಅವಳು ಹಟ ಹಿಡಿದವಳಂತೆ ಕುಳಿತೇ ಇದ್ದಳು.

“ಹೋಗಜ್ಜೀ, ನಾನೊಬ್ಬೇನಾ ನಿಂಗೆ ಕೇಳಕ್ಕೆ ಸಿಕ್ಕಿರೋಳು. ಹೋಗಿ ಎಲ್ಲಾದ್ರೂ ಕೇಳು. ಇವತ್ತೇನೂ ಇಲ್ಲ.” ಬಾಗಿಲೂ ತೆರೆಯದೇ ಹೇಳಿಬಿಟ್ಟಳು.

"ಹೋಗ್ಲಿ ಬಿಡಮ್ಮಾ, ಮಲಕ್ಕೋ." ಇವತ್ಯಾಕೋ ವನಜಳ ಮನಸ್ಸು ಸರಿಯಿಲ್ಲ, ಇಲ್ಲಾಂದ್ರೆ ಕೊಟ್ಟಿರೋಳು ಅಂತ ತನ್ನಷ್ಟಕ್ಕೇ ಮಾತಾಡಿಕೊಳ್ಳುತ್ತಾ "ಏನೂ ಬೇಡ, ಯಾರನ್ನೂ ಕೇಳೋದು ಬೇಡ. ಮಜ್ಜಿಗೆ ಇದ್ದೇ ಇದೆ. ಅದೇ ತಿಂದ್ರಾಯ್ತು" ಅಂದುಕೊಳ್ಳುತ್ತಾ ಆ ಅಜ್ಜಿ ಹೊರಟುಹೋಗಿದ್ದು ಗೊತ್ತಾಯಿತು.

ತಾನು ಜೋರು ಮಾಡಬಾರದಿತ್ತು- ಅವಳಿಗೆ ಚುರ್ ಅನ್ನತೊಡಗಿತು. ಆದರೆ ಎದ್ದು ಹೋಗಿ ಅವಳನ್ನು ಕರೆಯುವುದೇ, ಕರೆದು ಏನಾದರೂ ಕೊಡುವುದೇ, ನಾನು ರೇಗಿದ್ದಕ್ಕೆ ಏನೂ ಬೇಜಾರು ಮಾಡ್ಕೊಬೇಡ ಎನ್ನಲೇ? ಎಲ್ಲ ಕುಳಿತಲ್ಲೇ ಯೋಚಿಸಿದಳೇ ವಿನಃ ಏಳಬೇಕೆನಿಸಲಿಲ್ಲ. ಎದ್ದು ಊಟ ಮಾಡಬೇಕು ಅಂತಲೂ ಅನಿಸಲಿಲ್ಲ. ಬೆಳಗ್ಗೆ ತಿಂದ ಚಪಾತಿಯೇ ಇನ್ನೂ ಅರಗಿರಲಿಲ್ಲ. ಕೂತಲ್ಲೇ ಕೂತು ಊಟ ಬೇಕೆನಿಸುತ್ತಿಲ್ಲ ಎಂದುಕೊಂಡಳು.

ಮಳೆ ಸ್ವಲ್ಪ ನಿಂತಿತ್ತು. ಏಳೋಣ. ಬಚ್ಚಲಲ್ಲಿ ಹಾಕಿದ ಪಾತ್ರೆ ತೊಳೆಯಬೇಕು, ಬಟ್ಟೆ ಒಗೆಯಬೇಕು, ಈ ಮಳೇಲಿ ಬೇಗ ಒಣಗುವುದೂ ಇಲ್ಲ ಎಂದುಕೊಳ್ಳುತ್ತಾ ಇಷ್ಟು ಹೊತ್ತು ಕೂತಿದ್ದಾಯ್ತು, ಒಂದಿಷ್ಟು ಕೆಲಸವನ್ನಾದರೂ ಮಾಡೋಣ ಎಂದುಕೊಳ್ಳುತ್ತಿದ್ದಂತೆ ಬಾಗಿಲು ತಟ್ಟಿದ ಶಬ್ದವಾಯಿತು. ಅರೆ ಅಜ್ಜಿ ಮತ್ತೆ ಬಂದಳೇನೋ, ಆದರೆ ಆಗಲೇ ಅವಳು ಹೊರಟುಹೋದಳಲ್ಲ.

ಎದ್ದು ಬಾಗಿಲು ತೆಗೆದವಳು, ಅಚ್ಚರಿಯಿಂದ ನಿಂತಳು.

ಶ್ರೀಧರ ಬಂದಿದ್ದ,

ಆರೆ ಇದೇನಿದು, ಸಂಜೆ ಆರರ ವೇಳೆ ಬರಬೇಕಿದ್ದ ಗಂಡ ಇವತ್ತು ಹತ್ತು ಗಂಟೆಗೇ ಬಂದಿದ್ದಾನಲ್ಲಾ ಹುಶಾರಾಗಿದ್ದಾರೆ ತಾನೇ? ರಾತ್ರಿ ತನ್ನದೂ ಅತಿಯಾಯಿತು, ತಾನು ದುಡುಕಿ ಮಾತಾಡಬಾರದಿತ್ತು, ಅವಳ ಮನಸ್ಸಿನಲ್ಲಿ ಒಂದಾದ ಮೇಲೆ ಒಂದರಂತೆ, ಯೋಚನೆಗಳು ದಾಳಿ ಇಡುತ್ತಿದ್ದವು. ಶ್ರೀಧರ ಪೆಚ್ಚಾಗಿದ್ದ. ಒಳಗೆ ಬಂದು ಧೊಪ್ ಎಂದು ಕುಳಿತ.

"ಏನಾಯ್ತು ರೀ, ಹುಶಾರಾಗಿದೀರಿ ತಾನೇ?" ಆತಂಕದಿಂದ ಪ್ರಶ್ನಿಸಿದಳು.

"ನಿಂದು ಊಟ ಆಯ್ತಾ? ಬೆಳಗ್ಗೆಯಿಂದ ಹೀಗೇ ಕೂತಿದೀಯಾ? ತಲೇನೂ ಬಾಚಿಕೊಂಡಿಲ್ಲ."

"ಇನ್ನೂ ಆಗಿಲ್ಲ. ಹೀಗೇ ಕೂತಿದ್ದೆ, ನೀವೇನು ಇಷ್ಟು ಬೇಗ?"

"ಊಟ ಮಾಡು, ವನಜ."

"ನಂಗೆ ಹಸಿವಿಲ್ಲ." ಅವಳು ಬಿಗುವಿನಿಂದ ಉತ್ತರಿಸಿದಳು.

"ನನ್ನ ಮಾತು ಕೇಳು, ಊಟ ಮಾಡು. ನಾವು ಹೊರಡಬೇಕು, ಒಂದೆರಡು ಜೊತೆ ಬಟ್ಟೆ ಹಾಕ್ಕೋ, ನಾನು ಮಕ್ಕನ್ನ ಕಕ್ಕೊಂಡು ಬರ್ತೀನಿ, ಏಳು, ಮಾಡು."

"ಊರಿಗಾ? ಯಾವೂರಿಗೆ? ಯಾಕೆ ಏನು ಹೇಳ್ತಿದೀರಾ?"

"ಸ್ವಲ್ಪ ಸಮಾಧಾನವಾಗಿ ಕೇಳಸ್ಕೋ. ನಿಮ್ಮ ತಂದೆಗೆ ಹುಶಾರಿಲ್ಲ ಅಂತ ಫ್ಯಾಕ್ಟರಿಗೆ ಫೋನ್ ಬಂದಿತ್ತು. ತಕ್ಷಣ ರಜ ಹಾಕಿ ಬಂದೆ. ನೀನು ಊಟ ಮಾಡಿ ರೆಡಿಯಾಗು. ಊರಿಗೆ ಹೋಗೋ ಹೊತ್ತಿಗೆ ಲೇಟ್ ಆಗುತ್ತೆ" ಅವನು ಗಂಭೀರವಾಗಿ ಹೇಳುತ್ತಾ ಬೀರುವಿನ ಮೇಲಿಟ್ಟಿದ್ದ ಏರ್ ಬ್ಯಾಗ್ ತೆಗೆದ.

"ಅಪ್ಪಂಗೆ ಹುಶಾರಿಲ್ವಾ? ನಿಜ ಹೇಳಿ? ಏನಾಗಿದೆಯಂತೆ?" ಅವಳು ಗಾಬರಿಯಿಂದ ಕೇಳಿದಾಗ ಅವನು ವಿಧಿಯಿಲ್ಲದೇ ಹೇಳಲೇಬೇಕಾಯಿತು.

"ಮಾವ ಬೆಳಗ್ಗೆ ತೀರಿಕೊಂಡರಂತೆ, ನೀನೀಗ ಧೈರ್ಯ ತೊಗೊಂಡು ರೆಡಿಯಾಗು. ಸ್ವಲ್ಪ ಊಟ ಮಾಡು ವನಜ, ಬೆಳಗ್ಗೇನೂ ಏನೂ ತಿಂದಹಾಗಿಲ್ಲ." ಅವನು ಹಿಂಜರಿಯುತ್ತಲೇ ಹೇಳಿದ. ಅವಳು ಹೋ ಎಂದು ಅಳಲಾರಂಭಿಸಿದಳು.

ಅವನೇ ಬೇಗ ಬೇಗ ಪ್ಯಾಕ್ ಮಾಡಿದ. ಅವಳು ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಅಳುತ್ತಲೇ, "ಅಪ್ಪ ಸತ್ತಿದಾರೆ, ಸಾವಿನ ಸುದ್ದಿ ಹೇಳದೇ ಊಟ ಮಾಡು ಊಟ ಮಾಡು ಅಂತಿದೀರಲ್ಲ. ನನ್ನ ಗಂಟಲಲ್ಲಿ ಅನ್ನ ಇಳಿಯುತ್ತಾ?"

"ಬೇಜಾರು ಮಾಡಿಕೋಬೇಡ ವನಜಾ, ಸರಿ, ಅಡಿಗೆ ಮನೇಲಿರೋ ಅಡಿಗೆ ಪಾತ್ರೆ, ಹಾಳಾಗುವಂತದೆಲ್ಲಾ ಹಾಲು ಮೊಸರು ಎಲ್ಲಾ ಖಾಲಿ ಮಾಡಿಬಿಡ್ತೀನಿ. ನಾವು ಬರೋದು ಎರಡು ಮೂರು ದಿನವಾಗುತ್ತೇನೋ ಅಥವಾ ಇನ್ನೂ ಜಾಸ್ತಿ ಆಗುತ್ತೋ, ಏಳು ನೀನೂ ಬಾ." ಅವಳು ಆಳುತ್ತಲೇ ಪಾತ್ರೆ ಭರ್ತಿಯಿದ್ದ ಹುಳಿ ಪಲ್ಯ ಅನ್ನ ಎಲ್ಲವನ್ನೂ ವಠಾರದಾಚೆಯಿದ್ದ ತೊಟ್ಟಿಗೆ ಸುರಿದಳು. ಅದೇ ಸಮಯಕ್ಕೆ ದೇವಸ್ಥಾನದ ಪಾಳಿಯ ಆಚೆ ಆ ಮುದುಕಿ ತನ್ನತಟ್ಟೆಯನ್ನು ತೊಳೆಯುತ್ತ ನಿಂತಿದ್ದನ್ನು ಕಂಡಳು.

ಅಲ್ಲಿಂದಾಚೆ ಅಜ್ಜಿಯನ್ನು ನೋಡಿದಾಗಲೆಲ್ಲಾ ಆ ದಿನದ ನೆನಪು. ಮುಂದೆ ಒಂದು ದಿನವೂ ಅವಳನ್ನು ಖಾಲಿ ಕೈಯಿಂದ ಕಳಿಸದಾದಳು ವನಜಾ.

***

ಮಕ್ಕಳ ಕತೆಗಳು

– ವಿಠ್ಠಲ್ ಇಜೇರಿ

ನಮ್ಮ ಮನಸ್ಸೇ ಹೀಗೆ, ಈಗಿನ ವೇಗದ ಯುಗದಲ್ಲೂ ಸ್ವಲ್ಪ ಅವಕಾಶ ದೊರೆತರೂ ನಾವು, ನಾವಷ್ಟೇ ಏಕೆ ಎಲ್ಲರೂ ಬಾಲ್ಯಕ್ಕೆ ಹೋಗಿ ಬಿಡುತ್ತೇವೆ. ಆ ನೆನಪುಗಳನ್ನೆಲ್ಲ ಮೆಲುಕು ಹಾಕಿ ಮತ್ತೆ ವರ್ತಮಾನಕ್ಕೆ ಒಂದಿಷ್ಟು ಸಮಾಧಾನ ಮತ್ತು ಸಂತೋಷದಿಂದ ಮರಳುತ್ತೇವೆ. ಆ ದಿನಗಳ ಸೊಬಗೇ ಅಂತಹದು. ಆ ದಿನಗಳಲ್ಲಿ ಕಲಿತ ಹಾಡುಗಳು ಮತ್ತು ಕತೆಗಳು ಬಹು ದಿನಗಳ ಸಿಹಿ ಬುತ್ತಿಗಳು.

ಮಕ್ಕಳ ಕತೆಗಳಲ್ಲಿ ಪ್ರೀತಿ, ವೈವಿಧ್ಯತೆ, ಪರಿಣಾಮ, ಮನರಂಜನೆ, ಹೇರಳವಾಗಿರುತ್ತವೆ. ಮಕ್ಕಳ ಕತೆಗಳ ಉದ್ದೇಶ ಅವರ ಮನಸ್ಸಿನ ಸಂತೋಷ ಮತ್ತು ನೈತಿಕ ನೆಲೆಗಟ್ಟಿಗೆ ಬೀಜ ಬಿತ್ತುವುದು. ಹೆಚ್ಚಿನ ಕತೆಗಳು ಮಕ್ಕಳ ಜ್ಞಾನ ಭಂಡಾರಕ್ಕೆ ಏನನ್ನೂ ಸೇರಿಸದಿದ್ದರೂ ಮಕ್ಕಳ ಮನಸ್ಸಿನ ಮೇಲೆ ಆಗುವ ಧನಾತ್ಮಕ ಪರಿಣಾಮ ಬೆಲೆ ಕಟ್ಟಲಾರದಷ್ಟು. ಮಕ್ಕಳು ಕತೆ ಕೇಳುವುದರಿಂದ ಉಂಟಾಗುವ ಆನಂದವು ಮಕ್ಕಳ ಆತ್ಮ ಶಕ್ತಿಯನ್ನು ವೃದ್ಧಿಸುತ್ತದೆ ಮತ್ತು ಭಾವ ಶಕ್ತಿಯನ್ನು ವಿಸ್ತೃತಗೊಳಸುತ್ತದೆ. ಅವರ ಪ್ರೀತಿ, ಸಹಾನುಭೂತಿಗಳ ಕ್ಷೇತ್ರವನ್ನೂ ವಿಸ್ತರಿಸುವುದು. ಶಾಲೆಗಳಲ್ಲಿ ಕತೆ ಹೇಳುವ ಪರಿಪಾಠವಿದ್ದರೆ ಅಲ್ಲಿ ಕೃತ್ರಿಮ ವಾತಾವರಣಕ್ಕೆ ಅವಕಾಶವಿರುವುದಿಲ್ಲ, ಸಹಜ, ಸಾಮಾನ್ಯ ವಾತಾವರಣ ಇರುತ್ತದೆ ಮತ್ತು ಗುರು-ಶಿಷ್ಯರ ಸಂಬಂಧಗಳು ಉತ್ತಮಗೊಳ್ಳುತ್ತವೆ. ಮಕ್ಕಳ ಕತೆಗಳು ಸಂದೇಶವಾಹಕಗಳು, ಕತೆಯ ಕತೆ ಹೇಳುವವರು ಅವರಿಗೆ ಅರಿವಿಲ್ಲದಂತೆ ಮಕ್ಕಳಿಗೆ ಸದ್ಗುಣಗಳ ಸಂದೇಶಗಳನ್ನು ರವಾನಿಸುತ್ತಾರೆ. ನಮ್ಮ ಪರಂಪರೆಯಲ್ಲಿ ರಾಮಾಯಣ ಮತ್ತು ಮಹಾಭಾರತದಲ್ಲಿ ಸಾಕಷ್ಟು ಉಪಕತೆಗಳು ಇದ್ದು ಅವು ಮನರಂಜನೆಯೊಡನೆ ನೀತಿ, ನೈರ್ಮಲ್ಯಗಳ ಪಾಠವನ್ನೂ ನೀಡುತ್ತವೆ. ಈ ಹಿನ್ನೆಲೆಯಲ್ಲಿ ಮಹಾಭಾರತದ ಒಂದು ಚಿಕ್ಕ ಕಥೆಯನ್ನು ನೋಡೋಣ.

ಒಂದು ದಿನ ದುರ್ವಾಸ ಮುನಿಗಳು ಅಭಿಮನ್ಯುವಿನ ಅರಮನೆಗೆ ಬಂದರು. ಆಗ ಪಾಂಡವರಾಗಲಿ, ಅಭಿಮನ್ಯುವೆ ಆಗಲಿ ಇರಲಿಲ್ಲ. ಅಭಿಮನ್ಯುವಿನ ಪತ್ನಿ ವತ್ಸಲೆ ಮಾತ್ರ ಇದ್ದಳು. ಆಕೆಗೆ ದುರ್ವಾಸರ ಕೋಪದ ಬಗ್ಗೆ ಗೊತ್ತು. ಆದುದರಿಂದ ತುಂಬಾ ಗೌರವ ಮತ್ತು ಭಯ, ಭಕ್ತಿಯಿಂದ ಅವರ ಸೇವೆ ಮಾಡಿದಳು. ಆಕೆಯ ನಯ, ವಿನಯ, ಗುರು ಹಿರಿಯರ ಬಗ್ಗೆ ಇರುವ ಭಕ್ತಿಯಿಂದ ಪ್ರಸನ್ನರಾದ ದುರ್ವಾಸ ಮುನಿಗಳು ಆಕೆಗೆ ಆಶೀರ್ವದಿಸಿ ಒಂದು ಕನ್ನಡಿಯನ್ನು ದಯಪಾಲಿಸಲಿಸಿ "ಇದೊಂದು ಅಪರೂಪದ ವಿಶೇಷ ಗುಣ ಉಳ್ಳ ಕನ್ನಡಿ, ನೀನು ಅಭಿಮನ್ಯು ಬಂದ ನಂತರವೇ ಆ ಕನ್ನಡಿ ನೋಡಬೇಕು" ಎಂದು ಕಟ್ಟಳೆ ವಿಧಿಸಿದರು. ವತ್ಸಲೆ ಅವರ ಆಜ್ಞೆಯನ್ನು ಪರಿಪಾಲಿಸುವುದಾಗಿ ಹೇಳಿದಳು. ಸ್ವಲ್ಪ ಸಮಯ ಕಳೆದ ಮೇಲೆ ಅಭಿಮನ್ಯು ಹಾಗೂ ಪಾಂಡವರು ಕೃಷ್ಣನೊಂದಿಗೆ ಅಭಿಮನ್ಯುವಿನ ಅರಮನೆಗೆ ಬಂದರು. ವತ್ಸಲೆ ದುರ್ವಾಸರು ಬಂದು ಹೋದ ವಿಷಯ ತಿಳಿಸಿ ಆಕೆಗೆ ಅವರು ನೀಡಿದ ಕನ್ನಡಿಯನ್ನು ತೋರಿಸಿದಳು.

ಎಲ್ಲರೂ ಕೃಷ್ಣನಿಗೆ ಕನ್ನಡಿ ನೋಡಲು ಹೇಳಿದರು. ಕೃಷ್ಣ ಇದು ವತ್ಸಲಾಗೆ ದೊರೆತ ಕಾಣಿಕೆ. ಆಕೆ ಮೊದಲು ಕನ್ನಡಿ ನೋಡುವುದು ನ್ಯಾಯ ಅಂದ. ಎಲ್ಲರೂ ಕೃಷ್ಣನ ಮಾತು ಅನುಮೋದಿಸಿದರು. ವತ್ಸಲಾ ಹೆದರುತ್ತಲೆ ಕನ್ನಡಿಯಲ್ಲಿ ಇಣುಕಿದಳು. ಆದರೆ ಕಂಡದ್ದು ಆಕೆಯ ಮುಖ ಅಲ್ಲ, ಅಲ್ಲಿ ಆಕೆ ನೋಡಿದ್ದು ತನ್ನ ಆತ್ಮೀಯನನ್ನು. ಅದು ಅಭಿಮನ್ಯು ಆಗಿದ್ದ. ಕೃಷ್ಣ ನಗುತ್ತ, "ವತ್ಸಲೆಗೆ ಸದಾ ಅಭಿಮನ್ಯುವಿನ ಯೋಚನೆ, ಹಾಗಾಗಿ ಅವನು ಗೋಚರಿಸಿದ್ದಾನೆ. ಅದು ಸರಿಯಾಗಿಯೇ ಇದೆ. ಈಗ ಪಾಂಡವರ ಹಿರಿಯ ಯುಧಿಷ್ಟಿರ ಕನ್ನಡಿಯನ್ನು ನೋಡಲಿ " ಅಂದ. ಆದರೆ ಯುಧಿಷ್ಟಿರ

ಸೇರಿದಂತೆ ಎಲ್ಲರೂ "ಈಗ ಕನ್ನಡಿ ನೋಡುವುದು ಕೃಷ್ಣನ ಸರದಿ" ಎಂದು ಪಟ್ಟು ಹಿಡಿದರು. ಕೃಷ್ಣನಿಗೆ ಇಲ್ಲ ಎನ್ನಲಾಗಲಿಲ್ಲ, ಆದರೆ ಕೂಡಲೇ ಕನ್ನಡಿಯಲ್ಲಿ ಇಣುಕಲೂ ಇಲ್ಲ. ಪಾಂಡವರು ಬೇರೆ ಬೇರೆ ಕಾರಣಗಳಿಂದಾಗಿ ಕೃಷ್ಣ ನೋಡಿದಾಗ ತಮ್ಮ ಮುಖ ಕಾಣುವುದು ಎಂದೇ ನಂಬಿದ್ದರು. ದ್ರೌಪದಿ ಕೃಷ್ಣೆ ಅವನನ್ನು ನಂಬಿಯೇ ಜೀವಿಸಿದವಳು ತನ್ನ ಅಣ್ಣನಂತೆ ತನ್ನ ಮುಖ ಕಾಣುವುದು ಅಂದುಕೊಂಡರೆ, ಅರ್ಜುನ ನಾನು ಸಖ, ದುಷ್ಟ ನಿಗ್ರಹಕ್ಕೆ ಕೃಷ್ಣ ತನ್ನನ್ನೇ ಮುಂದೆ ಮಾಡಿ ಯುದ್ಧ ಹೂಡಿದ್ದ, ಅವನಿಗೆ ನನ್ನ ಹಿತದ ಬಗ್ಗೆ ಯೋಚನೆ. ಆದುದರಿಂದ ತನ್ನ ಮುಖ ಕಾಣುವುದು ಅಂದುಕೊಂಡಿದ್ದ. ಯುಧಿಷ್ಟಿರ ಧರ್ಮಕ್ಕೆ ಇನ್ನೊಂದು ಹೆಸರು. ನನ್ನದು ನನ್ನ ಮುಖ ಕಾಣಬಹುದು ಅಂದುಕೊಂಡಿದ್ದ. ಕೃಷ್ಣ ಕನ್ನಡಿ ನೋಡಿದಾಗ ಅಲ್ಲಿ ಕಾಣಿಸಿದ್ದು ಅಟ್ಟಹಾಸ ಮೆರೆಯುತ್ತಿದ್ದ ಶಕುನಿ ಎಲ್ಲರಿಗೂ ಆಶ್ಚರ್ಯ, ಇದೇನು ಕೃಷ್ಣ? ಅನ್ನುವಂತೆ ಅವನ ಮುಖ ನೋಡಿದರು.

ಕೃಷ್ಣ ಹೇಳಿದ, "ಮಹಾಭಾರತದುದ್ದಕ್ಕೂ ಶಕುನಿ ಯಾವ ತಂತ್ರ ಹೂಡುತ್ತಾನೆ, ಅದನ್ನು ಹೇಗೆ ನಿಷ್ಫಲಗೊಳಿಸಬೇಕು ಧರ್ಮಕ್ಕೆ ಜಯವಾಗಬೇಕು ಎಂದು ಅವನ ಯೋಜನೆಗಳ ಬಗ್ಗೆ ಚಿಂತಿಸುತ್ತಿದ್ದೆ. ಅತ್ತ ಶಕುನಿ "ಪಾಂಡವರ ಶಕ್ತಿ ಕೃಷ್ಣ, ಅವನನ್ನು ಹೇಗೆ ಬಗ್ಗು ಬಡಿಯಬೇಕು ಮತ್ತು ಕೌರವರನ್ನು ಗೆಲ್ಲಿಸಬೇಕು ಎಂದು ಸದಾ ನನ್ನ ಯೋಚನೆಯಲ್ಲಿಯೇ ಇರುತ್ತಿದ್ದ. ಈಗ ಶಕುನಿ ಈ ಕನ್ನಡಿ ನೋಡಿದರೆ ಅಲ್ಲಿ ನಿಸ್ಸಂದೇಹವಾಗಿ ನಾನೇ ಕಾಣುವುದು" ಎಂದು ಮಾತು ಮುಗಿಸಿದ.

***



'ಗೊಂಬೆ ಹಬ್ಬ' – ಚಿತ್ರಕೃಪೆ: ಡಾ. ಶುಭಶ್ರೀ ಪ್ರಸಾದ್

ಹಾಸ್ಯ ಬರಹ

ನಾನು ನಾಯಿಮರಿ ಕದ್ದಿದ್ದು

– ಕಮಲಾಕ್ಷಿ ಸಿ.ಆರ್.

ನನ್ನ ಚಿಕ್ಕ ಮಗ ಸಂಜೀತ್ ಪ್ರಾಣಿಪ್ರಿಯ. ಪ್ರತಿ ಹುಟ್ಟುಹಬ್ಬಕ್ಕೆ ನಾಯಿಮರಿ ಕೊಡಿಸು ಅಂತ ದುಂಬಾಲು ಬೀಳ್ತಾ ಇದ್ದ. "ನಿಮ್ಮ ಕೆಲಸವನ್ನೇ ನೀವು ಪೂರ್ತಿ ಮಾಡಿಕೊಳ್ಳಲ್ಲ, ಇನ್ನು ಅದರ ಕೆಲಸ ಯಾರು ಮಾಡ್ತಾರೆ"? ಅಂತ ಪ್ರತಿ ಬಾರಿ 'ನಾಯಿ ಕೊಡಿಸು' ಎಂದಾಗೆಲ್ಲ ಅದೇ ಉತ್ತರ ಹೇಳಿ ಜಾರಿಕೊಳ್ಳುತ್ತಿದ್ದೆ. ಅದ್ಯಾಕೋ ಒಮ್ಮೆ ಸಂಜು ಸುಮ್ಮನಾಗದೆ, ನಾಯಿ ಹುಡುಕಾಟಕ್ಕೆ ಅವನೇ ನಿಂತ.

ಅವರಣ್ಣನೊಂದಿಗೆ ಒಂದೆರಡು ಕಡೆ ನಾಯಿ ಮಾರುವವರ ಬಳಿ ಹೋಗಿ ವಿಚಾರಿಸಿಕೊಂಡು ಬಂದ. ಅವನಿಗಿಷ್ಟವಾದ ನಾಯಿಮರಿ ಸಿಗದಿದ್ದರಿಂದ, ತನಗೆ ಬೇಕಾಗಿದ್ದ ತಳಿಗೆ ಬೇಡಿಕೆ ಇಟ್ಟು ಬಂದೇಬಿಟ್ಟ. ಸಾಲದು ಅಂತ ನಾಯಿಮರಿಯ ಗುಂಗಿನಲ್ಲಿ ನನ್ನ ತಲೆ ತಿನ್ನುವುದು ಮುಂದುವರಿದೇ ಇತ್ತು.

ಮನೆಯಿಂದ ಅರ್ಧ ಕಿ.ಮೀ. ದೂರದಲ್ಲಿದ್ದ ಪಾರ್ಕಿಗೆ ನಾನು ವಾಕಿಂಗ್ ಹೋಗ್ತಾ ಇದ್ದೆ. ಸಾಮಾನ್ಯವಾಗಿ ಸಂಜು ಕೂಡ ಜೊತೆಯಾಗುತ್ತಿದ್ದ. ಅವನೇನು ನನಗೋಸ್ಕರ ಬರ್ತಾ ಇರಲಿಲ್ಲ ನೋಡಿ. ಪಾರ್ಕ್ ಹತ್ರ ಇರೋ ಒಂದು ಮನೆಯವರು ನಾಯಿ ಸಾಕಿದ್ರು. ಆ ನಾಯಿ ಜೊತೆ ಅವನ ಸ್ನೇಹ, ಅದರಿಂದಾಗಿ ಆ ಮನೆ ಜನ ಕೂಡ ಇವನ ಸ್ನೇಹಿತರಾಗಿದ್ರು. ನಾನು ವಾಕಿಂಗ್ ಮುಗಿಸಿ ಬರೋವರೆಗೂ ಸಂಜು ಆ ಮನೆಗೆ ಹೋಗಿ ನಾಯಿ ಜೊತೆ ಆಡಿಕೊಂಡು ಇರುತ್ತಿದ್ದ. ಅಂದು ಸಂಜೆ ಕೂಡ ನಾಯಿ ಜೊತೆ ಆಡುತ್ತಿದ್ದವನನ್ನು ಬಲವಂತವಾಗಿ ಮನೆಗೆ ಕರೆತರಬೇಕಾಯ್ತು. ದಾರಿಯಲ್ಲಿ ಮತ್ತೆ ಗೊಣಗಿದ. "ನನಗೆ ಈ ತರ ನಾಯಿಮರಿ ಬೇಕಮ್ಮ, ಮಗನಿಗೆ ಒಂದು ನಾಯಿಮರಿ ಕೊಡಿಸಕ್ಕೆ ಆಗಲ್ಲವಾ?". ನಾನದಕ್ಕೆ, 'ನೀನೇ ಹೋಗಿ ಇಂತಹುದೇ ನಾಯಿ ಬೇಕು' ಎಂದು ಹೇಳಿ ಬಂದಿದ್ದೀಯಲ್ಲ. ಬಂದಾಗ ಹೋಗಿ ತರೋಣಂತೆ. ನಿನಗೆ ಈಗಲೇ ಬೇಕು ಅಂದ್ರೆ ಹೇಗೆ? ಇದೇ ನಾಯಿ ಕೊಡ್ತಾರ ಕೇಳು" ಎಂದೆ. "ಹಾಗೆಲ್ಲ ಮಾಡಕ್ಕಾಗುತ್ತ? ನೋಡೋಣ, ನಮ್ಮನೆಗೆ ಯಾವಾಗ ಬರುವುದೋ" ಎಂದು ನಿಟ್ಟುಸಿರಿಟ್ಟ.

ಮಾರನೆ ದಿನ ಸಂಜೀತನಿಗೆ ಹೇಳದೆ ವಾಕಿಂಗ್ ಹೋದೆ. ಮನೆಗೆ ಹಿಂದಿರುಗುವಾಗ ನನ್ನ ಕಣ್ಣು ನಾಯಿ ಸಾಕಿದವರ ಮನೆ ಕಡೆ ಬೇಡವೆಂದರೂ ಹೊರಳಿತು. ಆ ನಾಯಿ ನನ್ನನ್ನು ನೋಡಿ ಗೇಟಿನ ಬಳಿ ಓಡಿ ಬಂತು. ಅದರ ಜೊತೆ ಮನೆಯವರು ಯಾರೂ ಇರಲಿಲ್ಲ. ಗೇಟಿಗೆ ಬೀಗ ಸಹ ಹಾಕಿರಲಿಲ್ಲ. ಒಳಹೋಗಿ ಅದರ ಮೈದಡವಿದೆ. ಅದೂ ಸಹ ಪ್ರೀತಿಯಿಂದ ಕುಯ್ ಕುಯ್ ಎನ್ನುತ್ತ ನನಗೆ ಪ್ರತಿಕ್ರಿಯಿಸಿತು. ಎಂದಿಲ್ಲದ ಆ ಬುದ್ಧಿ ನನಗೆ ಯಾಕೆ ಬಂದಿತೋ ಅರಿಯೆ. ಮನೆಯವರು ಯಾರೂ ಹೊರಗೆ ಇಲ್ಲ, ನಾಯಿ ಒಂದೇ ಇದೆ. ಇದನ್ನೇ ಯಾಕೆ ಸಂಜೀತನಿಗೆ ಉಡುಗೊರೆಯಾಗಿ ಕೊಡಬಾರದು? ಹೇಗಿದ್ರೂ ಅವನೊಡನೆ ಇದೂ ಕೂಡ ಹೊಂದಿಕೊಂಡಿದೆ. ಅವನೂ ಇದೇ ತಳಿಯನ್ನೇ ಕೇಳ್ತಾ ಇರೋದು... ತಲೆಯಲ್ಲಿ ಆ ಆಲೋಚನೆ ಬಂದದ್ದೇ ತಡ, ಲಗುಬಗೆಯಿಂದ ಎರಡೂ ಕೈಗಳಿಂದ ನಾಯಿಯನ್ನು ಎತ್ತಿಕೊಂಡು ಗೇಟಿನವರೆಗೆ ಬಂದುಬಿಟ್ಟೆ. ಗೇಟಿನಿಂದ ನಾನು ಹೊರಬರುವುದಕ್ಕೂ ಈ ನಾಯಿಯನ್ನೂ 'ವಿಕ್ಕೀ' ಅಂತ ಮನೆಯೊಡತಿ ಕೂಗುವುದಕ್ಕೂ ಒಂದೇ ಆಯಿತು. ಅಯ್ಯೋ ದೇವ್ರೇ!. ಇದೇನಪ್ಪ ನಾನು ನಾಯಿ ಕದಿಯೋದೆ? ಅದೂ ಮಗನಿಗೋಸ್ಕರ! ಥೂ.. ಮಗ ಏನೆಂದುಕೊಳ್ಳಲ್ಲ.. ಇಲ್ಲಿ ಎಲ್ಲಾದ್ರೂ ಸಿಸಿ ಕ್ಯಾಮೆರಾ ಇದ್ರೆ ಏನು ಗತಿಯಪ್ಪಾ? ನಾಯಿಯನ್ನು ಕೆಳಗೆ ಬಿಟ್ಟು ಆ ಮನೆಯ ಕಡೆ ನೋಡದೆ ನಮ್ಮ ಮನೆಯ ಕಡೆ ನಡೆದೆ.

ನಮ್ಮ ಮನೆಯ ಕಡೆ ನಡೆದೆ ಎನ್ನುವುದಕ್ಕಿಂತ ದಡ ದಡ ಓಡಿದೆ ಎಂದೇ ಹೇಳಬೇಕು. ಓಡುವಾಗ ಕಾಲಿಗೆ ಏನೋ ತೊಡರಿತು, ಬಿಡಿಸಿಕೊಳ್ಳಲು ನೆಲದ ಕಡೆ ಬಗ್ಗಿದೆ. ಆಹಾ.. ನಾಗವಲ್ಲಿ ಹಾಕಿದಂತಹ ಒಂದು ಜೊತೆ ಬೆಳ್ಳಿಯ ದಪ್ಪನೆಯ ಕಾಲ್ಗೆಜ್ಜೆ!. ಮಣ್ಣಿನಿಂದ ಇಣುಕುತ್ತಿತ್ತು. ವಾವ್ ಓಡಿ ಬಂದಿದ್ದಕ್ಕೆ ಈ ಗೆಜ್ಜೆ ಸಿಕ್ತು, ನನ್ನ ಅದೃಷ್ಟವೇ ಅದೃಷ್ಟ ಎಂದು ಗೆಜ್ಜೆಯನ್ನು ಕೈಯಲ್ಲಿ ಹಿಡಿದೆ. ಆ ಮನೆಯಿಂದ ದೂರಬಂದಿದ್ದೆನಲ್ಲ, ನಾಯಿ ಕಥೆ ಮರೆತೇ ಹೋಗಿತ್ತು. ಸಾವಧಾನದಿಂದ ಗೆಜ್ಜೆ ಸಿಕ್ಕಿದ ಖುಷಿಯಲ್ಲಿ ಮನೆಯ ಬಳಿ ಬಂದು ಕರೆಗಂಟೆ ಒತ್ತಿದೆ. ಸಂಜು ಬಾಗಿಲು ತೆಗೆದ. ಗೆಜ್ಜೆ ಕೈಯಲ್ಲಿ ಹಿಡಿದು ಖುಷಿಯಿಂದ ಒಳ ಬರುವಾಗ ಮುಗ್ಗರಿಸಿ ಕಾಲು ಜಾರಿ ಮನೆಯೊಳಗೆ ಧೋಪ್ ಎಂದು ಬಿದ್ದೆ. ಕಾಲು ತುಸು ನೋವಾದಂತೆನಿಸಿ, 'ಅಮ್ಮಾ' ಎಂದು ಕಾಲಾಡಿಸುತ್ತ ಏಳಲು ಪ್ರಯತ್ನಿಸಿದೆ. ಕಾಲು ಆಡಿಸಲು ಆಗದಿದ್ದಾಗ ಜಾಡಿಸಲು ಯತ್ನಿಸುವಾಗ ಎಚ್ಚರವಾಯಿತು. ಕಣ್ಣು ಬಿಟ್ಟು ನೋಡಿದರೆ ನಾನಿನ್ನೂ ಮಲಗೇ ಇದ್ದೆ.

ಓಹ್! ಹಾಗಾದರೆ ನಾಯಿ ಕದ್ದದ್ದು ಕನಸಿನಲ್ಲಿ! ನಾನು ವಾಸ್ತವವಾಗಿ ಕದಿಯಲು ಹೋಗಿಲ್ಲ ಎಂದು ಸಮಾಧಾನ ವಾಯ್ತು. ಕಾಲು ಜಾಡಿಸಿದಾಗ, ನನ್ನ ಕಾಲಲ್ಲಿದ್ದ ಗೆಜ್ಜೆ ಹೊದಿಕೆಗೆ ಸಿಕ್ಕಿ ಕಿತ್ತು ಬಂದಿತ್ತು. ಕಾಲು ಮುಟ್ಟಿ ನೋಡಿ ಕೊಂಡೆ, ಗೆಜ್ಜೆ ಕಿತ್ತು ಹಾಸಿಗೆಯಲ್ಲಿ ಬಿದ್ದಿತ್ತು. ಆ ವೇಳೆಗೆ ಅಲಾರಂ ಸಹ ಕೂಗಿತು. ಬೆಳಗ್ಗಿನ ಜಾವ ನಾಲ್ಕು ಗಂಟೆ. ಗಣೇಶನ ಹಬ್ಬದ ದಿನ. ಏನಪ್ಪ ನಿನ್ನ ಮಹಿಮೆ.. ಕನಸಲ್ಲಿ ಕಳ್ಳತನ ಮಾಡಿಸಲು ಯತ್ನಿಸಿದೆಯಾ! ಯಾವ ಆಪಾದನೆಗಳಿಗೂ ಸಿಲುಕಿಸದಿರಯ್ಯ, ಚೌತಿ ಚಂದಿರನ ನಾನು ನೋಡಬಾರದು ಎಂದು ಹರಸಯ್ಯ, ವಿಘ್ನೇಶ್ವರ ಎಂದು ನಮಿಸುತ್ತ ಎದ್ದೆ.

***

ನಾ ಜೀವ ತಡೆದಿರುವೆ

– ಜಾನಕಿರಾಮು

ಮುನಿಸು ಏತಕೇ? ಸಾಗರದ ಕಣ್ಣೋಳೆ, ಎರಡು ಹನಿ ಕಣ್ಣೋಳಗೆ ಹೆಚ್ಚಾಯಿತೆ ?
ಉಬ್ಬುಗಲ್ಲವ ದಾಂಟಿ ಗಂಟಲನು ಬಳಸುತಿರೆ, ನಗುವೊಂದು ಸಾಂತ್ವನಕೆ ಬೇಕಾಯಿತೇ ?

ನಿನ್ನ ನೋಡಿದ ಮೊದಲ ಘಳಿಗೆಯನೆ ಇಂದಿಗೂ ಪ್ರೀತಿ ಗರ್ಭದಿ ಇರಿಸಿ ಕಾಪಾಡಿಹೆ
ಕಣ್ಣ ಕುಂಚದಿ ರುಧಿರ ಬಣ್ಣಗಳ ನಾ ಬಳಸಿ ಮನದ ಮನೆಗೋಡೆಗಳ ಚೆಂಗೊಳಿಸಿಹೆ

ನನ್ನ ಹುಸಿ ಬಣ್ಣನೆಗೆ ನಿನ್ನ ನೈಜದ ನಗುವು ನಿನ್ನ ಹುಸಿ ನಗುವಿಗೆ ನಿಜ ಬಣ್ಣನೆ
ಹೇಗೆ ಮರೆಯಿತೊ ನಿನಗೆ ಆ ಕನಕದ ಕಾಲ ಕನಕ ತಾ ಮರೆತಂತೆ ಈ ಮಣ್ಣನೆ

ಜೀವವೆಂದೊಂದು ದಿನ ನೀ ನನ್ನ ಕರೆದಿರುವೆ ಜೀವದ ಮೇಲೆಯೇ ಮುನಿಸು ತರವೇ ?
ಕಹಿ ರಸಂಗಳ ತುಂಬಿ ಮನ ಕೆಡಿಸಿಕೊಂಡಿರುವೆ ಕಲ್ಲು ಸಕ್ಕರೆಗೆಮ್ಮ ಜೀವನದಿ ಬರವೇ ?

ನಮ್ಮಿರ್ವರ ಸುತ್ತ ನೂರಾರು ಬಂಧಗಳು ಜೇನು ಹುಳುಗಳ ಪರಿಯ ಸಂಸಾರವು
ನಾನು ನೀನಿನ ಕೂಡ ಆನು ತಾನೂ ಇರದೆ ಹರಿದ ತಂತಿಯ ವೀಣೆ ಝೇಂಕಾರವು

ಜೀವ ನಾಟಕದಲ್ಲಿ ಪ್ರೀತಿಯೊಂದಂಕವೇ ಬೇರೆ ಭಾವಕೂ ಇಲ್ಲ ಅವಕಾಶ ಉಂಟು
ಇದನು ನೀನಲ್ಲದೇ ಬೇರಾರು ತಿಳಿಯುವರು ಏತಕೆ ಜಾನಕಿ ಹಣೆಗೆ ಗಂಟು

ನಕ್ಕು ಬಿಡು ನಿನ್ನಿಂದ ಆಗದೀ ಹುಸಿ ಸಿಡುಕು, ಗಲ್ಲ ಗುಳಿ ಹೇಳುತಿದೆ ನೀ ನಗುವ ತಡೆದಿರುವೆ
ನಕ್ಕು ಬಿಡು ಹುಸಿಯಾಗಿ ಸಿಡುಕು ನಿಜವಾದರೂ ಮನವು ನೋಯುತಲಿಹುದು ನಾ ಜೀವ ತಡೆದಿರುವೆ ...

***

ಮಲ್ಲಿಗೆ, ಅಂಗಳದಲಿ ನಕ್ಕಾಗ....

–ಎಲ್. ಗಿರಿಜಾ ರಾಜ್

ಈ ಪ್ರಕೃತಿಯಲ್ಲಿ ಪರಿಮಳಭರಿತವಾದ, ವೈವಿಧ್ಯಮಯವಾದ ಕುಸುಮಗಳಿದ್ದರೂ ಹೆಚ್ಚಾಗಿ ದೇವರ ಪೂಜೆಗೆ ಸಲ್ಲುವುದು ಮತ್ತು ಹೆಣ್ಣಿನ ಮುಡಿಗೇರುವ ಮೊದಲ ಪ್ರಾಶಸ್ತ್ಯ ಮಲ್ಲಿಗೆಯದು.

ಎಷ್ಟೋ ಕಾಲದಿಂದ ಕಾವ್ಯಕ್ಕೆ, ಕವಿತೆಗಳಿಗೆ ವಸ್ತುವಾಗಿ ಹೆಣ್ಣಿನ ಸೌಂದರ್ಯ ಮತ್ತು ಶುದ್ಧ ಮನಸ್ಸಿಗೆ ಸಂಕೇತವಾಗಿ ಎಲ್ಲರಿಂದ ಮನ್ನಣೆ ಪಡೆದಿದೆ. ಅದರ ಹೊರ ಸೌಂದರ್ಯ ಮಾತ್ರವಲ್ಲದೆ ಅದರ ಬೇರು, ಹೂವು, ಎಲೆ, ತೊಗಟೆಗಳಲ್ಲಿ ಔಷಧೀಯ ಗುಣವಿದ್ದು ದೇವರು ಅದನ್ನು ಕೃತಕೃತ್ಯವನ್ನಾಗಿ ಮಾಡಿದ್ದಾನೆ.

ತಾಯಂದಿರ ಸ್ತನಗಳಲ್ಲಿ ಹಾಲು ತುಂಬಿ ಬಾತು ಕಲ್ಲಿನಂತಾದರೆ ಪೂರ್ಣ ಅರಳಿದ ಹಿಡಿಮಲ್ಲಿಗೆ ಹೂಗಳನ್ನು ಎರಡು ಸ್ತನಗಳ ಮೇಲಿಟ್ಟು ಕಟ್ಟಬೇಕು. ಮಾನವನ ದೇಹದ ಯಾವುದೇ ಭಾಗದಲ್ಲಿ ಬಾವು ಬಂದರೂ ಅಥವಾ ಪಾದಗಳು ಬಾತುಕೊಂಡಾಗ ಮಲ್ಲಿಗೆಯ ಚಿಗುರು ಎಲೆಗಳನ್ನು ನುಣ್ಣಗೆ ಅರೆದು ಪಟ್ಟು ಹಾಕಿದರೆ ನೋವು ನಿವಾರಣೆ ಯಾಗುತ್ತದೆ. ಮುಟ್ಟು ಕ್ರಮರಹಿತ ಮತ್ತು ಋತುಚಕ್ರ ನಿಯಮಿತವಿರದಿದ್ದಾಗ ಅರಳಿದ ಮಲ್ಲಿಗೆ ಹೂಗಳನ್ನು ನೀರಿನಲ್ಲಿ ಕುದಿಸಿ, ಕಷಾಯ ಮಾಡಿ, ದಿನಕ್ಕೆರಡು ವೇಳೆ ಸೇವಿಸುತ್ತಾ ಬಂದರೆ ಮುಟ್ಟು ಕ್ರಮಗೊಳ್ಳುವುದು. ಈ ಮಲ್ಲಿಗೆ ಹೆಣ್ಣು ಜೀವಕ್ಕೆ ನಿಜವಾದ ಗೆಳತಿಯಲ್ಲವೇ ಮತ್ತೆ? ಇನ್ನು ಅದನ್ನು ಸುಗಂಧ ದ್ರವ್ಯವಾಗಿ ಉಪಯೋಗಿಸುವುದು ಸರ್ವ ವಿದಿತವಾದ ವಿಷಯ.

ಇಂಥ ಮಲ್ಲಿಗೆ ಚೈತ್ರ ಮಾಸ ಬಂತೆಂದರೆ ಅಲ್ಲಿಯವರೆಗೆ ಮೌನವಾಗಿ ಹಸಿಹಸಿರು ಬಳ್ಳಿಯಾಗಿ ಹಬ್ಬಿಕೊಳ್ಳುತ್ತಿದ್ದ ಗಿಡ, ಅಚ್ಚ ಬಿಳಿಯ ಘಮಘಮಿಸುವ ಹೂಗಳನ್ನು ಧರಿಸಿ ನಮ್ಮ ಮನೆಯ ಅಂಗಳದಲ್ಲಿ ನಗುವಾಗ, ನಾವು ಭಾಗ್ಯವಂತರು ಎನಿಸುತ್ತದೆ. ಹಸುರಿನ ಮೇಲೆ ಮೊಸರು ಚೆಲ್ಲಿದಂತೆಯೋ, ನಕ್ಷತ್ರಗಳ ಹಾಗೆ ಹೀಗೆ ಎಂಬ ಕವಿಗಳ ಉಪಮೆಗಳನ್ನು ಮೆಲುಕು ಹಾಕುತ್ತಾ ಅದನ್ನು ನೋಡುತ್ತಿದ್ದಂತೆ ಜಿಎಸ್‌ಎಸ್ ಅವರ ಭಾವಗೀತೆಯ ಸಾಲುಗಳನ್ನು, ಮತ್ತು ಡಿ.ಎಸ್. ಕರ್ಕಿ ಅವರ ಸುಂದರ ಭಾವಗೀತೆಗಳನ್ನು ಮನಸು ಗುಣಗುಣಿಸುತ್ತದೆ. 'ಇಗೋ ಇಲ್ಲರಳಿ ನಗುತಿದೆ ಏಳು ಸುತ್ತಿನ ಮಲ್ಲಿಗೆ, ಇಂತೂ ಹಚ್ಚನೆ ಹಸಿರು ಗಿಡದಿಂದೆಂತು ಮೂಡಿತು ಬೆಳ್ಳಗೆ'. ಇದು ಜಿಎಸ್ಸೆಸ್ ಅವರ ಭಾವೋಕ್ತಿಯಾದರೆ ಡಿ.ಎಸ್.ಕರ್ಕಿ ಅವರು "ಎಲೆ ಎಲೆ ಮಲ್ಲಿಗೆ, ಬಳುಕುವೆ ಮೆಲ್ಲಗೆ ಬಳ್ಳಿಯ ಮೇಲೇರಿ, ಬೀಸುವ ಗಾಳಿಗೆ ಸೂಸುವೆ ಸೌರಭ, ಅನುರಾಗವ ಬೀರಿ" ಎಂದು ತಮ್ಮೆದೆಯ ಭಾವಗಳಿಗೆ ಸುಂದರ ಅಕ್ಷರಗಳ ರೂಪು ನೀಡಿದ್ದಾರೆ. ಮಲ್ಲಿಗೆ ಮೇಲೆ ಗೀತೆ ಬರೆಯದಿರುವ ಗೀತ ರಚನಕಾರರು ವಿರಳ,

ನಮ್ಮ ಮನೆಗೆ ಈಗ 'ಮಲ್ಲಿಗೆ ಮನೆ' ಎಂಬ ಅಡ್ಡ ಅಭಿದಾನದ ಹೆಚ್ಚುಗಾರಿಕೆಯು ದೊರೆತಿದೆ. ನಮ್ಮದು ಮೂಲೆಮನೆ ಆಕಡೆ ರಸ್ತೆ ಈಕಡೆ ರಸ್ತೆ, ವಾಹನಚಾರಿಗಳು ಬಹಳ! "ಮನೆಯ ಅಂಗಳದಲ್ಲಿ" ಎಂಬ ಪದವನ್ನು ಉಪಯೋಗಿಸಿದ್ದರೂ ಬೆಂಗಳೂರಿನಂಥ ನಗರದಲ್ಲಿ ನಮ್ಮ ಹಳ್ಳಿಗಾಡುಗಳ ಅಂಗಳ, ಹಿತ್ತಲುಗಳನ್ನು ಕಲ್ಪನೆ ಮಾಡಿಕೊಳ್ಳುವುದು ಸಾಧ್ಯವಿಲ್ಲದ ಮಾತು, ನಿಜ ಹೇಳಬೇಕೆಂದರೆ ನಮ್ಮ ಮಲ್ಲಿಗೆ ಗಿಡ, ಅದರ ಪಕ್ಕದಲ್ಲಿರುವ ನಂದಿಬಟ್ಟಲು ಗಿಡ, ಕಾಂಪೌಂಡು ಮತ್ತು ಮನೆಯ ನಡುವೆ ಬಿಡಬೇಕಾಗಿರುವ ಎರಡು ಅಡಿಗಳ ಸ್ವಲ್ಪ ಜಾಗದಲ್ಲೇ ಬೆಳೆದು ಕಾಂಪೌಂಡಿನಿಂದ ಆಚೆಗೂ ವಿಶಾಲವಾಗಿ ರೆಂಬೆಕೊಂಬೆಗಳು ಚಾಚಿಕೊಂಡಿವೆ. ಅಂದಮೇಲೆ ಹೊರಕ್ಕೆ ಚಾಚಿದ ಕೊಂಬೆಗಳಲ್ಲಿ ಬಿಡುವ ಹೂಗಳನ್ನು ನಮ್ಮವು ಎಂದು ಹೇಗೆ ಹೇಳುವುದು? ಏಕೆಂದರೆ ಆರೋಗ್ಯ ಕಾಪಾಡಿಕೊಳ್ಳುವ ಕಾಯಕದಲ್ಲಿ ಬೆಳಗಿನ ಹಿತವಾದ,

ಹವೆಯಲ್ಲಿ ಕಾಯ ದಂಡಿಸಲು ಓಡಾಡುವ ಪಾದಚಾರಿಗಳು ಕೆಲವರು ಕೈಯಲ್ಲಿ ಒಂದು ಚೀಲವನ್ನು ಸಿದ್ಧ ಮಾಡಿಕೊಂಡು ಬಂದಿರುವುದರಿಂದ ಯಾವ ಯಾವ ಮನೆಗಳ ಕಾಂಪೌಂಡಿನ ಆಚೆಗೆ ಗಿಡ ಜಾಸ್ತಿ ಚಾಚಿ ಕೊಂಡಿರುತ್ತೇವೆಯೋ ಅಂತ ಹೂಗಳನ್ನು ಕೀಳಲು ನಿರ್ದಾಕ್ಷಿಣ್ಯವಾಗಿ ಕೈ ಚಾಚುತ್ತಾರೆ. ಒಂದೆಡೆ ಹೂವು ಸಿಗುತ್ತದೆ ಇನ್ನೊಂದು ಅದೊಂದು ಥರ ವ್ಯಾಯಾಮವೂ ಆಗುತ್ತದೆ. ಒಂದೇ ಏಟಿಗೆ ಎರಡು ಹಕ್ಕಿಗಳು! ಅವರು ಹೂ ಕಿತ್ತುಕೊಳ್ಳುವುದರ ಬಗ್ಗೆ ನಮ್ಮದೇನು ತಕರಾರಿಲ್ಲ. ಆದರೆ ಹೂ ಕೀಳುವ ರಭಸದಲ್ಲಿ ಸ್ವಲ್ಪ ಮೇಲಿರುವ ಹೂಗಳಿಗಾಗಿ ಕತ್ತು ನಿಗುರಿಸಿ, ಕೈಗಳನ್ನು ಉದ್ದ ಚಾಚಿ ಹೆಚ್ಚಿಗೆ ವ್ಯಾಯಾಮ ಮಾಡಬೇಕಾದಾಗ ಒಮ್ಮೊಮ್ಮೆ ಹೂಗಳ ಜೊತೆಯಲ್ಲೇ ರೆಂಬೆಗಳೂ ಮುರಿದುಬಿಡುತ್ತವೆ. ಅದಕ್ಕೆ ಬೇಸರ! ಅದು ಬಿಟ್ಟರೆ ಅವರು ಏರಿಸುವುದೂ ದೇವರ ಮುಡಿಗೆ ತಾನೇ! ನಮಗೂ ಒಂದಿಷ್ಟು ಪುಣ್ಯ ಸಂದಾಯ!

ನಮ್ಮ ಮನೆಯ ಮಲ್ಲಿಗೆಯ ಇನ್ನೊಂದು ವಿಶೇಷ ಎಂದರೆ ಮೂರರಿಂದ ನಾಲ್ಕು ಸುತ್ತುಗಳ ಸುಂದರ ಸಮ! ಇದು ದೊಡ್ಡ ಮಲ್ಲಿಗೆ ಎಂದುಕೊಂಡಾಗಲೆಲ್ಲ ಮನಸ್ಸು ಆ ಗೀತೆಯನ್ನು ನೆನೆಯುತ್ತದೆ. 'ಇವಳು ಯಾರು ಬಲ್ಲೆಯೇನು? ಇವಳು ಅಡಿಯನಿಟ್ಟ ಕಡೆ, ಹೆಜ್ಜೆ ಹೆಜ್ಜೆಗೂ ಒಂದು ದೊಡ್ಡ ಮಲ್ಲಿಗೆ!' ಪರರ ಮನೆಯ ಹೂವು ಕೀಳುವ ಇವರು ಇನ್ನು ಸ್ವಲ್ಪ ಕತ್ತಲಾಗಿರುವ ಹಾಗೆಯೇ ಅಂದರೆ ಐದುವರೆಯ ಹೊತ್ತಿನಲ್ಲಿ ಮೆಲ್ಲಗೆ ಹೆಜ್ಜೆ ಇಡುತ್ತಾ ಹೂಗಳ ಅನ್ವೇಷಣೆಗೆ ತೊಡಗುತ್ತಾರೆ. ಅಲ್ಲಲ್ಲಿ ಬೆಳಕು ನೀಡುವ ಲೈಟ್ ಕಂಬಗಳು ಈ ಪುಷ್ಪ ಚೋರರಿಗೆ ನೆರವು ನೀಡುತ್ತವೆ. ಮೇಲಕ್ಕೆ ಹಬ್ಬಿ ಹೋಗಿರುವ ನಮ್ಮ ಮನೆಯ ಮಲ್ಲಿಗೆ ಕೆಳಗೆ ಹೆಚ್ಚಾಗಿ ಬಿಡುವುದಿಲ್ಲ. ನಮ್ಮ ಕಾಂಪೌಂಡಿಗೆ ಅಂಟಿಕೊಂಡೇ ಚರಂಡಿ ಒಂದಿದೆ. ಅದರ ಮೇಲೆ ದೊಡ್ಡ ಚಪ್ಪಡಿ ಕಲ್ಲುಗಳನ್ನು ಜೋಡಿಸಿದ್ದಾರೆ! ಒಂದು ದೊಡ್ಡ ಕಲ್ಲನ್ನು ಯಾರೋ ಹೊತ್ತೊಯ್ದಿರುವುದರಿಂದ ಅಲ್ಲಿ ನಿಂತು ಹೂ ಕೀಳಲು ಹೋದವರು ಆಯ ತಪ್ಪಿ ಬಿದ್ದರೆ ಪಕ್ಕದ ಕಲ್ಲುಗಳ ತುದಿ ಭಾಗ ತಲೆಗೆ ತಾಕಿ ಪೆಟ್ಟಾಗಿ ಆಸ್ಪತ್ರೆಗೆ ಹೋಗುವ ಸಾಧ್ಯತೆಯೂ ಇದೆ.

ಒಂದು ದಿನ ಬೆಳಗ್ಗೆ 5:30ಕ್ಕೇ ಹೂ ಕೀಳಲು ಬಂದವರೊಬ್ಬರು ಸ್ವಲ್ಪ ಮೇಲಿದ್ದ ಹೂವಿಗಾಗಿ ಬಳ್ಳಿ ಎಳೆದುಕೊಂಡು ಎಟುಕಿಸಿಕೊಳ್ಳಲು ಹೋಗಿ ಚರಂಡಿಗೆ ಸಾಷ್ಟಾಂಗ ನಮನ ಮಾಡಿದ್ದರು! ಬೆಳಗಿನ ಹವಾ ವಿಹಾರದ ನಡಿಗೆಗೆ ಬಂದಿದ್ದ, ನಾಲ್ಕು ಜನ ಅವರನ್ನು ಎತ್ತಿ ಆಸ್ಪತ್ರೆಗೆ ಸೇರಿಸಿದರಂತೆ. ತನ್ನ ದೆಸೆಯಿಂದ ಇಷ್ಟೆಲ್ಲಾ ನಡೆಯುತ್ತಿದ್ದರೂ, ಮಲ್ಲಿ ಮಾತ್ರ ತನಗೇನೂ ಗೊತ್ತಿಲ್ಲವೆಂಬಂತೆ ಎಂದಿನಂತೆ ಮುದ್ದಿನ ನಗೆ ಬೀರುತ್ತಾ, ತನ್ನ ತಾಜಾತನದ ಘಮಘಮ ಸೌಗಂಧದಿಂದ ಜನಗಳನ್ನು ಸೆಳೆಯುವುದನ್ನು ಬಿಡಲಿಲ್ಲ!

ನಮಗೆ ಭಯವಾಯಿತು ಈ ಪ್ರಸಂಗ ನಡೆದ ಮೇಲೆ. ನಾನು ಬಹಳ ಯೋಚಿಸಿ ಒಂದು ಬೋರ್ಡ್ ಬರೆದು ತೆಗೆದು ಹಾಕಿದೆ "ಎಚ್ಚರ! ಹೂ ಕೀಳುವ ಆಸೆಗೆ ಹೋಗಿ ಮೀಸೆ ಮಣ್ಣಾಗುವುದು ಹಾಗಿರಲಿ, ಚರಂಡಿಗೆ ಬಿದ್ದು ಆಸ್ಪತ್ರೆ ಸೇರುತ್ತೀರಿ. ಮಲ್ಲಿಗೆಯಿಂದ ದೂರವಿರಿ" ಎಂದು.

ಒಂದೆರಡು ದಿನಗಳ ನಂತರ ಅದರ ಕೆಳಗೆ ಕೆಲವು ವಾಕ್ಯಗಳು ಕಂಡವು. 'ನಿಮ್ಮ ಮನೆಯ ಬಳಿ ಬಿದ್ದರೆ ಸುಮ್ಮನೆ ನಿಮಗೆ ಶಾಪ ತಟ್ಟುತ್ತದೆ. ದಯಮಾಡಿ ಒಂದು ಚಪ್ಪಡಿ ಕಲ್ಲು ಹಾಕಿಸಿಬಿಡಿ' ಎಂದು. ನಾನು ಈ ವಿಷಯವನ್ನು ನನ್ನವರಿಗೆ ಹೇಳಿದೆ. ಅವರು ನಗುತ್ತಾ, "ಹಾಕಿಸು ಈಗ ಚಪ್ಪಡಿ!" ಎಂದು ಕೆಣಕಿದರು. ನಾನು "ಹೂಂ, ನಾನೇಕೆ ಹಾಕಿಸಲಿ?" ಎಂದು ಅದರ ಕೆಳಗೆ ಹೀಗೆ ಬರೆದೆ. "ಕಳ್ಳತನದ ಪಾಪ ನಿಮಗೆ ಮೊದಲು ಸುತ್ತಿಕೊಳ್ಳುತ್ತದೆ

ಎಂಬುದನ್ನು ಮರೆಯದಿರಿ, ಬೇಕಾದರೆ ನೀವೇ ಚಪ್ಪಡಿ ಹಾಕಿಸಿ" ಎಂದು ಮುಖ ಓದಿಸಿಕೊಂಡು ಕೋಪದಿಂದ ಒಳಗೆ ಬಂದೆ...

ಒಂದು ವಾರವಾಯಿತು ಮಲ್ಲಿಗೆಯ ಆಸೆಯನ್ನು ಬಿಟ್ಟರೆ ಎಂದು ಕಾಣುತ್ತದೆ. ಹೂಗಳನ್ನು ಯಾರೂ ಕೀಳದೆ ಗಿಡದಲ್ಲೇ ಶೋಭಿಸುತ್ತಿದ್ದವು. "ನೋಡಿದಿರಾ....? ಮಾತಿನ ಶೂರರು ಎಲ್ಲ ಸುಮ್ಮನಾದರು" ಎಂದು ಅವರ ಬಳಿ ಹೇಳಿ ಕೊಂಡೆ. ಒಂದು ವಾರವಾಯಿತು. ಮರುದಿನ ಆಚೆಗೆ ಬಂದು ನೋಡುತ್ತೇನೆ. ಹೊಸದಾದ ದೊಡ್ಡ ಚಪ್ಪಡಿ ಚರಂಡಿಯ ತೆರೆದ ಭಾಗವನ್ನು ಮುಚ್ಚಿತ್ತು. "ವಾಹ್! ಇಲ್ಲಿಗೆ ಬನ್ನಿ" ಎಂದು ಕೂಗಿದೆ. "ಏನಾಯ್ತು?"ಎಂದು ಅವರು ಓಡಿ ಬಂದರು. ಅವರಿಗೂ ಆಶ್ಚರ್ಯವಾಯಿತು

"ಹೂವಿನ ಆಸೆಗೆ ನೋಡು, ಚಪ್ಪಡಿ ತಂದು ಮುಚ್ಚಿದ್ದಾರೆ! ಪಾಪ! ಸಿಗುವಷ್ಟು ಕಿತ್ತುಕೊಳ್ಳಲಿ ಬಿಡು" ಎಂದರು. ನನಗೂ ಮನಸ್ಸು ಕರಗಿತು " "ಸರಿ, ಹೋಗಲಿ ಬಿಡಿ. ನಾವೂ ದೇವರಿಗೆ ತಾನೇ ಹೂ ಮುಡಿಸುವುದು, ನಮ್ಮ ಮನೆಯ ಹೂಗಳಾದ್ದರಿಂದ ನಮ್ಮ ಮುಡಿಗೆ ಆ ದೇವರು ಪುಣ್ಯ ಕುಸುಮಗಳನ್ನು ಮೂಡಿಸುತ್ತಾನೆ, ಬಿಡಿ" ಎಂದುಕೊಂಡು ಹೀಗೆ ಬರೆದೆ– "ಚಪ್ಪಡಿ ಹಾಕಿಸಿದವರಿಗೆ ಧನ್ಯವಾದಗಳು! ಅದರ ಮೇಲೆ ನಿಂತು ಎಷ್ಟು ಸಾಧ್ಯವೋ ಅಷ್ಟೂ ಹೂಗಳನ್ನೂ ಕಿತ್ತುಕೊಳ್ಳಿ ಕಿತ್ತುಕೊಳ್ಳಿ".

ಮಾರನೆಯ ದಿನ ಆಧ್ಯ ಕೆಳಗೆ ಈ ಅಕ್ಷರಗಳು ಶೋಭಿಸುತ್ತಿದ್ದವು. "ಕೈಗೆ ಎಟಕದ ಹೂಗಳನ್ನು ಬಿಡಿಸಿಕೊಳ್ಳಲು ಏಣಿ ತಂದುಹಾಕಿ ಕಿತ್ತುಕೊಳ್ಳಬಹುದೇ?" ಆಸೆಗಿಂತ ತಮಾಷೆ ತುಂಟತನಗಳೇ ಇಲ್ಲಿ ಹೆಚ್ಚಾದ ಹಾಗೆ ಕಂಡಿತು. ಏನು ಬರೆಯುವುದೆಂದು ತಿಳಿಯದೆ ಅದೇ ಹೊಸ ಚಪ್ಪಟೆಯ ಮೇಲೆ ನಿಂತು ಕಾಂಪೌಂಡಿಗೆ ಸುಸ್ತಾಗಿ ಒರಗಿ ನಿಂತೆ!

ಈಗ ನಮ್ಮ ಮನೆಯ ಮಲ್ಲಿಗೆ ನಮ್ಮದು ಮಾತ್ರವಲ್ಲ, ಇಡೀ ನಮ್ಮ ಬಡಾವಣೆಗೆ ಸೇರಿದ್ದಾಗಿದೆ, ಏಣಿ ತಂದು ಹಾಕಿ ಯಾರಾದರೂ ಒಂದಿಬ್ಬರು ಬಿಡಿಸಿ ಎಲ್ಲ ಮನೆಗಳವರಿಗೂ ಸರದಿ ಪ್ರಕಾರ ಹಂಚಿ ಖುಷಿಪಡುತ್ತಾರೆ. ಯಾರಾದರೂ ನೀರು ಗೊಬ್ಬರವನ್ನು ಹಾಕುತ್ತಾರೆ. ಆ ಹಂಚುವುದರಲ್ಲಿ ಇರುವ ಸುಖ ಬಣ್ಣಿಸಲಾಗದು! ಮೈಸೂರು ಮಲ್ಲಿಗೆಯನ್ನು ರಸಮಯ ಕವನಗಳಿಂದ ಸಿಂಗರಿಸಿ ನಾಡಿಗೆಲ್ಲಾ ಅದರ ಕಂಪು, ಇಂಪನ್ನು ಹರಡಿದ ಕೆ.ಎಸ್.ನ. ಅವರನ್ನು ಸ್ಮರಿಸಿಕೊಂಡು ವಿರಮಿಸುತ್ತೇನೆ

***

ರಕ್ಷಾಬಂಧನ–ರಾಖಿ ಹಬ್ಬ

– ರೇಣುಕಾ ದೇಸಾಯಿ

ನಮ್ಮ ದೇಶದಲ್ಲಿ ಆಚರಿಸುವ ಎಲ್ಲಾ ಉತ್ಸವಗಳ ಹಿಂದೆ ವೈಜ್ಞಾನಿಕ, ಸಾಮಾಜಿಕ ಮತ್ತು ಐತಿಹಾಸಿಕ ದೃಷ್ಟಿಕೋನವಿದೆ. ಉತ್ಸವಗಳು ಎಂದರೆ ಸಾಮೂಹಿಕ ಆಚರಣೆ, ಮನಸ್ಸು ಮತ್ತು ಸಮಾಜವನ್ನು ಪರಿವರ್ತನೆ ಮಾಡುವ ಛಲ ಇವುಗಳಲ್ಲಿ ಅಡಕವಾಗಿರುತ್ತದೆ. ಹೀಗಾಗಿ ರಕ್ಷಾಬಂಧನ – ರಾಖಿ ಹಬ್ಬ ಕೂಡಾ ದೇಶದ ಉದ್ದಗಲಕ್ಕೂ ಉತ್ಸವದ ರೀತಿಯಲ್ಲಿ ಆಚರಿಸಲ್ಪಡುತ್ತದೆ.

ಶ್ರಾವಣದ ಪೂರ್ಣಿಮೆಯಂದು ರಕ್ಷಾ ಬಂಧನ ಆಚರಿಸಲಾಗುತ್ತದೆ. ಭಾರತೀಯರಿಗೆ ಶ್ರಾವಣ ಎಂದರೆ ಬಹಳ ಮಹತ್ವ ವಾದ ಪುಣ್ಯ ಮಾಸ. ಈ ಮಾಸದಲ್ಲಿ ಅನೇಕ ಹಬ್ಬಗಳನ್ನು ಆಚರಿಸುತ್ತೇವೆ, ನಮ್ಮದು ಪ್ರಕೃತಿ ಆರಾಧಕ ಮನಸ್ಸು, ಈ ಮಾಸದಲ್ಲಿ ಎಲ್ಲೆಲ್ಲೂ ಹಸಿರು ಕಂಗೊಳಿಸುತ್ತಿರುತ್ತದೆ. ಬೇಸಿಗೆಯ ಬೇಗೆ ಕಳೆದು, ಮಳೆಯ ನೀರಿನ ಹನಿಗಳ ಸಿಂಚನ ಅನುಭವಿಸುವ, ಆನಂದಿಸುವ ಕಾಲ, ಮಳೆರಾಯನ ಆಶೀರ್ವಾದದಿಂದ ಕೆರೆಕಟ್ಟೆಗಳು ತುಂಬಿ ಹರಿದು ಕಂಗೊಳಸುವ ಕಾಲ. ರೈತ ತನ್ನ ಹೊಲದಲ್ಲಿ ಉತ್ತಿ ಬಿತ್ತುವ ಕಾಲ. ಅನೇಕ ಕವಿಗಳು ಶ್ರಾವಣವನ್ನು ಅದ್ಭುತ ವಾಗಿ ವರ್ಣಿಸಿದ್ದಾರೆ. ಅದರಲ್ಲೂ 'ಶ್ರಾವಣ ಬಂತು ಕಾಡಿಗೆ... ಬಂತು ನಾಡಿಗೆ... ಬಂತು ಬೀಡಿಗೆ... ಓ... ಬಂತು ಶ್ರಾವಣ' ಎನ್ನುವ ಸುಂದರ ಕಾವ್ಯದಲ್ಲಿ ಶ್ರಾವಣವನ್ನು ಹಲವು ಬಗೆಯಲ್ಲಿ ವರ್ಣಿಸಿದ್ದಾರೆ ನಮ್ಮ ವರಕವಿ ಬೇಂದ್ರೆಯವರು. ಇಂತಹ ಸಮೃದ್ಧವಾಗಿ ಕಂಗೊಳಸುವ ಕಾಲಕ್ಕೆ ತಕ್ಕ ಹಬ್ಬಗಳು, ಹಬ್ಬಕ್ಕೊಂದು ಬಗೆಯ ತಿನಿಸು. ಆರೋಗ್ಯಕ್ಕೆ ಹಿತವಾದ ಆಹಾರ ನಮ್ಮದು, ಆಹಾರದಲ್ಲೇ ಔಷಧವಿರುವುದು ನಮ್ಮ ಆಹಾರ ಪದ್ಧತಿಯ ಹಿರಿಮೆ ಕೂಡಾ,

ರಕ್ಷಾಬಂಧನವೂ ಶ್ರಾವಣ ಶುದ್ಧ ಪೌರ್ಣಮಿಯಂದು ಆಚರಿಸಲ್ಪಡುವ ಹಬ್ಬವಾಗಿದೆ. ಸಹೋದರ ಸಹೋದರಿಯರಲ್ಲಿ, ಸ್ನೇಹಿತರಲ್ಲಿ ಬಂಧುಬಾಂಧವರಲ್ಲಿ ಪರಸ್ಪರ ಸುಮಧುರ ಸಂಬಂಧವನ್ನು ಸುಭದ್ರಗೊಳಿಸುವ, ಒಬ್ಬರಿಗೊಬ್ಬರು ಶ್ರೇಯಸ್ಸನ್ನು ಕೋರುವ ಮತ್ತು ಉನ್ನತ ಕೌಟುಂಬಿಕ ಸಾಮರಸ್ಯಕ್ಕೆ ಸತ್ಪಥ ತೋರುವ ಹಬ್ಬವಾಗಿದೆ. ಸಾಮಾನ್ಯವಾಗಿ ನಮ್ಮಲ್ಲಿ ರಕ್ಷಾಬಂಧನ ಆಚರಣೆ ಮತ್ತು ರಾಖಿ ಹಬ್ಬದ ಆಚರಣೆ ಒಂದೇ ಎನ್ನುವ ಭಾವವಿದೆ. ಆದರೆ ಅವುಗಳಲ್ಲಿ ಸಾಮ್ಯತೆ ಇದೆಯೇ ವಿನಃ ಒಂದೇ ಅಲ್ಲ.

ರಾಖಿ ಹಬ್ಬ ದಕ್ಷಿಣ ಭಾರತದಲ್ಲಿ ಆಚರಣೆಯಲ್ಲಿ ಇರಲಿಲ್ಲ, ಆದರೆ ಈಗ ದೇಶದ ಎಲ್ಲ ಭಾಗಗಳಲ್ಲೂ ಈ ಹಬ್ಬದ ಆಚರಣೆ ಕಂಡುಬರುತ್ತದೆ. ಇದನ್ನು ರಾಜಸ್ಥಾನ, ಗುಜರಾತ್ ಹೀಗೆ ಉತ್ತರ ಭಾರತದ ಮನೆಮನೆಯಲ್ಲೂ ಆಚರಿಸುತ್ತಾರೆ. ಈ ಹಬ್ಬದಂದು ಸೋದರಿಯರು ಸಹೋದರರಿಗೆ ರಾಖಿಯನ್ನು ಕಟ್ಟುವ ಮತ್ತು ಸಿಹಿತಿನಿಸು ತಿನ್ನಿಸಿ ಆರತಿ ಎತ್ತಿ ಸಹೋದರನಿಗೆ ತನ್ನನ್ನು ನೋಡಿಕೊಳ್ಳುವ ಜವಾಬ್ದಾರಿಯ ಅರಿವು ಮೂಡಿಸುವದಾಗಿದೆ. ಆದರೂ ಇದು ಕೂಡ ಅಲ್ಲಿ ಮೂಲತಃವಾಗಿ ಇರಲಿಲ್ಲ. ಮ್ಲೇಂಛರ ಆಳ್ವಿಕೆ, ಆಕ್ರಮಣ, ದಬ್ಬಾಳಿಕೆ, ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ಪ್ರಾರಂಭವಾದ ನಂತರ ಹಿಂದೂ ಸಮಾಜದಲ್ಲಿ ತಮ್ಮ ಹೆಣ್ಣುಮಕ್ಕಳ ಮಾನ ಕಾಪಾಡಲು, ಯೋಗ್ಯ ರಕ್ಷಣೆ ನೀಡುವ ಸಂಕಲ್ಪ ತೊಡುವದಕ್ಕೋಸ್ಕರ ಈ ಆಚರಣೆ ಪ್ರಾರಂಭವಾಯಿತು, ಇಂದು ಕಂಕಣ ಎಂದರೆ ರಾಖಿ ಕಟ್ಟಿಕೊಂಡ ಪ್ರತಿಯೊಬ್ಬ ಸಹೋದರ ತನ್ನ ಸಹೋದರಿಯ ರಕ್ಷಣೆಗೆ ಕಂಕಣಬದ್ಧನಾಗಿ ನಿಲ್ಲುತ್ತಾನೆ ಎನ್ನುವ ಆಹಿತ್ಯ ಇದೆ. ಸ್ವಂತ ಸಹೋದರರನ್ನು ಹೊಂದದ ಸಹೋದರಿಯರು ಬೇರೆಯವರಿಗೆ ರಾಖಿ ಕಟ್ಟಿ ಅವರಿಗೆ ಸಹೋದರ ಸ್ಥಾನ ನೀಡುವ ಒಂದು ಮಹತ್ತರ ಅವಕಾಶ ಈ ಹಬ್ಬದಲ್ಲಿ ಅಡಗಿದೆ.

ಈ ರೀತಿ ಸಹೋದರತ್ವದ ಭಾವನೆ ಎಲ್ಲ ಕಡೆ ಪಸರಿಸುವ ಶಕ್ತಿ ಈ ಆಚರಣೆಯ ಹಿಂದೆ ಇದೆ. ಈ ಹಬ್ಬದ ಆಚರಣೆಯ ಹಿಂದೆ ಒಬ್ಬರಿಂದ ಮತ್ತೊಬ್ಬರಿಗೆ ಸಹೋದರತ್ವ ಹಂಚಿ ಮಹತ್ತರವಾದ ರಾಜಕೀಯ, ಸಾಮಾಜಿಕ ಮತ್ತು ಕೌಟುಂಬಿಕ ಚಿತ್ತಾರವನ್ನೇ ಬದಲಿಸಿದ ಅನೇಕ ಜ್ವಲಂತ ಘಟನೆಗಳು ಇವೆ. ಈ ತೆರನಾಗಿ ರಾಜಕೀಯ ಚಿತ್ರಣವನ್ನು ಬದಲಿಸಿದ ಒಂದು ಘಟನೆ ಅವಲೋಕಿಸೋಣ,

ಪುರವ ಅಂದರೆ ನಮ್ಮ ಇತಿಹಾಸದಲ್ಲಿ ಓದಿದ ಪೋರೆಸ್ಸ (ಗ್ರೀಕರು ಅವನನ್ನು ಈ ರೀತಿ ಕರೆಯುತ್ತಿದ್ದರು) ಮತ್ತು ಗ್ರೀಕ್ ದೊರೆ ಅಲೆಕ್ಸಾಂಡರ್ ಈ ಇಬ್ಬರ ನಡುವೆ ಜೇಲಂ ನದಿ ದಡದಲ್ಲಿ ಯುದ್ಧ ನಡೆದಾಗ ಶೂರಾಧಿಶೂರ ನಮ್ಮ ರಾಜ ಪೌರವ ಅಂದರೆ ಪೊರಸ್ಸ ಯುದ್ಧದಲ್ಲಿ ಗೆಲ್ಲುವುದು ಖಚಿತವಾಗಿರುತ್ತದೆ, ಆ ಭಯಂಕರ ಯುದ್ಧದ ನಿರ್ಣಾಯಕ ದಿನದ ಹಿಂದಿನ ರಾತ್ರಿ ಯುದ್ಧ ನಿಂತಮೇಲೆ ಅಲೆಕ್ಸಾಂಡರನ ಪತ್ನಿ, ಬಂಗಾರದ ಹರಿವಾಣದಲ್ಲಿ ಒಂದಿಷ್ಟು ಸಿಹಿತಿಂಡಿ, ರೇಷ್ಮೆ ಎಳೆಯಿಂದ ಮಾಡಿದ ರಾಖಿ ಮತ್ತು ಒಂದು ಪತ್ರ ಇಟ್ಟು ಪುರವ ತಂಗಿದ್ದ ಡೇರೆಗೆ ಕಳಸುತ್ತಾಳೆ. ಕಾರಣ ಅವಳು ಭಾರತೀಯ ಪದ್ಧತಿ ಬಲ್ಲವಳಾಗಿರುತ್ತಾಳೆ, ಭಾರತದ ದೊರೆಗಳು ಧರ್ಮಭೀರುಗಳು, ಆಚರಣೆಯಲ್ಲಿ ಶ್ರದ್ಧೆ ಇಟ್ಟವರು, ಆಚರಿಸಿದಂತೆ ಬಾಳುವವರು ಎಂದು ಅರಿತಿರುತ್ತಾಳೆ. ಅದೇರೀತಿ ದೊರೆ ಪೌರವನು ಪತ್ರ ಓದಿ ರಾಖಿ ಸ್ವೀಕರಿಸುತ್ತಾನೆ. ಮರುದಿನ ಯುದ್ಧದಲ್ಲಿ ಸೋತು ಸುಣ್ಣವಾದ ಅಲೆಗ್ಸಾಂಡರ್‌ಗೆ ಪೌರವನು ಕೈ ಮೇಲೆತ್ತಿ ಕತ್ತಿ ಬೀಸುವಾಗ ತನ್ನ ಕೈಯಲ್ಲಿ ಅಲೆಕ್ಸಾಂಡರನ ಹೆಂಡತಿ ಕಳಸಿದ್ದ ರಕ್ಷಾಬಂಧನ ನೋಡಿ ಹಾಗೆಯೇ ಕತ್ತಿ ಕೆಳಗಿಡುತ್ತಾನೆ. ತನ್ನ ಕಥೆ ಮುಗಿಯಿತೆಂದ ಅಲೆಕ್ಸಾಂಡರ್‌ಗೆ ಈ ದಿಢೀರ್ ಬೆಳವಣಿಗೆ ಕಂಡು ದಿಗ್ಭ್ರಮೆಗೊಂಡು ಕಾರಣ ಕೇಳಲು, ನಿನ್ನೆ ರಾತ್ರಿ ರಾಖಿ ಕಳಸಿ ನಿನ್ನ ಹೆಂಡತಿ ನನ್ನ ಸಹೋದರಿ ಆಗಿದ್ದಾಳೆ, ಸಹೋದರಿಯ ಮಾಂಗಲ್ಯ ಕಾಯುವುದು ಅವಳ ಅಣ್ಣನಾದ ನನ್ನ ಕರ್ತವ್ಯ ಎಂದು ಹೇಳುವ ದೊರೆ ಪುರವನ ಮಾತುಗಳು ಹಿಂದೂ ದೊರೆಗಳ ಆದರ್ಶದ ಪ್ರತೀಕವಾಗುತ್ತದೆ. ಹಿಂದೂಗಳು ಆದರ್ಶಕ್ಕಾಗಿ ಬಾಳುವವರು. ಜೀವನದಲ್ಲಿ ಆದರ್ಶ ದೊಡ್ಡದು, ಗೆಲುವಿಗಿಂತ ಜೀವನದ ಸಂಬಂಧಗಳು ದೊಡ್ಡವು, ಮೌಲ್ಯಯುತವಾದವು ಎಂದು ಭಾವಿಸುವವರು ನಾವು. ಹೀಗೆ ಒಂದು ರಾಖಿ ರಾಜಕೀಯ ಇತಿಹಾಸ ಬದಲಿಸಿದೆ. ಇಂತಹ ಉದಾಹರಣೆಗಳು ಹತ್ತು ಹಲವು ಕಂಡುಬರುತ್ತವೆ, ಚಿತ್ತೂರಿನ ರಾಣಿ ಕರ್ಣಾವತಿ ಹುಮಾಯೂನನಿಗೆ ರಾಖಿ ಕಳಸಿ ಸಹೋದರಿಯ ಭಾವನೆಯಲ್ಲಿ ಹುಮಾಯೂನನ ಸಹಾಯ ಪಡೆದು ಬಹದ್ದೂರ್ ಷಾ ಅವನನ್ನು ಮೆಟ್ಟಿನಿಂತ ಘಟನೆ ಕೂಡಾ ಇದೇ ಜಾಡನ್ನು ಹೋಲುತ್ತದೆ. ಹೀಗೆ ಪಾಶ್ಚಿಮಾತ್ಯರನ್ನೇ ಬದಲಾಯಿಸಿದ ಹಿನ್ನೆಲೆ ಈ ಆಚರಣೆಗಿದೆ. ಈ ಉತ್ಸವದ ಆಚರಣೆಯ ಮೂಲಕ ಸಮಾಜದಲ್ಲಿ ಬಂಧುತ್ವವನ್ನು ವ್ಯಾಪಕಗೊಳಸಬೇಕಾಗಿದೆ.

ಇನ್ನು ರಕ್ಷಾಬಂಧನದ ಬಗೆಗೆ ತಿಳಿದುಕೊಳ್ಳುವುದಾದರೆ, ಇದನ್ನು ಯಾರು ಯಾರಿಗೂ ಕಟ್ಟಬಹುದಾಗಿದೆ, ರಕ್ಷೆ ಕಟ್ಟುವುದರ ಮೂಲಕ ಸಮಾಜದ ಎಲ್ಲರಿಗೂ ಎಲ್ಲರೂ ಜವಾಬ್ದಾರರು, ಎಲ್ಲರ ರಕ್ಷಣೆ ಪರಸ್ಪರರ ಹೊಣೆ ಎಂಬ ಭಾವನೆ ಮೂಡಿಸುವ ಆಚರಣೆ ಇದಾಗಿದೆ. ಪುರಾಣಗಳಲ್ಲಿ ಉಲ್ಲೇಖವಾಗಿರುವಂತೆ ಇಂದ್ರ ಯುದ್ಧಕ್ಕೆ ಹೋಗುವಾಗಲೆಲ್ಲಾ ಅವನ ಹೆಂಡತಿ ಶಚೀದೇವಿ ರಕ್ಷೆ ಕಟ್ಟಿ ಕಳಸುತ್ತಿದ್ದಳಂತೆ, ಇದೇರೀತಿ ಕ್ಷತ್ರಿಯರಲ್ಲಿ ಯಾವುದೇ ಗುರುತರ ಕಾರ್ಯಕ್ಕೆ ಹೋಗುವಾಗ ಪುರುಷರಿಗೆ ಮಹಿಳೆಯರು ರಕ್ಷೆ ಕಟ್ಟಿ ಶುಭ ಹಾರೈಸಿ ಕಳಸುವ ಪದ್ಧತಿ ರೂಢಿಯಲ್ಲಿತ್ತು.

ಇಂದು ಮಾನವ ವಸ್ತ್ರಧಾರಣೆ ಪ್ರಾರಂಭಮಾಡಿದ ದಿನವೆಂದೂ ಹೇಳುತ್ತಾರೆ ಆದ್ದರಿಂದಲೇ ಈ ದಿನಕ್ಕೆ ನೂಲು ಹುಣ್ಣಿಮೆ ಎಂದು ಕರೆಯುತ್ತಾರೆ. ಅರ್ಥಾತ್ ಕೃತಜ್ಞತಾ ಸಮರ್ಪಣೆಯ ದಿನ. ಹಾಗೆಯೇ ಈ ಭೂಮಿಯ ಮೇಲೆ

ಜನ್ಮತಳೆದ ಮೇಲೆ ಪ್ರತೀ ವ್ಯಕ್ತಿಯು ಒಂದಿಷ್ಟು ಋಣಭಾರಗಳನ್ನು ನಿರ್ವಹಿಸಬೇಕಾಗುತ್ತದೆ. ಅದರಲ್ಲಿ ಪ್ರಮುಖವಾಗಿ, ದೇವಋಣ– ಮಾನವ, ಸೃಷ್ಟಿಯ ಉನ್ನತ ಸೃಷ್ಟಿ. ಅವನಿಗೆ ಯೋಚನಾ ಶಕ್ತಿಯಿದೆ, ಭಾಷಾ ಶಕ್ತಿಯಿದೆ, ನಿರ್ಮಾಣ ಶಕ್ತಿಯಿದೆ. ಇದನ್ನೆಲ್ಲ ನೀಡಿದ ದೇವನಿಗೆ ನಮ್ಮ ಋಣ ಸಂದಾಯವಾಗಬೇಕಾದರೆ ಅವನು ಒಂದಿಷ್ಟು ಜವಾಬ್ದಾರಿಗಳನ್ನು ನಿರ್ವಹಿಸಬೇಕು, ಸೃಷ್ಟಿ ಪೂರ್ತಿ ನನ್ನದಲ್ಲ, ಆದರೆ ಇದನ್ನು ಕಾಪಾಡುವ ಜವಾಬ್ದಾರಿ ಮಾತ್ರ ಪೂರ್ಣ ನನ್ನದೇ ಎನ್ನುವ ಅರಿವಿರಬೇಕು.

ಋಷಿ ಋಣ– ಇಂದಿನ ನಮ್ಮ ಸಂಸ್ಕೃತಿಯ ಮೂಲ ಋಷಿಗಳು, ಶ್ರುತಿಗಳೇ ನಮ್ಮ ಸನಾತನ ಧರ್ಮದ ಮೂಲ ಆಧಾರ. ನಮ್ಮ ಕಾಲಕಾಲದ ಪರಿಸ್ಥಿತಿಯ ಅವಶ್ಯಕತೆಯ ಆಧಾರದ ಮೇಲೆ, ಮಹರ್ಷಿಗಳ ವಿವೇಚನೆಯಿಂದ, ರಾಜರುಗಳ ಒಪ್ಪಿಗೆ ಮೇರೆಗೆ ರಚಿತವಾದ ಕಾನೂನುಗಳೇ ಸ್ಮೃತಿಗಳು. ಸ್ಮೃತಿಗಳು ಬದಲಾಗತಕ್ಕಂತಹವು. ಈ ವಿಚಾರವನ್ನು ಅರ್ಥಮಾಡಿಕೊಂಡು ಸಮಾಜವು ಸುಸ್ಥಿತಿಯಲ್ಲಿರುವಂತೆ ನಡೆದುಕೊಳ್ಳುವದೇ ಋಷಿ ಋಣವನ್ನು ತೀರಿಸುವ ದಾರಿ.

ಪಿತೃ ಋಣ– ನಾವೆಲ್ಲಾ ಒಂದಲ್ಲಾ ಒಂದು ವಂಶದ ಸಂಜಾತರು. ಎಲಾ ಹಿಂದೂಗಳು ಒಬ್ಬರಲ್ಲಾ ಒಬ್ಬ ಋಷಿಗಳ ಮೂಲದಿಂದಲೇ ಬಂದವರು. ಹಾಗಾಗಿಯೇ ಆ ವಂಶವನ್ನು ಸನ್ಮಾರ್ಗದಲ್ಲಿ ನಡೆಸಿ ವಂಶಗೌರವ ಹೆಚ್ಚಿಸುವ ಜವಾಬ್ದಾರಿಯೂ ನಮ್ಮ ಮೇಲಿದೆ. ಈ ಸಾಮಾಜಿಕ ಜವಾಬ್ದಾರಿಗಳನ್ನು ಪುನಃಪುನಃ ನೆನಪಿಸುವ ದಿನ ಇದಾಗಿದೆ.

ಶ್ರಾವಣ ಮಾಸದಲ್ಲಿ, ಹಿಂದೂಗಳ ಎಲ್ಲಾ ಪಂಗಡಗಳಲ್ಲಿ ಒಂದಲ್ಲ ಒಂದು ರೀತಿ ನೂಲಿನ ಧಾರಣೆ ನಡೆಯುತ್ತದೆ. ಬಹಳಷ್ಟು ಪಂಗಡಗಳಲ್ಲಿ ಉಪಾಕರ್ಮ ಎನ್ನುವ ಧಾರ್ಮಿಕ ಆಚರಣೆ ಕೈಗೊಳ್ಳಲಾಗುತ್ತದೆ, ಗಾಯತ್ರಿ ಜಪದೊಂದಿಗೆ ಧರಿಸಿರುವ ಹಳೆಯ ಜನಿವಾರದ ಎಳೆಗಳನ್ನು ಬದಲಿಸಿ ಹೊಸದೊಂದನ್ನು ಧರಿಸುವ ಕ್ರಮ ನಡೆಯುತ್ತದೆ. ಶ್ರಾವಣ ಮಾಸದ ಅನೇಕ ವ್ರತಗಳಲ್ಲಿ ನೂಲಿನ ಎಳೆಯನ್ನು ಕಟ್ಟಿಕೊಂಡು ಆಚರಿಸುವ ಪದ್ಧತಿ ನಮ್ಮಲ್ಲಿದೆ. ಇದು ಸಮಾಜಕ್ಕಾಗಿ ನಮ್ಮ ಕರ್ತವ್ಯಗಳನ್ನು ನೆನಪಿಸಿಕೊಳ್ಳುವಂತೆ ಮಾಡುತ್ತದೆ. ಪುರಾಣದಲ್ಲಿ ವರುಣ ದೇವನನ್ನು ಒಲಿಸಿಕೊಳ್ಳಲು ರಕ್ಷೆ ಕಟ್ಟಿಕೊಳ್ಳಬೇಕು ಎಂದು ಹೇಳಲಾಗಿದೆ. ಇದು ಒಂದು ರೀತಿಯಲ್ಲಿ ಸರಿಯಾಗಿಯೇ ಇದೆ. ಜೀವ ಜಗತ್ತಿಗೆ ನೀರು ಅತಿ ಮುಖ್ಯ. ಇದರ ಮೂಲವೇ ಮಳೆ, ಮಳೆಗಾಲದಲ್ಲಿ ಮಳೆ ಸಮೃದ್ಧವಾಗಿ ಬಂದರೆ ಕೆರೆಕಟ್ಟೆ ತುಂಬಿ ವರ್ಷವಿಡೀ ಜೀವ ಜಗತ್ತು, ಗಿಡ ಮರ, ಪ್ರಾಣಿ, ಪಕ್ಷಿ ಸಂಕುಲ ಉಳಿಯುತ್ತದೆ ಹೀಗಾಗಿ ಈ ರಕ್ಷೆ ಕಟ್ಟುವ ಹಬ್ಬ ಮಳೆಗಾಲದಲ್ಲೇ ಆಚರಿಸಲ್ಪಡುತ್ತದೆ. ಒಬ್ಬರಿಗೊಬ್ಬರು ರಕ್ಷೆಯನ್ನು ಕಟ್ಟಿ, ನಾವು ನಿಮಗೆ, ನೀವು ನಮಗೆ, ಎನ್ನುವ ಸಂದೇಶ ಸಾರುವುದು. ಸಮಾಜದ ಎಲ್ಲಾ ಸ್ತರಗಳ ಜನತೆ ಅವರರಿರುವಲ್ಲಿಗೆ ಹೋಗಿ ರಕ್ಷೆ ಕಟ್ಟಿ ಬಾಂಧವ್ಯ ವೃದ್ಧಿ ಮಾಡಲಾಗುತ್ತದೆ. ತನ್ನಿಮಿತ್ತ ನಾವು ಸೇವಿಕಾ ಭಗಿನಿಯರು ಗಡಿ ರಕ್ಷಣಾಪಡೆಯ ತರಬೇತಿ ಕೇಂದ್ರಕ್ಕೆ ಭೇಟಿಕೊಟ್ಟು, ಅಂದು ಅಲ್ಲಿ ತರಬೇತಿಯಲ್ಲಿರುವ ನೂರಾರು ಗಡಿ ಭದ್ರತಾ ಯೋಧರಿಗೆ ರಕ್ಷೆ ಕಟ್ಟಿ ಹಾರೈಸಿದೆವು. ಆ ಕ್ಷಣದಲ್ಲಿ ಅಲ್ಲಿಯ ಹಿರಿಯ ಅಧಿಕಾರಿಗಳು ಕಿರಿಯರು ಎಲ್ಲರೂ ತೋರಿದ ಬಾಂಧವ್ಯದ ಭಾವ, ಜೀವನದಲ್ಲಿ ಅವಿಸ್ಮರಣೀಯವಾಗಿದೆ. ನಮ್ಮ ದೇಶದ ಗಡಿ ರಕ್ಷಣೆ ಸದಾ ಕಾಲ ಕೆಲಸ ಮಾಡುತ್ತಿರುವ ಅವರಿಗೆ ನಮ್ಮ ರಕ್ಷೆಯ ಹಾರೈಕೆ!! ನಿಜವಾಗಲೂ ಅಂದು ಅದೊಂದು ಅರ್ಥಪೂರ್ಣ ಆಚರಣೆ ಅನ್ನಿಸಿತು. ಸೂತ್ರಕ್ಕೆ ಬದ್ಧ ರೇಷ್ಮೆಯ ಎಳೆಗಳು ತರುವ ಸಕಾರಾತ್ಮಕ ಬದಲಾವಣೆ, ಸ್ನೇಹ ಸಂಬಂಧ ವೃದ್ಧಿ ಮತ್ತು ತೇಜಸ್ವಿ ಹಿಂದೂ ರಾಷ್ಟ್ರದ ಪುನರ್ನಿರ್ಮಾಣಕ್ಕೆ ನಾವೆಲ್ಲರೂ ಬದ್ಧರು ಎಂದು ಸಾರುತ್ತದೆ.

***

ಬುದ್ಧ, ಬಸವ ಮತ್ತು ಗಾಂಧೀ

– ಪೋರ

ಪಳ ಪಳ ಹೊಳೆವ ಅರಮನೆಗಳವೆ
ಸುಳ್ಳು ಪ್ರತಿಧ್ವನಿಸುವ ಒಳಮನೆಗಳೂ
ಇವೆ ಕಛೇರಿಗಳ ಎತ್ತರ ಗೋಡೆಗಳ
ಮೇಲೆ ಆಳೆತ್ತರ ನಿಮ್ಮಗಳ ಚಿತ್ರ
ವಿದ್ಯುಕ್ತ ರಾರಾಜಿಸುತ್ತಿವೆ ನಿತ್ಯ

ನಾವಿಂದು ಇದ್ದೇವೆ ಎನ್ನುವುದಕೆ
ಪ್ರೀತಿ ಅಗತ್ಯ ಎಂಬ ಅರಿವಿಗೆ
ಬೆಳೆದಿದ್ದೇವೆ ಎಂಬ ಭ್ರಮೆಗೆ
ನೀವು ಹಿಂದೊಮ್ಮೆ ನಮ್ಮೊಡನಿದ್ದು
'ಇವ ನಮ್ಮವ' ಎಂದುದು ಸತ್ಯ

ಕವಿಯ, ವಿಚಾರವಾದಿಯ
ಕಮಟು ಕತ್ತಲೆ ಕೋಣೆಯ
ಪುಸ್ತಕ ಕಪಾಟುಗಳ ನಡುವೆ
ಗಂಧ ಕಡಿದು ಕೆತ್ತಿದ ನಿಮ್ಮ ಪ್ರತಿಮೆ
ಕತೆ ಕವನಗಳಿಗೆ ಸದಾ ಪ್ರೇರಣೆ

ಮಂತ್ರಿಗಳ ಮಹಲುಗಳು
ಟೋಪಿ ಹಾಕಿದವರ ಸಾಲು
ಅಮಲಿನ ನಡುವೆ ಬಾರಿ ಬಾರಿ
ಉದ್ಧರಿಸಿದ ಹೆಸರು ನಿಮ್ಮವು
ಎಚ್ಚರವಾದಾಗ ಮರೆತವು

ಹಾದಿಬದಿ ಮರದಡಿ ನೆರಳ
ಅಂಗಡಿ ತುಂಬಾ ಕಾಲು ಧೂಳು
ಬಳಪದ ಕಲ್ಲ ಪ್ರತಿಮೆಗಳು
ಕಾಸಿಗೆರಡು ಕೊಸರಿಗೊಂದು
ಅಗ್ಗದ ಮಾಲು ಬೇಡ ಇಂದು.

ರದ್ದಿ ಕಾಗದದ ಕುಪ್ಪೆಯಲ್ಲಿ
ಜೀವಂತ ಹೊಳೆವ ಚಿತ್ರಗಳು
ಸರ್ವಾಂತರ್ಯಾಮಿಗಳು
ಹುಡುಕಿದರೂ ಸಿಗಲೊಲ್ಲರಿ
ಇಣುಕಿದರು ಎದೆಯೊಳಗೆ!

ಬಯಲಾದಿರಿ ಹೋರಾಟಕ್ಕೆ
ನಮ್ಮ ಒಳದನಿಯಾಗಲಿಲ್ಲ
ದೊಡ್ಡ ದೊಡ್ಡ ತೈಲಚಿತ್ರವಾದಿರಿ
ಕೋಟಿ ಕೋಟಿ ಮಾರಾಟಕ್ಕೆ
ನಮ್ಮ ಕಣ್ಣಿವೆ ಅಡಿ ಸೇರಲಿಲ್ಲ

ಲಾಲಸೆಯ ಸಜ್ಜೆಮನೆ
ಕತ್ತಲು ಬೆತ್ತಲಾದ ಎಡೆ
ಮುಖವಾಡ ಕಳಚಿಟ್ಟು
ಬೆವರು ಸುರಿಸಿ ದುಡಿದೆಡೆ
ನೀವು ಕಾಣುವುದಿಲ್ಲ

ಗಳು ಗಳುಗಳ ಮೇಲೆ
ಗಳು ಗಳುಗಳ ರಥ ಕಟ್ಟಿ
ಎತ್ತರಿಸಿ ಮುಗಿಲಗೇರಿಸಿ
ಗಗನದೆತ್ತರ ದೇವರ ಹತ್ತಿರ
ಎತ್ತಿ ಸ್ಥಾಪಿಸಿದ್ದೇವೆ ನಿಮ್ಮ

ಏಕಾದಶ ದ್ವಾದಶ
ಅವತಾರಿಗಳಂತೆ
ನಿಮ್ಮ ದೇವರನ್ನಾಗಿಸಿ
ಕೈಮುಗಿದ ಮೇಲೆ
ನಮಗೆ ಭಯವಿಲ್ಲ.

***

ಲೆಕ್ಕ ಇರಬೇಕಲ್ಲವೇ? ಜೀವನದಲ್ಲಿ?

Mathematics Maha Mela (ಮೇಳ)

ಡಾ.ಸತ್ಯವತಿ ಮೂರ್ತಿ ಲಾಂಡನ್ ಮ್ಯಾಂಚೆಸ್ಟರ್

ನಾನು ನನ್ನ ಮಾತನ್ನ ಆರಂಭಮಾಡೋಕ್ಕೆ ಮೊದಲು ನಾನು ಯಾರು ಅಂತ ಹೇಳಬಿಡ್ತೇನೆ. ನೀವೆಲ್ಲರೂ ನನ್ನನ್ನು, ನನ್ನ ಆತ್ಮೀಯ ಗೆಳೆಯರನ್ನು ಎಲ್ಲರನ್ನೂ ಬಲ್ಲಿರಿ. ಆದರೂ ಇರಲಿ ಕೇಳಿ. ನಾನು ಜ್ಯಾಮಿತ್ರಿ ಅಂತ. ನನಗೆ ಗೊತ್ತು. ನಾನು ಹೇಳಿದ ಕೂಡಲೇ ನೀವೆಲ್ಲ ಹೌದಾ... ಅಂತ ರಾಗ ಎಳಿತೀರ ಅಂತ. ನೀವೆಲ್ಲ ಚಿಕ್ಕವರಿದ್ದಾಗ ನನ್ನನ್ನು ಕಂಡರೆ ತುಂಬ ಹೆದರ್ತಾ ಇದ್ರಿ ಅಲ್ವ? ಎಲ್ಲರೂ ಅಲ್ಲದಿದ್ದರೂ ಸುಮಾರು ಜನಕ್ಕೆ ನನ್ನ ಇರಸರಿಕೆ ಬಗ್ಗೆ ಹೆದರಿಕೆ ಇತ್ತು ಅನ್ನೋ ವಿಚಾರ ಆಗಿನ ಗಣಿತದ ಮೇಷ್ಟ್ರು ಹೇಳ್ತಿದ್ರು. ಅದಿರಲಿ. ನಿಮಗೆಲ್ಲ ಒಂದು ಪ್ರಸಂಗ ಹೇಳೋಣ ಅನ್ನಿಸಿತು. ಅವತ್ತೊಂದು ದಿನಾ ಏನಾಯ್ತು ಗೊತ್ತಾ?

ನಾನು ಒಂದು **Point** ನಲ್ಲಿ ನಿಂತಿದ್ದೆ. ಎಷ್ಟು ಹೊತ್ತು ಕಾದ್ರೂ ನಾನು ಹೇಳಿಕಳುಹಿಸಿದ ಅರಿತ್ಮೆಟಿಕ್ ಬರಲೇ ಇಲ್ಲ. ಏನಪ್ಪಾ ಮಾಡೋದು ಅಂತ ಹಾಗೇ **Straight Line** ಒಂದರಲ್ಲಿ ನಡೀತಾ ಇದ್ದೆ. ತಲೆ ತಗ್ಗಿಸಿ, ಬೆನ್ನು ಬಾಗಿಸಿ **Angle** ತರ ನಡೀತಾ ಇದ್ದ ನನ್ನನ್ನ **'Hello Geometry',** ಏನು ಈ ಕಡೆ?' ಅನ್ನೋ ಧ್ವನಿ ಎಚ್ಚರಿಸಿತು. ತಲೆ ಎತ್ತಿ ನೋಡಿದ್ರೆ ನನ್ನ ಎದುರಿಗೆ ಆಲ್ಜೀಬ್ರ ನಿಂತಿದ್ದ! "ಏನಯ್ಯ ಜಾಮಿಟ್ರಿ, ಬಹಳ ಅಪರೂಪ ಆಗಿಹೋದೆ, ಬಹಳ ದಿನಗಳಾಯ್ತು ನೋಡಿ. ಚೆನ್ನಾಗಿದೀಯಾ? ಮನೇಲಿ ಎಲ್ಲ ಚೆನ್ನಾಗಿದಾರ?" ಎಡೆಬಿಡದ ಅವನ ಪ್ರಶ್ನೆಗಳಿಗೆ ಸುಮ್ಮನೆ ಮುಗುಳು ನಕ್ಕು, **Acute Angle** ನಲ್ಲಿದ್ದ ನಾನು ತಲೆಯೆತ್ತಿ, "ಏನಯ್ಯ ಆಲ್ಜೀಬ್ರ? ಚೆನ್ನಾಗಿದೀಯ? ಈ ಅರಿತ್ಮೆಟಿಕ್‌ನ ಎಲ್ಲಾದ್ರು ನೋಡಿದ್ಯಾಪ್ಪ? ಅವನು ಇಷ್ಟೊತ್ತಿಗೇ ಬರಬೇಕಾಗಿತ್ತು. ಯಾಕೋ ಬರಲಿಲ್ಲ" ಎಂದೆ.

"ಇಲ್ವಲ್ಲಯ್ಯ ಯಾಕೆ ಅಷ್ಟು ಸೀರಿಯಸ್ಸಾಗಿ ಕೇಳ್ತಾ ಇದೀಯಾ? ಅದೂ ಅಲ್ಲದೆ ಈಗೀಗ ನಿಂದೂ ಅರಿತ್ಮೆಟಿಕ್‌ದೂ **Joint Variation**ನ್ನೇ ಹೊರತು **Inverse Variation** ಅನ್ನೋದೇ ಇಲ್ವಂತೆ". ಉಸಿರು ಬಿಡದೆ ಒಂದೇಸಮನೆ ಪ್ರಶ್ನೆ ಕೇಳುತ್ತಿದ್ದ ಅವನ ಗಂಟಲನ್ನು ನನ್ನಲ್ಲಿದ್ದ **'Semi Circle'** ನಿಂದ ಹಿಡಿದೆ. ನನ್ನ ಹಿಡಿತದಿಂದ ಉಸಿರು ಕಟ್ಟಿದ **Algibra, Altitudes** ನಡುವೆ ಸಿಕ್ಕಿಹಾಕಿಕೊಂಡ **'Orthocentre'** ನ ಹಾಗೆ ವಿಲವಿಲ ಒದ್ದಾಡತೊಡಗಿದಾಗ ನನ್ನ ಕೈ ಸಡಿಲ ಮಾಡಿದೆ. ಬಿಟ್ಟದ್ದೇ ತಡ **'Expressions'** ಗಳಲ್ಲಿ ಹುದುಗಿದ್ದ **H.C.F.** ಬಿಡುಗಡೆ ಅದಹಾಗೆ ಉಸಿರಾಡಿದ ಆಲ್ಜೀಬ್ರ. "ಏನಯ್ಯ, ಏನೋ ಸ್ನೇಹಿತ ಅಂತ ನಿನ್ನ ಹತ್ತಿರ ಬಂದರೆ ಹೀಗ್ಮಾಡೋದೆ?" ಅಂತ ಸಣ್ಣ ದನಿಯಲ್ಲಿ ಕೇಳಿದಾಗ ನನಗೂ ಅವನ ಬಗ್ಗೆ ಕನಿಕರ ಉಂಟಾಯ್ತು.

"ಅಲ್ಲಯ್ಯ ಅರಿತ್ಮೆಟಿಕ್‌ನ ನೋಡಿದ್ಯ ಅಂತ ಕೇಳಿದ್ರೆ ಏನೋ ಇತಿಹಾಸ ಒದರೋಕ್ಕೆ ಆರಂಭಮಾಡಿದೆಯಲ್ಲ? ಹೋಗಲಿ, ನಮ್ಮ ನಮ್ಮಲ್ಲೇ ಯಾಕೆ ಈ ಸಮಸ್ಯೆಗಳು? ಬಾ ಆ **Circle** ಹತ್ರ ಹೋಗಿ ನೋಡೋಣ. ಅರಿತ್ಮೆಟಿಕ್ ಸಿಗೋ **Probability** ಏನಾದ್ರೂ ಇದೆಯೋ ಅಂತ". ನನ್ನ ಮಾತನ್ನು ಕೇಳಿದ್ದೇ ತಡ **Data, To Prove** ಗಳನ್ನು ಫಾಲೋ ಮಾಡೋ **Proof** ನ ಹಾಗೆ ಆಲ್ಜೀಬ್ರ ನನ್ನನು ಹಿಂಬಾಲಿಸಿದ.

ಅಂತೂ ನಾವು **Assume** ಮಾಡ್ಕೊಂಡಹಾಗೇ ಆ **Circle**ನಲ್ಲಿ ಅರಿತ್ಮೆಟಿಕ್‌ನ ಕಂಡಾಗ ಎಷ್ಟೋ ಒದ್ದಾಡಿ **Rider** ಗೆ ಉತ್ತರ ಪಡೆದಾಗ ಆಗುವಷ್ಟು ಸಂತೋಷವಾಯ್ತು. ಓಡ್ಹೋಗಿ ಅವನ್ನ ತಬ್ಕೊಂಡೆ, **Internal Contacts** ಇರೋ **Circles**ನ ಹಾಗೆ.

"ಇದೇನಯ್ಯ ಹೀಗ್ಮಾಡ್ಬಿಟ್ಟೆ, ಏರ್ತೀನಿ ಅಂದೋನು ಇಷ್ಟು ಹೊತ್ತು ಕಾದ್ರೂ ಬರಲಿಲ್ಲ. ನನಗಂತೂ ಕಾದು ಕಾದು ಬೇಜಾರಾಗಿ ಹೋಯ್ತು..." ತಡವಾಗಿ ಬಂದದ್ದಕ್ಕೆ ಟೀಕಿಸಿದೆ.

"ಕ್ಷಮಿಸು ಜಾಮಿಟ್ರಿ, ನನ್ನ ಸಮಸ್ಯೆಗಳ **Combination** ನಲ್ಲಿ ನೀನ್ಹೇಳಿದ್ದು ಮರೆತೇಹೋಗಿತ್ತು." ಅಂದ ಅರಿತ್ಮೆಟಿಕ್.

"ಏನಯ್ಯ ಅದು ಅಂಥ **Problem** ಊ?" ಕಾತುರದಿಂದ ಕೇಳಿದೆ.

"ಅಯ್ಯೋ ಏನ್ಹೇಳಲೀಪ್ಪ, ಈ **'Mean'**ಉ, **'Median'**ಗಳು ಎಲ್ಲೋ ತಪ್ಪಿಸಿಕೊಂಡಿದ್ದು ಅವುಗಳನ್ನು ಹುಡುಕಿಕೊಂಡು ಬರೋಣ ಅಂತ ಹೊರಟ್ರೆ, ಈ **Fractions**ಉ ನಾವೂ ಬರುತ್ತೇವೆ ಅಂತ ಕಾಲಿಗೆ ತೊಡರಿಕೊಳ್ಳೋದೆ? ಅವುಗಳಿಂದ ಬಿಡಿಸ್ಕೊಂಡು ಬರೋ ಹೊತ್ಗೆ ಸಾಕಾಗಿ ಹೋಯ್ತು. ಅಲ್ಲಿಂದ ಹೊರಟು ಅಲ್ಲೆಲ್ಲೋ ಮಿಡಲ್ ಕ್ಲಾಸಿನಲ್ಲಿ ಅಲೀತಾ ಇದ್ದ ಮೀನು, ಮೀಡಿಯನ್‌ಗಳನ್ನ ಹಿಡಿದು ತಂದು ಮನೇಗೆ ಕಳಿಸಿದ್ಮೇಲೇ ನನಗೆ ನಿನ್ನ ನೆನಪಾದದ್ದು. ಅದಕ್ಕೇ ಓಡ್ಬಂದೆ, ಅಕಸ್ಮಾತ್ ಸಿಕ್ಕಿದರೂ ಸಿಗಬಹುದು ಅಂತ. ನನ್ನ ನೀರೀಕ್ಷೆ ಸುಳ್ಳಾಗಲಿಲ್ಲ. ಸದ್ಯ ಸಿಕ್ಕಿದ್ಯಲ್ಲ!".

"ಸಿಗೋದೇನಯ್ಯ ಬಂತು? ನಿನ್ನನ್ನೇ ಕಾಯ್ತಾ ಅಷ್ಟೊತ್ತಿನಿಂದ ನಿಂತಿದೀನಿ. ಅಂದ್ಹಾಗೆ ಇವರ ಪರಿಚಯ ನಿನಗೆ ಇಲ್ಲ ಅಂತ ಕಾಣತ್ತೆ ಅಲ್ವ? ಇವರು ಆಲ್ಜೀಬ್ರ ಅಂತ. ನಮ್ಮ ಆಫೀಸಿನಲ್ಲೇ ಇದಾರೆ." ಅಲ್ಜೀಬ್ರಾನನ್ನು ಪರಿಚಯಿಸಿದೆ.

"ಓಹೋ ಹಾಗಾ, ನಮಸ್ಕಾರ" ಅಂದ ಅರಿತ್ಮಿಟಿಕ್.

"ಇವ್ರಿಲ್ಲದೆ ಹೋಗಿದ್ರೆ ನಾನು ಇಷ್ಟೊತ್ತಿಗೆ ಹೊರಟು ಹೋಗಿರ್ತಿದ್ದೆ. ಏನೋ **'Relation'** ಬಂದ್ರು".

'ಥ್ಯಾಂಕ್ಯೂ ವೆರಿಮಚ್ ಆಲ್ಜೀಬ್ರ, ಇಂಥ ಒಳ್ಳೆ **'Fuction'** ಮಾಡಿರೋ ನಿಮಗೆ **'Compound Interest'** ನಲ್ಲಿ ಥ್ಯಾಂಕ್ಸ್ ಹೇಳಿದರೂ ಸಾಲದು',.ಕೃತಜ್ಞತೆಯನ್ನು ತೋರಿದ ಅರಿತ್ಮೆಟಿಕ್.

"ಅಯ್ಯೋ ಅಷ್ಟೆಲ್ಲ ಯಾಕೆ ಹೊಗಳ್ತೀರಿ ನನ್ನನ್ನ? ನಿಮ್ಮಿಬ್ಬರ ಸಹಾಯ ನನಗೇ ಹೆಚ್ಚಾಗಿ ಬೇಕಾಗಿರೋದು, ನಿಮಗೆ ಗೊತ್ತಿಲ್ದೇ ಇರಬಹುದು ನನ್ನ ಮಗಳು **Graph**ಉ ನಿಮ್ಮಿಬ್ಬರನ್ನೂ ಎಷ್ಟು ಇಷ್ಟಪಡ್ತಾಳೆ ಅಂತ. ಜಾಮಿಟ್ರಿ ಅಂಕಲ್ ಬಾಯಲ್ಲಿ ನಿಮ್ಮ ಹೊಗಳಿಕೆ ಕೇಳಿದ ಮೇಲಂತೂ ಅವ್ಳಿಗೆ ಯಾವಾಗ್ಲೂ ನಿಮ್ಮದೇ ಧ್ಯಾನ. ಯಾವಾಗ ನೋಡಿದ್ರೂ ಅರಿತ್ಮೆಟಿಕ್ ಮಾಮ, ಜ್ಯಾಮಿಟ್ರಿ ಮಾಮ ಇರಲೇ ಬೇಕು".

"ಆಯ್ತಾಯ್ತು ಒಬ್ಬರನ್ನೊಬ್ಬರು ಹೊಗಳ್ತ ಕೂತ್ಕೊಂಡ್ರೆ ಕೆಲ್ಸ ಅದ್ದಾಗೆ. ಅದಿರಲಿ ನಾವು ಅಂದ್ಕೊಂಡ ಪ್ರೋಗ್ರಾಂ ಇದೆಯೋ ಇಲ್ಲವೋ?" ತಮ್ಮಿಬ್ಬರ ಮಾತಿನಲ್ಲಿ ನನ್ನನ್ನೇ ಮರೆತಿದ್ದ ಅವರನ್ನು ಎಚ್ಚರಿಸಿದೆ.

''ಇಲ್ದೇ ಏನಯ್ಯ, ಈಗಂತೂ ಅಲ್ಜೀಬ್ರಾನೂ ನಮ್ಮ ಜೊತೇಲಿದಾರೆ ಅಂದ ಮೇಲೆ ಖಂಡಿತ ಉಂಟು' ಎಂದ ಅರಿತ್ಮೆಟಿಕ್.

''ಸರಿ ಮತ್ತೆ ಬನ್ನಿ ಹೋಗೋಣ" ಎನ್ನುತ್ತ ಹೊರಟೆ.

"ಹೌದೂ, ಪ್ರೋಗ್ರಾಂ ಏನು?" ತಲೆಬುಡವನ್ನರಿಯದ ಆಲ್ಜೀಬ್ರ ಕೇಳಿದ.

"ಅದೇ ನಮ್ಮ ಬಾಸ್ ಹೇಳ್ತಾ ಇದ್ರಲ್ಲ 'Indicies' ಡೈರೆಕ್ಟ್ ಮಾಡಿರೋ 'Logarithm' ಅನ್ನೋ ಸಿನೆಮ ಬಂದಿದೆ. ಅದರಲ್ಲಿ '+', '–' (ಪ್ಲಸ್ಸು, ಮೈನಸ್ಸೂ)ಸ್ಸೇ ಹೀರೋ ಹೀರೋಯಿನ್ನೂ ಅಂತ. ಅದಕ್ಕೇ ಹೋಗೋಣ ಅಂತ ಅಂದ್ಕೊಂಡ್ವಿ''. ತಕ್ಷಣವೇ ಉತ್ತರಿಸಿದ ಅರಿತ್ಮೆಟಿಕ್.

''ಹೌದಾ ನಾನೂ ಬರ್ತೀನಿ. ಬಹಳ ದಿನಗಳಿಂದ ಅದಕ್ಕೆ ಹೋಗ್ಬೇಕು ಅಂದ್ಕೊಂಡಿದ್ದೆ' ಒಂದ್ನಿಮಿಷ ಮನೇಗೆ ಪೋನ್ ಮಾಡಿಬಿಡ್ತೀನಿ". ಫೋನ್ ಮಾಡಿ ತಿಳಿಸಿದ್ದೂ ಆಯಿತು. ಬಹಳ ಉತ್ಸಾಹದಿಂದ ಇದ್ದ ಆಲ್ಜೀಬ್ರ ''ಅಂದ್ಹಾಗೆ ಅದು ಯಾವ ಥಿಯೇಟರ್ ನಲ್ಲಿದೆ'' ಕುತೂಹಲದಿಂದ ಕೇಳಿದ.

'ಅದೇಪ್ಪಾ ಅರಿತ್ಮೆಟಿಕ್ ಥಿಯೇಟರು' ಎನ್ನುತ್ತ ಹತ್ತಿರವೇ ಬಂದ ಆಟೋದತ್ತ ಕೈಬೀಸಿದೆ.

ಬಂದ ಆಟೋ ಏರಿ ಮೂವರೂ ಥಿಯೇಟರ್ ತಲಪಿದೆವು. ಯಾವ ಪ್ರಯಾಸವೂ ಇಲ್ಲದೆ 'Direct Common Tangent' ತರ ಟಿಕೆಟ್ಟೂ ಸಿಕ್ಕಿದಾಗ ನಮಗೆ ಅದ ಸಂತೋಷ ಅಷ್ಟಿಷ್ಟಲ್ಲ. ಒಳಗೆ ಹೋಗಿ 'Obtuse Angle' ನಲ್ಲಿದ್ದ ಕುರ್ಚಿಗಳಲ್ಲಿ ಕಾಲು ನೀಡಿ ಕುಳಿತಾಗಲೇ ಪ್ರಾರಂಭವಾಯಿತು ಹಾಡು. ಸಮಯಕ್ಕೆ ಸರಿಯಾಗಿ ತಲಪಿದ್ದೆವು.

"ಫಾರ್ಮುಲೇಗಳು ಬಹಳ ಇಂಟೆರೆಸ್ಟ್ಟೂ
ಅವು ಹೆಚ್ಚುತ್ತ ಹೋಗುವುವು ಕಲಿತಷ್ಟೂ

Plusಸು Minusಸು ಹಾಡುತಲಿ ಗೀತ
ಗುಣಿಸಿ ಭಾಗಿಸುವುದು ಜೀವನದ ಸಂಗಾತ
ಸಂಗೀತ ಸಾಹಿತ್ಯ ವೇದವು ಆಗಮ
ನಾಟ್ಯ ನಾಟಕ ಸರಸತಿಯ ಉಗಮ

Calculus ಇರಲಿ Analytical ಆಗ್ಲೀ
ಆಲ್ಜೀಬ್ರ ಅರಿತ್ಮೆಟಿಕ್ಕು ಪ್ರತ್ಯಕ್ಷವಲ್ಲಿ
ಎಲ್ಲರಿಗೂ Knownಉ ಅರಿತ್ಮೆಟಿಕ್ಕೂ
ಆಲ್ಜೀಬ್ರ ಯಾವಾಗ್ಲೂ Unknownಉ

Mathematics ಬದುಕಿಗೆ ಅಂಟಿದ ನಂಟು
ಅದಿಲ್ಲದೆ ಸಾಗಿರಲು ಜೀವನ ಕಗ್ಗಂಟು
ಬದುಕೊಂದು ಲೆಕ್ಕಾಚಾರ ಬಾಲ್ಯ ಯೌವನ ಮುಪ್ಪು
ಮುಗಿದಿರಲು ಕೊನೆಗೆ ಸಾವಿನಾ ಅಪ್ಪು

ಅರಿತ್ಮೆಟಿಕ್ ಹಾಗೂ ಆಲ್ಜೀಬ್ರ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡು ಮುಸಿಮುಸಿ ನಗುತ್ತಿರುವುದನ್ನು ಪಕ್ಕದಲ್ಲೇ ಕುಳಿತಿದ್ದ ನಾನು ಬಿಟ್ಟ ಕಣ್ಣುಬಿಟ್ಟಂತೆ ನೋಡುತ್ತಿದ್ದೆ. ದೀಪಗಳು ಆರಿ ಸಿನೆಮ ಅರಂಭವಾಗುತ್ತಿದ್ದಂತೆ ನಮ್ಮೆಲ್ಲರ ಗಮನ ತೆರೆಯ ಕಡೆಗೆ ಸರಿಯಿತು.

***



‘ಗೊಂಬೆ ಹಬ್ಬ’ – ಚಿತ್ರಕೃಪೆ: ಡಾ.ಶುಭಶ್ರೀ ಪ್ರಸಾದ್

ಸ್ವೀಕಾರ

- ರಾಧಿಕಾ ವಿ ಗುಜ್ಜರ್

ತಿಲಕ್ ನಗರ ಪೋಲೀಸ್ ಸ್ಟೇಷನ್‌ಗಿಂತ ಮೊದಲು ಬರುವ ಅಪಾರ್ಟ್‌ಮೆಂಟ್‌ಗಳ ಖಾಲಿ ರಸ್ತೆಯ ಪಕ್ಕ, ಗೋಣಿದಾರದಲ್ಲಿ ಮನೆಯ ಗೇಟೊಂದಕ್ಕೆ ಕಟ್ಟಿದ್ದ ಅಮೇರಿಕನ್ ಸ್ಪಿಟ್ಜ್ ನ್ನು ಹೋಲುತ್ತಿದ್ದ ಬಿಳಿಯ ನಾಯಿಯೊಂದು ಕಾಣಿಸಿತು. ಮನೆ ಖಾಲಿ ಮಾಡಿ ಹೋಗುವಾಗ ಸಾಕುನಾಯಿಯನ್ನು ಬಿಟ್ಟು ಹೋದ ಹೃದಯಹೀನ ಮಾಲೀಕನ ಕೃತ್ಯವಿದು ಎಂದು ತಕ್ಷಣ ಗೊತ್ತಾಯಿತು. ಗಾಡಿಯನ್ನು ಪಕ್ಕಕ್ಕೆ ಹಾಕಿ ಹತ್ತಿರ ಹೋಗಿ ನೋಡಿದಾಗ ಅದು ಹಿಂದಿನ ರಾತ್ರಿ ಸುರಿದ ಮಳೆಯಲ್ಲಿ ನೆನೆದು ತೊಪ್ಪೆಯಾಗಿ ಅಲ್ಲೇ ಸುಸ್ತಾಗಿ ಒರಗಿರುವಂತೆ ಕಾಣಿಸುತ್ತಿತ್ತು. ನಾಲಿಗೆ ಹೊರಚಾಚಿ ಮೆಲ್ಲನೆ ಉಸಿರಾಡುತ್ತಿತ್ತು. ಹತ್ತಿರ ಹೋಗಿ ಹಿಂದಿನಿಂದ ಬೆನ್ನು ಸವರಿದೆ. ಹಾಗೇ ಕುಸಿದು ಮಲಗಿದಂತೆ ಬಿದ್ದುಬಿಟ್ಟಿತು. ಗಾಡಿಯ ಡಿಕ್ಕಿಯಿಂದ ಹೆಲ್ಮೆಟ್ ಧರಿಸುವ ಮೊದಲು ತಲೆಗೆ ಕಟ್ಟುತ್ತಿದ್ದ ಚೌಕವನ್ನು ತಂದು ಅದರ ಬಾಯಿ ಮತ್ತು ಮುಂದಿನ ಕಾಲುಗಳನ್ನು ಸೇರಿಸಿ ಕಟ್ಟಿದೆ. ಗಾಡಿ ಒರೆಸಲು ಇಟ್ಟುಕೊಂಡಿದ್ದ ಟವಲ್‌ನಲ್ಲಿ ಅದನ್ನು ಸುತ್ತಿಕೊಂಡು ಹಿಂದೆ ಕುಳಿತಿದ್ದ ನನ್ನ ತಂಗಿಗೆ ಎತ್ತಿಕೊಳ್ಳಲು ಹೇಳಿ ಸೀದಾ ಬ್ಲೂ ಕ್ರಾಸ್ ಪಶು ಆಸ್ಪತ್ರೆಯತ್ತ ದೌಡಾಯಿಸಿದೆ.

ಭಾನುವಾರವಾದ ಕಾರಣ ನಾವಿಬ್ಬರೂ ಕಬ್ಬನ್ ಪಾರ್ಕಿನ ಬೆಳಗಿನ ವಾಕಿಂಗ್ ಮುಗಿಸಿ ವಾಪಸಾಗುತ್ತಿದ್ದೆವು ಮತ್ತು ಈ ದೃಶ್ಯವನ್ನು ನೋಡಿದ್ದೆವು. ಆಸ್ಪತ್ರೆ ಎದುರು ಸರದಿ ಸಾಲು ಬಹಳ ಉದ್ದವಿತ್ತು. ಸದಾ ನನ್ನಲ್ಲಿರುತ್ತಿದ್ದ ಕೇರ್‌ನ **(CARE – Charle's Animal Rehabilitation Centre)** ಸ್ವಯಂಸೇವಕಿ ಎಂಬ ಗುರುತು ಚೀಟಿ ತೋರಿಸುತ್ತಿದ್ದಂತೆಯೇ ಅಲ್ಲಿ ಎಲ್ಲರನ್ನೂ ಸರದಿಯಲ್ಲಿ ನಿಭಾಯಿಸುತ್ತಿದ್ದ ಹುಡುಗ ಒಳಗೆ ಹೋಗಿ ಪಶುವೈದ್ಯ ಸಹಾಯಕ ಗುಣನನ್ನು ಕರೆದುಕೊಂಡು ಬಂದ. ನನ್ನನ್ನು ನೋಡುತ್ತಲೇ ಆತನಿಗೆ ಗುರುತು ಹತ್ತಿತ್ತು. ಬಂದ ಕಾರಣ ಕೇಳಿದ. ಟವಲ್ನಲ್ಲಿ ಸುತ್ತಿಟ್ಟಿದ್ದ ನಾಯಿ ತೋರಿಸಿದೆ. ಮುಟ್ಟಿ ನೋಡಿದ ಆತ "ಒಂದು ರಕ್ತ ಪರೀಕ್ಷೆ ಮಾಡೋಣ. ಜ್ವರ ಬಹಳ ಇದೆ" ಎಂದು ಹಾಗೇ ಎತ್ತಿಕೊಂಡು ಒಳಹೊರಟ. ಏನು ಮಾಡಬೇಕೆಂದು ಯೋಚಿಸುತ್ತಿದ್ದ ನನ್ನನ್ನು ಕುರಿತು "ಒಂದು ಗಂಟೆ ಬಿಟ್ಟು ಬನ್ನಿ. ಬದುಕಿದ್ದರೆ ಹೇಳುತ್ತೇನೆ" ಎಂದ. ನಾನು ಮತ್ತು ತಂಗಿ ಜೋಲು ಮುಖ ಹಾಕಿಕೊಂಡು ಆಸ್ಪತ್ರೆಯಿಂದ ಹೊರಬಂದು ಮನೆ ಸೇರಿದೆವು. ಅಮ್ಮ ನಾವಿಬ್ಬರೂ ಬರುವುದನ್ನೇ ಕಾಯುತ್ತಿದ್ದವಳು, ಏನು ಹೇಳಿದಳು, ಏನು ತಿಂಡಿ ಕೊಟ್ಟಳು, ಎಷ್ಟು ತಿಂದೆವು ಒಂದೂ ಗೊತ್ತಿಲ್ಲ. ಒಂದು ಹೊಟ್ಟೆ ಕಿವುಚುವ ಕಸಿವಿಸಿ. ಮುದ್ದಾದ ಬಿಳಿಯ ತೊಯ್ದು ತೊಪ್ಪೆಯಾದ ನಾಯಿಯದೇ ಸುಡುವ ಯೋಚನೆ. ತಂಗಿಯ ರೂಮಿಗೆ ಇಣುಕಿದೆ. ಆಕೆ ತನ್ನ ಓದುವ ಮೇಜಿಗೆ ಎರಡೂ ಕೈಗಳನ್ನಿತ್ತು ಮಲಗಿ ಕಿಟಕಿಯಾಚೆ ಶೂನ್ಯದಲ್ಲಿ ನೋಡುತ್ತಾ ಕಳೆದಿದ್ದಳು. "ಬರ್ತೀಯಾ? ಆಸ್ಪತ್ರೆಗೆ ಮತ್ತೆ ಹೋಗೋಣ" ಎಂದೆ. "ನಾಯಿ ನೋಡಲು ?? ನಿಜಾ...?!!! ಬರ್ತಿನ್ ನಡಿ" ಎಂದು ಕಣ್ಣರಳಿಸಿದಳು.

ಇಬ್ಬರೂ ಆಸ್ಪತ್ರೆಗೆ ಹೋದವರು, ಗುಣಹೊರ ಬಂದರೆ ಕೇಳೋಣವೆಂದು ಸುಮ್ಮನೆ ಒಂದು ಬದಿಗೆ ನಿಂತೆವು. ಸ್ವಲ್ಪ ಹೊತ್ತಿನ ನಂತರ ಯಾರೊಡನೆಯೋ ಫೋನ್‌ನಲ್ಲಿ ಮಾತನಾಡುತ್ತಾ ಹೊರಬಂದ ಗುಣ ನಮ್ಮನ್ನು ನೋಡಿ "ಬ್ಲಡ್ ಟೆಸ್ಟ್‌ಗೆ ಕೊಟ್ಟಿದ್ದೇನೆ. ಜೀವಂತವಿದೆ. ಒಳ್ಳೆಯ ಜಾತಿಯ ಕ್ರಾಸ್‌ಬ್ರೀಡ್ ನಾಯಿ. ಜ್ವರಕ್ಕೆ ಇಂಜೆಕ್ಷನ್ ಹಾಕಿದ್ದೇನೆ. ನಾಳೆ ಬಂದುಬಿಡಿ. ನನ್ನ ಫೋನ್ ನಂಬರ್ ಇದೆ ಅಲ್ವಾ ಮೇಡಂ?" ಎಂದು ಒಂದೇ ಉಸಿರಿಗೆ ಹೇಳಿ ಅವಸರವಸರವಾಗಿ ಭಾನುವಾರದ ರಶ್ ನಿಭಾಯಿಸಲು ಮತ್ತೆ ಒಳಹೊರಟ. ಕೊಂಚ ಸಮಾಧಾನವಾಯಿತು.

ಮರುದಿನ ನಾನು ಆಫೀಸಿನಿಂದ ಹೊರಡುವಾಗಲೇ ತಂಗಿಗೆ ಕರೆ ಮಾಡಿ ಸಿದ್ಧವಿರಲು ತಿಳಿಸಿದ್ದೆ. ಆಸ್ಪತ್ರೆಯ ಗುಣನಿಗೆ ಸಂಜೆ ನಾಲ್ಕೂವರೆಗೆ ಕರೆ ಮಾಡಿದಾಗ "ವೈರಲ್ ಫೀವರ್ ಇದೆ. ಔಷಧಿ ಬರೆದು ಕೊಡುತ್ತಾರೆ ಡಾಕ್ಟರ್. ಆದಷ್ಟು ದ್ರವಾಹಾರದ ಮೇಲೆಯೇ ಇಡಿ. ವಾಂತಿ ಏನಿಲ್ಲ. ಜ್ವರವಿದೆಯೇ ಎಂದು ಪರೀಕ್ಷಿಸುತ್ತಿರಿ. ಯಾವುದಕ್ಕೂ ಗ್ಯಾರಂಟಿ ಅಂತೂ ಕೊಡಲಾರೆವು. ಅದಿರುವ ಕಂಡೀಶನ್ ನೋಡಿದರೆ ಅಬ್ಬಬ್ಬಾ ಎಂದರೆ ಎರಡು ಮೂರು ದಿನ. ಅದರ ಮೇಲೆ ಆಸೆ ಇಟ್ಟುಕೊಳ್ಳಬೇಡಿ ಮೇಡಂ. ವಯಸ್ಸು ಸುಮಾರು ನಾಲ್ಕು ವರ್ಷ ಎಂದಿದ್ದಾರೆ ಡಾಕ್ಟರ್." ಎಂದ.

ಅಲ್ಲಿಗೆ ಗಂಡು ನಾಯಿ, ನಾಲ್ಕು ವರ್ಷಗಳು, ಅಮೆರಿಕನ್ ಸ್ಪಿಟ್ಸ್ ಕ್ರಾಸ್ ಬ್ರೀಡ್ ಮತ್ತು ಗೊಟಕ್ ಎನ್ನಲು ಕ್ಷಣಗಣನೆಗೆ ತೊಡಗಿರುವ ಜೀವ ಎಂದು ತಿಳಿದಿತ್ತು. ನಾನು ರಕ್ಷಿಸಿರುವ ನಾಯಿಯ ವಿವರಗಳನ್ನು ಕೇರ್ ಸಂಸ್ಥೆಗೆ ನೀಡಿ, ಅದು ಬದುಕುಳಿದರೆ ನನ್ನ ಆಫೀಸಿನ ಬಿಡುವು ನೋಡಿಕೊಂಡು ತಂದು ಬಿಡುವುದಾಗಿ ತಿಳಿಸಿದೆ. ಮನೆಗೆ ಕರೆ ಮಾಡಿ ತಿಳಿಸಿದೆ. ಅಮ್ಮ ಆತಂಕದಿಂದ "ಮನೆಯಲ್ಲಿ ಎಷ್ಟು ದಿನವಿರುತ್ತದೆ? ಅದಕ್ಕೆ ಕಾಲಕಾಲಕ್ಕೆ ಬಹಿರ್ದೆಸೆಗೆ ಕರೆದುಕೊಂಡು ಹೋಗುವುದು ಹೇಗೆ?" ಎಂಬ ಮೊದಲ ಕ್ವೆಶ್ಚನ್ ಪೇಪರ್ ಇಟ್ಟಳು. ನಾನು ವೈದ್ಯರು ಹೇಳಿದ ವಿಷಯವನ್ನು ತಿಳಿಸಿ, "ಅದು ಬದುಕುವುದು ಸ್ವಲ್ಪ ಕಷ್ಟವಿದೆ. ಹಾಗೆ ಬದುಕಿದರೆ ತಕ್ಷಣ ಏರ್ಪೋರ್ಟ್ ರಸ್ತೆಯ ಕೇರ್ ಗೆ ತೆಗೆದುಕೊಂಡು ಹೋಗಿ ಬಿಟ್ಟು ಬರುತ್ತೇನೆ" ಎಂದು ಮಾತುಕೊಟ್ಟೆ.

ದಸರಾ ಹಬ್ಬದ ದಿನಗಳವು. ಪಂಚಮಿಯಂದು ಮನೆಗೆ ಬಂದಿದ್ದ. ಬಾಚಿ ಬಡಿಯುವ ಜ್ವರ ಹಾಗೂ ನಿಶ್ಶಕ್ತಿಯಲ್ಲೂ ಆತ ನಡುಗುತ್ತ ನಿಧಾನ ನಡೆದು ಬಚ್ಚಲು ಮನೆಗೆ ಹೋಗಿ ಶೌಚ ಮಾಡಿ ಬಂದಿದ್ದ. ಅಮ್ಮನಿಗೆ ಆಶ್ಚರ್ಯ. ನಾಯಿಗಳಿಗೆ ವಾಸನೆಯನ್ನು ಗ್ರಹಿಸುವ ವಿಶೇಷ ಶಕ್ತಿ ಇರುತ್ತದೆ ಮತ್ತು ಈತ ಸಾಕಿದ ನಾಯಿಯಾದ್ದರಿಂದ ತನ್ನ ಈ ಮೊದಲಿದ್ದ ಮಾಲೀಕ ನೀಡಿದ ತರಬೇತಿ ಪಾಲಿಸುತ್ತಿದ್ದಾನೆ ಎಂದೆ. ಹಳೆಯ ಬೆಡ್‌ಶೀಟ್ ಒಂದನ್ನು ಮಡಿಸಿ ಅಪ್ಪನ ಹಳೆಯ ದೊಡ್ಡ ಜೀನ್ಸ್ ಪ್ಯಾಂಟ್ ಮೇಲೆ ಹಾಕಿ ಮಲಗಲು ಸಿದ್ಧಮಾಡಿದ್ದೆ. ಹಾಲಿನಲ್ಲಿ ಒಂದು ದಿನ ಮಲಗಿದ ಆತ, ಮರುದಿನ ತಂಗಿಯ ಮಂಚದ ಕೆಳಗೆ ತನ್ನ ಹಾಸಿಗೆಯನ್ನು ಎಳೆದುಕೊಂಡು ಹೋಗಿ ತನ್ನಿಷ್ಟದಂತೆ ಮುದ್ದೆ ಮಾಡಿಕೊಂಡು ಮಲಗಿದ್ದ. ಆತ ನಮ್ಮನ್ನು ತನ್ನ ಕುಟುಂಬವಾಗಿ ಸ್ವೀಕರಿಸಿದ್ದ. ಅಪ್ಪ, ಅಮ್ಮ, ನಾನು ಮತ್ತು ಕಾಲೇಜು ಓದುತ್ತಿದ್ದ ತಂಗಿಯನ್ನು ಅಂಗೀಕರಿಸಿದ್ದ. ಕೇರ್‌ಗೆ ಕರೆದುಕೊಂಡು ಹೋಗಿ ಆತನನ್ನು ಅಲ್ಲಿಯ ವೈದ್ಯರಿಂದ ಒಂದು ಸಂಪೂರ್ಣ ಚೆಕ್‌ಅಪ್‌ಗೆ ಒಳಪಡಿಸಿದೆ. ಆತನ ದತ್ತು ಸ್ವೀಕಾರದ ಕಾಗದ ಪತ್ರ ತಯಾರಿಸಿ ಮತ್ತೆ ಮನೆಗೆ ಕರೆದು ತಂದೆ. ಮತ್ತು ಆತ ಅತ್ಯಂತ ಸಹಜವಾಗಿ ಮನೆಯ ಮೊದಲನೆಯವನಾಗಿ ಬೌಗುಡುತ್ತಾ ಮನೆ ಕಾವಲಿನ ನಾಯಕತ್ವ ಸ್ವೀಕರಿಸಿದ್ದ.

ಆತನೇ "ಬರ್ಫಿ". ಇದ್ದ ಬದ್ದ ಔಷಧ, ಟಾನಿಕ್, ಮಾತ್ರೆ, ಮತ್ತೊಂದು ನುಂಗಿ ಬಿಳಿಯ ಮೃದು ಚೆಂಡಿನಂತಿದ್ದ ಬಹದ್ದೂರ್ ಗಂಡು. ಎಂದೂ ಯಾರ ಮಾತೂ ಕೇಳುತ್ತಿರಲಿಲ್ಲ. ಸಿಟ್, ಸ್ಟ್ಯಾಂಡ್, ರೋಲ್, ಫೆಚ್ ಎಲ್ಲಾ ನಾವೇ ಬಡ್ಕೊಬೇಕು. ಆತ ಮಾತ್ರ ಪಾಲಿಸಲೇ ಇಲ್ಲ. ಅಪ್ಪ ಟಿವಿ ನೋಡುವಾಗ ಸೋಫಾ ಹತ್ತಿ ತೊಡೆಯ ಮೇಲೆ ಮಲಗಿಸಿಕೊಳ್ಳಲು ಉಯ್... ಊಯ್... ಗುಡುತ್ತಾ ಆಗ್ರಹಿಸುತ್ತಿದ್ದ. ಅಪ್ಪನಂತೆಯೇ ಗೊರಕೆ ಹೊಡೆಯುತ್ತಿದ್ದ. ಅವರು ಮನೆಗೆ ಬರುತ್ತಲೇ, ಜೇಬಿನಿಂದ ಆತನಿಗಾಗಿ ಕೊಡಲು ಹೊರತೆಗೆಯುತ್ತಿದ್ದ ಚಿಕ್ಕ ಮಿಲ್ಕ್ ಬಿಕೀಸ್ ಪೊಟ್ಟಣಕ್ಕಾಗಿ ಜಿಗಿದು ಸುತ್ತುತ್ತಿದ್ದ. ಬಿಸ್ಕಿಟ್ ಎರಡೂ ಕಾಲಿನ ಮಧ್ಯ ಇಟ್ಟು, ಚಿಕ್ಕ ಚಿಕ್ಕ ತುಂಡಾಗಿ ತಿನ್ನುತ್ತಾ, ಕಣ್ಮುಚ್ಚಿ ಸವಿಯುತ್ತಾ ಕಳೆದುಹೋಗುತ್ತಿದ್ದ. ಚಹಾದಲ್ಲಿ ಅದ್ದಿದ ಬಿಸ್ಕಿಟ್ ಅಪ್ಪ ಮತ್ತು ಆತನಿಗೆ ಬಲು ಪ್ರಿಯ!! ನಾನು ಮತ್ತು ತಂಗಿ ಸೇರಿ ಕಟಿಂಗ್ ಮಾಡಿ ಸ್ನಾನ ಮಾಡಿಸಿದರೆ ಪರಮಾನಂದ. ಯಕ್ಷಗಾನದ ಕಿರಾತನಿಗಿಂತ ಜೋರಾಗಿ ತಿರುಗಿ

ಕುಣಿದು ಕುಪ್ಪಳಿಸಿ ಇಡಿಯ ಮನೆ ಹಸಿ ಮಾಡುತ್ತಿದ್ದ. ತಂಗಿಯ ಕಾಲೇಜ್ ಗೆಳೆಯರ ದಂಡು ಮನೆಗೆ ಬಂದರೆ ಖುಷಿಯೋ ಖುಷಿ. ಎಲ್ಲರನ್ನು ಮೂಸಿ, ಬಾಲ ಅಲುಗಿಸಿ ಕೈಕಾಲಲ್ಲಿ ಅಚ್ಚ ಬಿಳಿಯ ಚೆಂಡಾಗುತ್ತಿದ್ದ. ಅವರೆಲ್ಲ ಬ್ಯುಸಿನೆಸ್, ಲೂಡೋ, ಕಾರ್ಡ್ಸ್ ಆಡುತ್ತಾ ಕಿರುಚಾಡುತ್ತಿದ್ದರೆ ಈತ ಯಾರದ್ದಾದರೂ ಬೆನ್ನ ಹಿಂದೆ ಹಾಸಿ ಬಿದ್ದುಕೊಂಡು ಗೊರಕೆ ಸೇದುತ್ತಿದ್ದ. ನಿತ್ಯ ನನ್ನ ಸ್ಕೂಟಿ ಮೇಲೆ ಒಂದು ರೌಂಡ್ ಹಾಕಲೇಬೇಕು. ನನ್ನಂತೆ ಆತನೂ ತಿರುಗಲು ತಿಪ್ಪ. ಓಡಿ ಬಂದು ಹತ್ತಿಬಿಡುತ್ತಿದ್ದ. ಗಾಳಿಗೆ ಬಾಯಿ ತೆಗೆದು ಹುಚ್ಚನಂತೆ ತಲೆಯಲುಗಿಸಿ ಕೂಲ್ ಕೂಲ್ ಆಗುತ್ತಿದ್ದ. ಇಡೀ ದಿನ ಅಮ್ಮನೊಡನೆ ಇರುತ್ತಿದ್ದನಾದರೂ ತಂಗಿ ಬಂದ ಕೂಡಲೇ ಪಕ್ಷಾಂತರ ಮಾಡುತ್ತಿದ್ದ. ಹೇಳಿ ಕೇಳಿ ಹುಟ್ಟಾ ಶ್ವೇತ (ಖಾದಿ ಅಲ್ಲ) ಕೇಶಧಾರಿ. ಪಕ್ಷಾಂತರ ಮಾಡದೆ ಏನು??!! "ನಿನ್ನ ಅಕ್ಕಂದಿರಂತೆ ನೀನೂ ಕೆಲಸದ ಮಟ್ಟಿಗೆ ನನ್ನ ಮಾಮೂ ಮಾಡ್ತೀಯ ಚೋಟಾ. ಬಾಲ ಉದ್ದ ಆಯ್ತು, ಕಟ್ ಮಾಡ್ತೀನಿ ಕತ್ತೆ (!!!????)" ಎಂದು ಆಕೆಯಿಂದ ಬೈಸಿಕೊಳ್ಳುತ್ತಿದ್ದ.

ಮಕ್ಕಳನ್ನು ಕಂಡರೆ ಗುರುಗುಟ್ಟಿ ಓಡಿಸುತ್ತಿದ್ದವ, ನಾನು ಮೊದಲ ಬಾಣಂತನಕ್ಕೆಂದು ಮನೆಗೆ ಬಂದಾಗ ಸದಾ ನನ್ನ ಮಂಚದ ಬಳಿ ಸುಳಿಯುತ್ತಾ, ಒಮ್ಮೆ ಮೂಸಿ ನೋಡಿ ಹೊಟ್ಟೆಗೆ ತನ್ನ ಕಾಲಿನಿಂದ ಒಮ್ಮೆ ಸವರಿ ಮತ್ತೆ ಹೋಗಿ ನಿದ್ದೆ ಬುರುಕಿ ತಂಗಿಯ ಮಂಚದ ಕೆಳಗೆ ಮಲಗುತ್ತಿದ್ದ ನಿದ್ದೆ ಬುರುಕ. ಕೂಸು ಹುಟ್ಟಿದ ನಂತರ ಜೋಳಿಗೆಯ ಕೆಳಗೆ ಠಿಕಾಣಿ ಹಾಕಿದ್ದ. ಕೊಂಚವೂ ಸದ್ದು ಮಾಡುತ್ತಿರಲಿಲ್ಲ. ನನ್ನ ಮಗಳು ಹುಟ್ಟಿದ ಮರು ತಿಂಗಳು ದಸರಾ ವಿಜಯ ದಶಮಿ ಮುಗಿಸಿ ದ್ವಾದಶಿಯಂದು ಸೀಮೋಲ್ಲಂಘನ ಮಾಡಿದ.

ಶಿಸ್ತು, ಸ್ವಚ್ಛತೆ, ಮಿತಾಹಾರದ ಸಂದೇಶವನ್ನು ಬಿತ್ತಿದ. ಅಮ್ಮನ ಮಡಿಲಲ್ಲಿ ಪ್ರಾಣ ಬಿಡುವಾಗಲೂ ಆಕೆಯ ಕೈ ಸವರುತ್ತಾ, ಸಾಂತ್ವನ ಹೇಳುತ್ತಾ ಹೊರಟ. ಇವತ್ತೋ ನಾಳೆಯೋ ಸಾಯುತ್ತದೆ, ಪಾಪೀ...ಜೀವ ಎಂದುಕೊಳ್ಳುತ್ತಾ ಆರೈಕೆಗಾಗಿ ಮನೆಗೆ ಕರೆತಂದಿದ್ದ ದತ್ತಾತ್ರೇಯ ಮಿತ್ರ ಈಗ ನಮ್ಮ ನೆನಪುಗಳಲ್ಲಿ ಚಿರಂಜೀವಿಯಾಗಿ ಬಿಟ್ಟಿದ್ದಾನೆ. ನೂರಾರು ಜಂಜಾಟಗಳನ್ನು, ಅಹಂಗಳನ್ನು, ಭಿನ್ನಾಭಿಪ್ರಾಯಗಳನ್ನು ಎಳೆದುಕೊಂಡು ಬದುಕುವ ಮನುಜರೆಂಬ ನಮಗೆ ಆತ ಸರಳವಾಗಿ ಬದುಕುವುದನ್ನು, ಬದುಕನ್ನು ಪ್ರೀತಿಸುವುದನ್ನು, ಕೌಟುಂಬಿಕ ಬದ್ಧತೆಯನ್ನು ಕಲಿಸಿದ.

ನಾವು ನಾಲ್ವರೂ ಪ್ರಾಪ್ತ ವಯಸ್ಕರಿದ್ದೆವು. ಯಾರೂ, ಯಾರೊಡನೆಯೂ ತೊಡರಿಕೊಳ್ಳುತ್ತಿರಲಿಲ್ಲ. ಅಗತ್ಯವಿದ್ದರೆ ಮಾತ್ರ ನಮ್ಮನ್ನು ತೆರೆದುಕೊಳ್ಳುತ್ತಿದ್ದೆವು. ನಮ್ಮೆಲ್ಲರದು ನಮ್ಮದೇ ಆದ ರೀತಿ, ನೀತಿ, ಕಾನೂನು, ಸ್ವಂತಿಕೆ, ಸ್ವಭಾವಗಳಿದ್ದವು. ಅದನ್ನು ಆತನೂ ಕಲಿತುಬಿಟ್ಟಿದ್ದ. ತನಗೆ ಮತ್ತೆ ಬದುಕಲು ಸಿಕ್ಕ ಅವಕಾಶವನ್ನು ಆತ ಅತ್ಯಂತ ಸಾರ್ಥಕವಾಗಿ ಉಪಯೋಗಿಸಿಕೊಂಡು ಮತ್ತೂ ಚೆನ್ನಾಗಿ ಬದುಕಿ, ಬಾಳಿ, ನಮಗೂ ಧೈರ್ಯದ ಪಾಠವಾಗಿದ್ದ. ಪ್ರಾಣಿಗಳ ಬಗ್ಗೆ ನಮ್ಮೆಲ್ಲರಿಗಿದ್ದ ಪ್ರೀತಿಯನ್ನು ನೂರ್ಮಡಿಗೊಳಿಸಿದ. ಬರ್ಫಿ, ಬರ್ಫಿಯಂತಹ ಸಿಹಿಯಾಗಿಯೇ ನಮ್ಮ ನೆನಪುಗಳೆಂಬ ನಾಲಗೆಯ ಮೇಲೆ ಜೀವಂತ ಕಥೆಯಾಗಿ ಉಳಿದುಬಿಟ್ಟ. ಆತನಿಗೆ ನಾವು ಚಿರಋಣಿ.

***

ಕುಕ್ಕರಾಯಣ

– ಅನ್ನಪೂರ್ಣ ಸುಬ್ಬರಾವ್

ನನ್ನ ತಂಗಿಗೆ ಮೊದಲ ಮಗು ಹುಟ್ಟಿದ ಸಮಯ. ಆಗ ಅವರು ಮಾರತ್ತಳ್ಳಿಯಲ್ಲಿ ವಾಸವಿದ್ರು. ನಾನು ತುರುವೇಕೆರೆಯಲ್ಲಿದ್ದೆ. ಹನ್ನೊಂದನೇ ದಿನ ಮಗು ಬಾಣಂತಿಗೆ ಮಂಗಳಸ್ನಾನ ಎಲ್ಲರೂ ಬನ್ನಿ ಎಂದು ಬುಲಾವ್ ಬಂತು. ಯಜಮಾನ್ರು ರಜೆ ಇಲ್ಲದ ಕಾರಣ ನೀನು, ಅಮ್ಮ ಹೋಗಿಬನ್ರಿ. ಇಷ್ಟಕ್ಕೂ ಅಲ್ಲಿ ಬಂದು ನಾವೇನ್ ಮಾಡೋಡಿದೆ ಅಂದ್ರು. ಹೆಣ್ಮಕ್ಕಳ ಕಾರ್ಯಕ್ರಮಕ್ಕೆ ಹೋಗೋದೂ ಅಂದ್ರೆ ಮುಂಚಿನಿಂದಲೂ ಅವರಿಗೆ ಅಷ್ಟಕ್ಕಷ್ಟೇ. ನನ್ನ ಎರಡುವರ್ಷದ ಮಗನನ್ನು ಕರೆದುಕೊಂಡು ಅತ್ತೆಯ ಜೊತೆ ಬೆಂಗಳೂರಿಗೆ ಬಂದಾಗ ಮಧ್ಯಾಹ್ನ ಎರಡು ಗಂಟೆ. ಮೆಜೆಸ್ಟಿಕ್ ನಿಂದ ಮಾರತ್ತಳ್ಳಿ ಬಸ್ ಹಿಡಿದು ಮನೆ ಸೇರೋ ಹೊತ್ತಿಗೆ ನಾಲ್ಕು ಗಂಟೆ!!

ನಾನು ಬರುವ ಮೊದಲೇ ಇನ್ನೂ ಕೆಲವರು ಬಂದು ಆಗಲೇ ಠಿಕಾಣಿ ಹಾಕಿದ್ರು. ಕೂಡು ಕುಟುಂಬ. ಮನೆ ತುಂಬಾ ಜನ. "ರಾತ್ರಿಗೆ ಎಲ್ಲರಿಗೂ ಅಡಿಗೆ ಆಗ್ಬೇಕು. ಬಾಣಂತಿಗೆ ನಾಳೆ ನೀರು, ರಾತ್ರಿಗೆ ಸಿಹಿ ಮಾಡ್ಬೇಕು ಕಣೆ. ಅನ್ನಸಾರು ತೊವ್ವೆ ಪಾಯ್ಸನಾದ್ರು ಮಾಡ್ಬೇಕು" ಅಂದ್ರು. ನಾನು 'ಮಾಡ್ತೀನಿ ಬಿಡಿ ಅತ್ತೆ' ಅಂದೆ.

'ಇಷ್ಟು ಜನಕ್ಕೆ ಆಗ್ಬೇಕು ಮಾಡ್ತೀಯಾ' ಅಂದ್ರು.

"ಅಯ್ಯೋ, ಇದ್ಯಾವ ದೊಡ್ಡ ಕೆಲ್ಸ ಅತ್ತೆ. ಹೆಣ್ಮಕ್ಳು ಅಡಿಗೆ ಮಾಡೋಕೆ ಕಷ್ಟ ಅಂದ್ರೇ ಹೇಗೇ.. ನಮ್ಮನೇಲಿ ಮಾಡಲ್ವ. ಇದೇನು ಬೇರೆ ಮನೇನಾ. ನೀವು ಅಡಿಗೆ ಚಿಂತೆ ಬಿಡಿ. ನಾನು ನೋಡ್ಕೋತೀನಿ" ಅಂತ ಏನೋ..ಹೇಳ್ಬಿಟ್ಟೆ.

ಇನ್ನೇನು ಸಂಜೆ ಆಗಿದೆ. ಈಗ್ಲಿಂದನೇ ಶುರು ಮಾಡಿದ್ರೆ ಒಳ್ಳೇದು ಅಂಡ್ಕೊಂಡು, ತರಕಾರಿ ಏನಿದೆ ನೋಡೋಣ ಅಂತ ಅಡುಗೆಮನೆ ಹೊಕ್ಕೆ.

"ಎಷ್ಟೊತ್ತೆ, ಕುಕ್ಕರ್ ಇಟ್ರೆ ಅರ್ಧ ಗಂಟೇಲಿ ಅಡಿಗೆ ಆಗುತ್ತೆ, ಇಷ್ಟು ಬೇಗ ಯಾಕೆ. ಇನ್ನೂ ಅರ್ಧಗಂಟೆ ಬಿಟ್ಟು ಇಟ್ರಾಯ್ತು ಬಿಡು" ಅಂದ್ರು. ತಕ್ಷಣ ನಾನು ಗಾಬರಿಯಿಂದ "ಕುಕ್ಕರ ..!!" ಅಂದೆ.

"ಯಾಕೇ..? ಅಷ್ಟು ಗಾಬರಿಯಿಂದ ಬಾಯ್ ಬಿಡ್ತೀಯಲ್ಲ" ಅಂದ್ರು.

"ನಂಗೆ ಕುಕ್ಕರಲ್ಲಿ ಮಾಡಕ್ ಬರಲ್ಲ ಅತ್ತೆ. ನಂಗೆ ಅದೆಲ್ಲ ಅಭ್ಯಾಸ ಇಲ್ಲ" ಅಂದೆ. ನಾನು ಕುಕ್ಕರ್ ನೋಡ್ತಿರೋದೆ ಇವತ್ತು. ಹೇಗಪ್ಪಾ ಕುಕ್ಕರಲ್ಲಿ ಅಡಿಗೆ ಮಾಡೋದೂಂತ ಅಂದ್ಕೊಂಡೆ. ಮನಸಲ್ಲಿ. ನಾನು ಮನಸಲ್ಲಿ ಅಂದುಕೊಂಡಿದ್ದು ಗೊತ್ತಾಯ್ತೇನೋ ಅನ್ನೋಹಾಗೆ, ಅವರೇ ಬಂದು ಸಹಾಯ ಮಾಡಿ, "ಹೀಗಿಡ್ಬೇಕು ಕಣೇ... ನೋಡಿಲ್ಲಿ" ಅಂತ ಬಟ್ಟಲುಗಳನ್ನು ಜೋಡಿಸುವುದು ಹೇಗೆಂದು ತೋರಿಸಿಕೊಟ್ರು.

"ಇದನ್ನು ಒಲೆ ಮೇಲಿಟ್ಟು ಅಂಟಿಸು. ಹತ್ತು ನಿಮಿಷದಲ್ಲಿ ಕುಕ್ಕರ್ ಕೂಗುತ್ತೆ. ಹೆದರ್ಕೋಬೇಡ. ಒಳಗಿರೋ ಅಕ್ಕಿಬೇಳೆ ಬೆಂದಿದೆ ಅಂತ ಹೇಳೋಕೆ ಶಿಳ್ಳೆ ಹಾಕುತ್ತೆ. ಮೂರು ಸಾರಿ ಶಿಳ್ಳೆ ಹಾಕಿದ್ಮೇಲೆ ಒಲೆ ಆರಿಸಿ, ಸ್ವಲ್ಪ ಹೊತ್ತು ಬಿಟ್ಟು ತೆಗೆದ್ರೆ ಆಯ್ತು. ಅನ್ನಬೇಳೆ ಬೆಂದಿರುತ್ತೆ. ಆಚೆ ತೆಕ್ಕೊಂಡು ಸಾರು ಕೂಡಿಟ್ರೆ ಆಯ್ತು ಅಷ್ಟೇ. ಒಂದು ಸಾರಿ ಮಾಡು, ನಿಂಗೆ

ಅಭ್ಯಾಸ ಆಗುತ್ತೆ. ಆಮೇಲೆ ಹೇಳಸ್ಕೊಳ್ದೆ ನೀನೇ ಮಾಡ್ತೀಯ" ಅಂದವರು ನನ್ನ ಕೈಲೇ ಕುಕ್ಕರ್ ಇಡಿಸಿ ಎಲ್ಲರೂ ಬಾಣಂತಿ ರೂಮು ಸೇರಿಕೊಂಡ್ರು. ನಾನು ಕುತೂಹಲದಿಂದ ಕುಕ್ಕರ್ ಹೇಗೆ ಶಿಳ್ಳೆ ಹಾಕುತ್ತೆ ಅಂತ ಕಣ್ ಕಣ್ ಬಿಟ್ಕೊಂಡು ನೋಡ್ತಾ ನಿಂತೆ, ಎಂದೂ ನೋಡದವಳ ಹಾಗೇ..!!

ಇಷ್ಟಕ್ಕೂ ನೋಡಿದ್ರೆ ತಾನೇ.!! ಇದೇ ಮೊದ್ಲು ನೋಡ್ತಿರೋದು . ಏನೋ ಕುತೂಹಲ..!!

ನಿಂತಿದ್ದ ಹಾಗೆನೇ ಹತ್ತೇ ನಿಮಿಷದಲ್ಲಿ ಕುಕ್ಕರ್ ಸಿಳ್ಳೆ ಹಾಕ್ತು, ಗಾಬರಿಯಿಂದ ಮಾರು ದೂರ ಹಾರಿಬಿಟ್ಟಿದ್ದೆ .ಮೊದಲ ಶಿಳ್ಳೆಗೆ ನಿಜಕ್ಕೂ ನಾನು ಬೆಚ್ಚಿಬಿದ್ದಿದ್ದೆ ಮಕ್ಕಳ ಹಾಗೆ. ಮೂರು ಸಾರಿ ಅಂದಿದ್ರಲ್ಲ. ಸ್ವಲ್ಪ ಸಾವರಿಸಿಕೊಂಡು ಮೂರು ಶಿಳ್ಳೆ ಆದ್ಮೇಲೆ, ಭಯದಿಂದಲೇ ಹೋಗಿ ಸ್ಟೌವ್ ಆರಿಸಿ ದೂರ ಬಂದು ನಿಂತೆ. ಅವರಿನ್ನೂ ನಾಳನ ಕಾರ್ಯಕ್ರಮದ ಬಗ್ಗೆ ಮಾತಾಡ್ತಾನೇ ಇದ್ರು.

ಕುಕ್ಕರ್ ಎಷ್ಟು ಹೊತ್ತಿಗೆ ಬಿಡುತ್ತೆ ಅಂತ ನಂಗೆ ಗೊತ್ತಿಲ್ಲ. ಅವರೂ ಇಷ್ಟು ಹೊತ್ತು ಬಿಡ್ಬೇಕು ಅಂತ ಹೇಳ್ಲಿಲ್ಲ.! ಸ್ವಲ್ಪ ಹೊತ್ತು ಆಂದಿದ್ರಲ್ಲ, ಸ್ವಲ್ಪ ಹೊತ್ತು ಆಯ್ತಲ್ಲಾಂತ ವೈಟ್ ತೆಗೆದುಬಿಟ್ಟೆ. ತೆಗೆದಿದ್ದೆ ತಡ, ಜೋರಾಗಿ ಶಬ್ದ ಮಾಡ್ತಾ, ಕುಕ್ಕರಲ್ಲಿದ್ದ ಅನ್ನ ಎಲ್ಲ ಸುಯ್ ಅಂತ ಮೇಲಕ್ಕೆ ಹೋಯ್ತು. ಆ ಶಬ್ಧಕ್ಕೆ ಭಯಪಟ್ಟು ನಾನು ಹಿಂದಕ್ಕೆ ಓಡಿಬಂದೆ. ಶಬ್ಧ ಕೇಳಿದ್ದೆ ರೂಮಲ್ಲಿದ್ದವರೆಲ್ಲ ಆಚೆ ಬಂದು ಏನಾಯ್ತೆ... ಏನಾಯ್ತು..? ಅಂತ ಒಂದೇ ಸಮ ಗಾಬರಿಯಿಂದ ಕೇಳಿದ್ರು.

ನಾನು ಪೆದ್ದುಪೆದ್ದಾಗಿ "ಇದನ್ನು ತೆಗೆದುಬಿಟ್ಟೆ ಅತ್ತೆ" ಅಂತ ಕೈಲಿದ್ದ ವೈಟನ್ನು ಅವರ ಮುಂದೆ ಹಿಡಿದಿದ್ದೆ. ಹೌದು..!!

ಮೇಲೆ ಹೋದ ಅನ್ನ ಎಲ್ಲ ಎಲ್ಲಿಗ್ಹೋಯ್ತು ಅಂತ ನೋಡ್ತೀನಿ ಅನ್ನ ಎಲ್ಲ ಚಾವಣಿ ಮೇಲ್ಹೋಗಿ ಕೂತಿದೆ.!

"ಅಲ್ವೇ, ಅಷ್ಟೂ ಗೊತ್ತಾಗಲ್ವಾ ನಿಂಗೆ. ಕುಕ್ಕರ್ ತಣ್ಣಗಾಗ್ಬೇಕೂಂತ ಹೇಳಿದ್ನಲ್ಲ ಅಷ್ಟು ಬೇಗ ಯಾಕೆ ತೆಗೆದೆ" ಅಂದ್ರು.

"ತಣ್ಣಗಾಗ್ಬೇಕು ಅಂತ ನೀವು ಹೇಳ್ಲಿಲ್ಲ ಅತ್ತೆ, ಸ್ವಲ್ಪ ಹೊತ್ತು ಬಿಟ್ಟು ಅಂದ್ರಿ, ಆದಕ್ಕೆ.."ಅಂತ ಪೆಚ್ಚಾಗಿ ತಲೆ ಕೆಳಗೆ ಹಾಕ್ದೆ.

ನನ್ನ ಪೆಚ್ಚುಮೋರೆ ನೋಡಿ, ಪಾಪ ಅವರಿಗೆ ಏನನ್ನಿಸ್ತೋ, ಅನ್ನ ಹೋದ್ರೆ ಹೋಗ್ಲಿ ಕಣೆ, ಮುಖಕ್ಕೆ ಸಿಡಿದಿದ್ರೆ ಏನ್ಗತಿ ಹೇಳು. ನಿನ್ನ ಪುಣ್ಯ ಚೆನ್ನಾಗಿತ್ತು. ಮತ್ತೆ ವೈಟ್ ಹಾಕಕ್ಕೆ ಹೋಗ್ಲಿಲ್ವಲ್ಲ" ಅಂದ್ರು..!

ಹೌದು...!! ನಾನ್ಯಾಕೆ ಇಷ್ಟು ಪೆದ್ದಿ ಆದೇ. ಅಂತ ಅಳು ಬಂದುಬಿಡ್ತು. ಅಲ್ಲಿ ನಿಲ್ಲದೆ ರೂಮಿಗೆ ಹೋದೆ. ಪಾಪ ನನ್ನ ಅವಸ್ಥೆ ನೋಡಿ ತಂಗಿಗೂ ಬೇಜಾರಾಯ್ತು. ಸಮಾಧಾನ ಮಾಡಿದ್ಲು. 'ಹೋಗ್ಲಿ ಬಿಡೆ. ಅದಕ್ಯಾಕ್ ಬೇಜಾರ್ ಮಾಡ್ಕೋತೀಯ. ಈವಾಗ್ ಗೊತ್ತಾಯ್ತಲ್ಲ. ನಾಳೆ ಸರಿಯಾಗಿ ಮಾಡ್ತಿ ಬಿಡು, ಅಳ್ಬೇಡ. ಅವರ ಬುದ್ಧಿ ಹಾಗೆನೇ, ಮುಖದ ಮೇಲೆ ಹೊಡೆದ ಹಾಗೇ ಹೇಳೋದು. ನಿಧಾನಕ್ಕೆ ಹೇಳೋಕೆ ಬರೋದೇ ಇಲ್ಲ ಅವ್ರಿಗೆ. ಮೊದಲನೇ ಸಲ ನಂಗೂ ಹೀಗೇ ಆಗಿತ್ತು ಕಣೆ. ಆಮೇಲೆ ಅಭ್ಯಾಸ ಆಯ್ತೂನ್ನು. ನಿಂಗೂ ಗೊತ್ತಾಯ್ತಲ್ಲ.. ಇನ್ನು ಹಾಗಾಗಲ್ಲ ಬಿಡು.' ಅಂದ್ಲು. ಆಮೇಲೆ ನಾನೇ ಸಮಾಧಾನ ಮಾಡ್ಕೊಂಡೆ. ಇನ್ನೊಂದು ಸಲ ಹೀಗಾಗಲ್ಲ. ಕಲಿತೀನಿ ಅಂತ..

ಕುಕ್ಕರ್ ತೆಗೆದು ನೋಡಿದ್ರೆ ಏನಿದೆ? ಖಾಲಿ ಬಟ್ಟಲಲ್ಲಿದ್ದ ಅಷ್ಟು ಅನ್ನನೂ ಮೇಲೆ ಹೋಗಿ ಕೂತಿದೆ. ಕೆಳಗಿನ ಬಟ್ಟಲಲ್ಲಿ ಬೆಂದ ಬೇಳೆ ಮಾತ್ರ ಇತ್ತು. ಅದನ್ನು ಆಚೆ ತೆಗೆದು, ಮತ್ತೆ ಅದೇ ಕುಕ್ಕರಲ್ಲಿ ಅನ್ನ ಮಾಡಿದ್ದಾಯ್ತು. ಮೇಲೆ ಕೂತಿದ್ದ ಅನ್ನವನ್ನು ಕೆಳಗಿಳಸೋಕೆ ಒಂದು ದಿನ ಬೇಕಾಯ್ತು..ಅನ್ನಿ.!!

ಈಗ ಆ ಸೀನೇ ಇಲ್ಲ. ಕರಗತ ಆಗೋಗಿದೆ. ಹೀಗಿತ್ತು ನೋಡಿ, ಕುಕ್ಕರಾಯಣದ ನನ್ನ ಮೊದಲ ಅನುಭವ...!!!!!

***

ಗಡಿಬಿಡಿ ಗೌರಿ

– ಮಾಲತಿ ಶ್ರೀನಿವಾಸನ್

ಗಡಿಬಿಡಿ ಗೌರಿ ಗಡಿಬಿಡಿ ಗೌರಿ
ಏನಿದು ನಿನ್ನ ದಿನಚರಿಯ ಪರಿ,

ಕಾಯಕವೇ ಕೈಲಾಸವೆನುತ,
ಕ್ಷಣದಲಿ ಮಾಡುವೆ ನೂರಾರು
ಕೆಲಸ, ನಾ ಸುಮ್ಮನೆ ನೋಡುವೆ
ನಿನ್ನ ಬೇಸರಿಸಿದ ನಗು ಮೊಗದ
ಸೊಗಸ.
ನೇಸರನೇಳುವ ಮೊದಲೇ ನಿನ್ನ
ಬೆಳಗು, ಅವನೊಡನಾಟದಿ,
ನಿನ್ನ ಕಾಯಕ ಒಳಗೂ ಹೊರಗೂ.
ನಿಷೆಯಲಿ ಚಂದ್ರನ ಮಡಿಲಲಿ
ಕನಸು, ಸುಖ ನಿದ್ರೆಯಲಿ
ನಾಳಿನ ಚಿಂತೆಯ ದೂರ ಸರಿಸು.

ಗಡಿಬಿಡಿ ಗೌರಿ ಗಡಿಬಿಡಿ ಗೌರಿ
ಏನಿದು ನಿನ್ನ ದಿನಚರಿಯ ಪರಿ.

ಮುಸ್ಸಂಜೆಯಲ್ಲಿ ಹರೆಯದ
ಹುರುಪಲಿ, ದಿನಕ್ಕೊಂದು
ನವಭಾವ ಸ್ಫುರಿಸು, ಸಂತಸದಲಿ
ದಶಕಗಳ ಸರಿಸು. ಮನದೆಲ್ಲ
ನೋವ ಮನದಲಿ ಅಡಗಿಸಿ
ಸುತ್ತಲೆಲ್ಲರ ನಗೆಗಡಲಲಿ ತೇಲಿಸು.

ಗಡಿಬಿಡಿ ಗೌರಿ ಗಡಿಬಿಡಿ ಗೌರಿ
ಏನಿದು ನಿನ್ನ ದಿನಚರಿಯ ಪರಿ.

ದಿನದ ಗಂಟೆಯ ತಾಸು ಸಾಲದು.
ನೂರಾರು ಆಸೆ. ಆಮಿಷಗಳ
ಬಾಳದು,
ಆರಕ್ಕೆ ಏರದೆ ಮೂರಕ್ಕೆ ಇಳಿಯದೆ
ಲಾಭ ನಷ್ಟಗಳ ಲೆಕ್ಕ ಇಡದೆ,
ಸದಾ ಸಂಯಮ ಸಹನೆಯ
ಸ್ವೀಕೃತಿ ಭಾವ, ಆ ಗೌರಿಯ ಶಕ್ತಿಯೇ
ನಿನ್ನಲಿ ಸಾಕ್ಷಾತ್ಕರಿಸಿದ ಹಾವಭಾವ.

ಗಡಿಬಿಡಿ ಗೌರಿ ಗಡಿಬಿಡಿ ಗೌರಿ
ಏನಿದು ನಿನ್ನ ದಿನಚರಿಯ ಪರಿ.

***

ತದಪಿ ನ ಮುಂಚತ್ಯಾಶಾ ಪಾಶಃ

(ಆಶಾ ಪಾಶ, ಮೋಹಜಾಲ ಬಿಡದು ಯಾರನ್ನೂ)

– ಟಿ. ಎಸ್. ಶ್ರವಣ ಕುಮಾರಿ

“ಬಾಲ ಸ್ತಾವತ್ ಕ್ರೀಡಾಸಕ್ತಃ ತರುಣ ಸ್ತಾವತ್ ತರುಣೀ ಸಕ್ತಃ। ವೃದ್ಧ ಸ್ತಾವತ್–ಚಿಂತಾಮಗ್ನಃ ಪರಮೇ ಬ್ರಹ್ಮಣಿ ಕೋಽಪಿ ನ ಲಗ್ನಃ”. ಯಾವ ಪರಿಸರದಲ್ಲಾದರೂ ಇರಲಿ; ಆಯಾ ವಯಸ್ಸಿನಲ್ಲಿ ಅದದೇ ಆಕರ್ಷಣೆ. ಆ ಆಕರ್ಷಣೆಯೇ ಜೀವನ. ಇಲ್ಲದಿದ್ದರೆ ಜಗತ್ತು ಮುಂದುವರೆಯುವುದಾದರೂ ಹೇಗೆ? ಭಗವಂತನಲ್ಲಿ ಮನಸ್ಸು ನೆಡುವುದು ಮೋಹದಲ್ಲಿ ಬೀಳುವಷ್ಟು ಸುಲಭವೇ! ಎಂಥೆಂತಾ ಋಷಿಮುನಿಗಳೂ ಗೆದ್ದವರಿಲ್ಲ ಈ ಮಾಯಾಮೋಹದ ಆಕರ್ಷಣೆಯನ್ನು; ಇನ್ನು ನಮ್ಮಂತ, ಸುತ್ತಮುತ್ತ ಕಾಣುವಂತ ಸಾಮಾನ್ಯರು?! ಸದಾ ಆಸ್ಪತ್ರೆಯಲ್ಲಿರುತ್ತಾರೆಂದು ವೈರಾಗ್ಯ ಬರಲು ಸಾಧ್ಯವೇ? ಮನೆಯಾದರೂ, ಆಸ್ಪತ್ರೆಯಾದರೂ, ಪಾರ್ಕಾದರೂ, ಕಡೆಗೆ ದೇಗುಲವೇ ಆದರೂ... ಇದೇ ಅಲ್ಲವೇ ಜೀವನ?!

*

ರಾತ್ರಿಯ ಪಾಳಿ ಮುಗಿಸಿ ಇಂದಿನ ಸಂಜೆಯ ರಸಘಳಿಗೆಗಳ ನಿರೀಕ್ಷೆಯಲ್ಲಿ ಪಾಳಿ ಮುಗಿಯಲು ಕಾಯುತ್ತಿದ್ದ ಡ್ಯೂಟಿ ಡಾಕ್ಟರಿಗೆ ಸಿಡಿಲಿನ ಆಘಾತ. ಇಂದಿನ ರಾತ್ರಿಯೂ ಅವಳದ್ದೇ ಪಾಳಿಯೆಂದು ಮಾಹಿತಿ ಬಂದಿದೆ ಎಂದು ತೀವ್ರ ನಿಗಾ ಘಟಕದ ಮುಖ್ಯ ಡಾಕ್ಟರು ಹೇಳಿದ ತಕ್ಷಣ ಅವಳ ಮುಖ ಕೋಪದಿಂದ ಕೆಂಪೇರಿತು. “ಯಾಕಂತೆ? ಇನ್ನೆರ್ಡು ದಿನ ನಂಗೆ ಹಾಕೋ ಹಾಗಿಲ್ವಲ್ಲ. ಮತ್ಯಾಕೆ ಹಾಕಿದಾರೆ?” ಎಂದು ಖಾರವಾಗಿ ಮುಖ್ಯ ಡಾಕ್ಟರನ್ನು ಕೇಳಿದಳು. “ಅದೇ ಆ ಮೇಡಂ ಶಿಷ್ಯ ಡ್ಯೂಟಿ ಡಾಕ್ಟ್ರಿನ ಅಮ್ಮನಿಗೆ ಹುಷಾರಿಲ್ವಂತೆ; ಅವ್ನು ನಿನ್ನೆ ರಾತ್ರೀನೇ ಊರಿಗೆ ಹೋದ್ನಂತೆ. ಸಾಧ್ಯವಾದ್ರೆ ನಾಳೆ ಸಂಜೆ, ಇಲ್ಲಾಂದ್ರೆ ಸೋಮ್ವಾರ ಬರೋದೂಂತ ಹೇಳಿ ಹೋಗಿದಾನಂತೆ. ನಿಜ್ವೋ; ಸುಳ್ಳೋ. ಮೇಡಂ ಕೈಲಿ ಶಿಫಾರಸ್ಸು ಮಾಡ್ಸಿ ವೀಕೆಂಡ್ ಡ್ಯೂಟಿ ತಪ್ಪಿಸ್ಕೊಂಡಿರ್ಬೇಕು.“ ಎನ್ನುತ್ತಾ ಅವಳ ಕಣ್ಣನ್ನೇ ನೋಡಿದರು. “ಅವ್ನಿಗ್ಮಾತ್ರ ಅರ್ಜೆಂಟ್ ಕೆಲ್ಸವಿದ್ಯಾ; ನಮ್ಗಿರಲ್ವಾ. ಯಾವಾಗ್ಲೂ ವೀಕೆಂಡೇ ಕೆಲ್ಸಗಳು ಹುಟ್ಕೊಳತ್ವಾ? ಎಲ್ಲಾ ಮೋಸ. ನಾನು ಜೂನಿಯರ್ ಅಂತ ಹಿಂಗೆ ಆಟವಾಡಿಸ್ತಾರೆ. ಎಲ್ರೂ ಸೆಲ್ಫಿಶ್. ತಮಗ್ ಬೇಕಾದವ್ರಿಗೆ ಫೇವರ್ ಮಾಡ್ತಾರೆ. ನಂಗ್ಯಾರೂ ಗಾಡ್‌ಫಾದರ್ ಇಲ್ವಲ್ಲಾ” ಎನ್ನುತ್ತಾ ಉರಿಕಾರತೊಡಗಿದಳು. ಹಾಗೆಂದು “ನೀನು ಹೋಗು; ನಾನು ನೋಡ್ಕೋತೀನಿ” ಎಂದು ಆ ಡಾಕ್ಟರು ಹೇಳಲಿಲ್ಲವಲ್ಲ! ಕೂಗಾಡುತ್ತಲೇ ಪಾಳಿ ಮುಗಿಯಲು ಕಾಯುತ್ತಾ ಸರಬರ ಓಡಾಡುತ್ತಿದ್ದಳು..

ಅದೇ ಸಮಯಕ್ಕೆ ಸರಿಯಾಗಿ ನನ್ನ ಚಿಕ್ಕ ಮಗಳು ಏನೋ ಧಾವಂತದಿಂದ ನನ್ನನ್ನು ನೋಡಿಕೊಂಡು ಹೋಗಲು ಬಂದಳು. ಅವಳು ತುಂಬಾ ಸೂಕ್ಷ್ಮ ಮನಸ್ಸಿನವಳು. ರಾತ್ರಿ ಕನಸಲ್ಲಿ ಏನನ್ನು ಕಂಡಿದ್ದಳೋ, ಯಾವ ಆತಂಕ ರಾತ್ರಿಯೆಲ್ಲಾ ಕಾಡಿಸುತ್ತಿತ್ತೋ, ಬೆಳಗಾಗುತ್ತಲೇ ನೋಡಲು ಓಡಿ ಬಂದಿದ್ದಳು. ಡ್ಯೂಟಿ ಡಾಕ್ಟರ ಕಣ್ಣಿಗೆ ಅವಳು ಬಿದ್ದದ್ದೇ ತಡ, ಮೊದಲೇ ಹೊಗೆ ಕಾರುತ್ತಿದ್ದ ಬೆಂಕಿಗೆ ಕಿಡಿ ತಗುಲಿದಂತಾಗಿ ಭಗ್ಗನೆ ಹೊತ್ತಿಕೊಂಡು. “ನಿನ್ನನ್ಯಾರು ಒಳಗ್ಬಿಟ್ಟದ್ದು. ಈ ಹೊತ್ನಲ್ಲಿ ವಿಸಿಟಿಂಗ್ ಅವರ್ಸ್ ಬಿಟ್ಟು ಹೀಗೆ ಬೇಕಾದಾಗೆಲ್ಲಾ ಬಂದುಹೋಗಕ್ಕೆ ಇದೇನು ಸಂತೆನಾ? ಎಲ್ಲಾ ಪೇಶೆಂಟ್ಸಿಗೂ ಬೆಡ್‌ಪ್ಯಾನು, ಸ್ಪಂಜ್‌ಬಾತು ಕೊಡ್ತಿರ್ತಾರೆ. ಅವ್ರಿಗೆ ಪ್ರೈವೆಸಿ ಬೇಡ್ವಾ. ನಡಿ, ನಡಿ ಹೊರಗೆ” ಎನ್ನುತ್ತಾ ನನ್ನ ಕಕ್ಷೆಯತನಕ ಬಂದಿದ್ದವಳನ್ನು ನನ್ನನ್ನು ನೋಡಲು ಸಹಾ ಬಿಡದೆ ಕತ್ತು ಹಿಡಿದು ನೂಕಿದಂತೆ ಕಳಿಸಿಬಿಟ್ಟಳು. ಕಣ್ಣಲ್ಲಿ ನೀರು ತುಂಬಿಕೊಂಡು ಹೋದವಳನ್ನು ನೋಡಿದ ತಕ್ಷಣ ಅಷ್ಟು ಸುಲಭಕ್ಕೆ ಕಣ್ಣೀರು ಬರದ ನನ್ನ ಕಣ್ಣಲ್ಲೂ ದಳದಳ ನೀರು ಸುರಿಯತೊಡಗಿತು. ಇಲ್ಲಿಯವರೆಗೆ ಬಂದಿದ್ದವಳನ್ನು “ಹೀಗೆ ಬರ್ಬಾರ್ದು. ಒಂದ್ನಿಮಿಷ ನೋಡ್ಕೊಂಡು ತಕ್ಷಣ ಹೋಗ್ಬಿಡು” ಅಂದಿದ್ರೆ ಯಾವ ಗಂಟು ಸೂರೆಯಾಗ್ತಿತ್ತು?! ಅವಳ ಒದ್ದೆ

ಕಣ್ಣುಗಳು, ಆತಂಕದ ಮುಖ ನನ್ನ ಮನಸ್ಸಿನಲ್ಲಿ ನೆಲೆಯಾಗಿಬಿಟ್ಟಿತು. ತಕ್ಷಣ ಏನೋ ನೆಪ ಮಾಡಿಕೊಂಡು ಪಕ್ಕದಲ್ಲಿ ಬಂದು ಕುಳಿತ ಅಶ್ವಿನಿ ಸಿಸ್ಟರ್, "ಅಳ್ಬೇಡೀಮ್ಮ ಪ್ಲೀಸ್. ಇಷ್ಟು ಧೈರ್ಯವಾಗಿರೋ ನೀವತ್ರೆ ನಂಗೆ ತುಂಬಾ ನೋವಾಗತ್ತೆ. ಸಧ್ಯಕ್ಕೆ ನನ್ನೇ ನಿಮ್ಮ ಮಗಳು ಅಂದ್ಕೊಳಿ. ನಂಬರ್ ಕೊಡಿ; ಆಮೇಲೆ ಬರಕ್ಕೆ ಫೋನ್ ಮಾಡ್ತೀನಿ" ಎನ್ನುತ್ತಾ ಪಕ್ಕದಲ್ಲೇ ಕುಳಿತು ಸಂತೈಸುತ್ತಿದ್ದವಳು ಡ್ಯೂಟಿ ಡಾಕ್ಟರ ಕರೆ ಕೇಳಿ ಸರಕ್ಕನೆ ಎದ್ದು ಹೋದಳು...

ಇನ್ನೊಂದು ದಿನ ಈ ರೀತಿ ಶುರುವಾಗಿತ್ತು. ಬೆಳಗಿನ ತಪಾಸಣೆಗೆಂದು ಬಂದ ನನ್ನ ಡಾಕ್ಟರಿಗೆ ತುಂಬಾ ಏರುಪೇರಾಗುತ್ತಿರುವ ನನ್ನ ಆಮ್ಲಜನಕದ ಮಟ್ಟ ಆತಂಕಕ್ಕೆ ದೂಡಿತ್ತು. "ಕುಟುಂಬದವರ ಹತ್ರ ಮಾತಾಡಿ, ಹನ್ನೊಂದು ಗಂಟೆಯ ಹೊತ್ತಿಗೆ ಇನ್ನೊಂದ್ಸಲ ಬಂದು ನೋಡಿ ನಿರ್ಧಾರ ಮಾಡ್ತೀನಿ" ಎನ್ನುತ್ತಾ ಹೊರಟರು. "ಏನು ನಿರ್ಧಾರ ಮಾಡ್ತಾರೆ?!" ನನಗೆ ಆತಂಕದೊಂದಿಗೆ ಕುತೂಹಲ. ಹೇಳಿದಂತೆ ಹನ್ನೊಂದು ಗಂಟೆಗೆ ಬಂದವರು, ಜೊತೆಯಲ್ಲಿದ್ದ ಇನ್ನೊಬ್ಬರೊಂದಿಗೆ ಚರ್ಚಿಸುತ್ತಾ "ಹಾಕ್ಬಿಡೋಣ ಅಲ್ವಾ" ಎಂದರು. ಅವರೂ "ನಿಜ, ಇನ್ನೇನೂ ಮಾಡಕ್ಕಾಗಲ್ಲ" ಎಂದರು. ನನ್ನೆಡೆಗೆ ತಿರುಗಿದ ಡಾಕ್ಟರ್ "ಈಗ ನಿಮ್ಗೆ ವೆಂಟಿಲೇಟರ್ ಹಾಕ್ತೀವಿ. ಅದು ನಿಮ್ಮ ಲಂಗ್ಸ್‌ಗೆ ತುಂಬಾ ಸಪೋರ್ಟ್ ಮಾಡತ್ತೆ. ಒಂದೆರೆಡು ದಿನ ಅಷ್ಟೇ. ಸ್ಟೇಬಲ್ ಆದ ತಕ್ಷಣ ತೆಗೆದ್ಬಿಡ್ತೀವಿ. ಇದು ನಿಮ್ಮ ಒಳ್ಳೇದಕ್ಕೆ. ನಿಮ್ಮ ಮನೆಯವರ ಹತ್ರ ಹೇಳಿದೀವಿ" ಎಂದರು. ನನ್ನ ಪಕ್ಕದಲ್ಲೇ ನಿಂತಿದ್ದ ಯಮಕಿಂಕರರಿಗಂತೂ ಕುಣಿಯುವಷ್ಟು ಖುಷಿಯಾಯಿತೇನೋ! ಜಯದ ನಗೆ ಬೀರುತ್ತಾ "ಇನ್ನೆಷ್ಟು ಹೊತ್ತು ನಿನ್ನಾಟ? ನೋಡೋಣ" ಎನ್ನುತ್ತಾ ಪಕ್ಕದಲ್ಲಿ ಕುಳಿತೇಬಿಟ್ಟರು. ಸಾಯುವ ಮುಂಚೆ ವೆಂಟಿಲೇಟರ್ ಮೇಲೆ ಇದ್ದ ಸಾಕಷ್ಟು ಜನರ ಕತೆಯನ್ನು ಕೇಳಿದ್ದ ನನಗೆ "ಸರಿ, ಇನ್ನೆಷ್ಟು ಗಂಟೆಗಳ, ದಿನಗಳ ಕತೆಯೋ ನನ್ನದು. ವೆಂಟಿಲೇಟರ್ ಮೇಲಿದ್ದು ಬದುಕಿ ಬಂದವರ ಕತೆಯನ್ನು ನಾನು ಇದುವರೆಗೂ ಕೇಳಿಲ್ಲ" ಎಂದುಕೊಂಡು ಏನೇ ಬಂದರೂ ಎದುರಿಸಲು ಸಿದ್ಧಳಾಗಿಬಿಟ್ಟೆ. ಬೆಳಗ್ಗೆ ಒಂದು ಸಲ ಮಗಳನ್ನು ನೋಡಿ, ಅವಳ ಕೈಯನ್ನು ಎದೆಗೊತ್ತಿಕೊಂಡು ಒಂದೆರಡು ಮಾತನಾಡಿಬಿಟ್ಟಿದ್ದರೆ! ಅನ್ನಿಸಿತು.

"ಅಗ್ರೇ ವಹ್ನಿಃ ಪೃಷ್ಠೇ ಭಾನುಃ ರಾತ್ರೌ ಚುಬುಕ ಸಮರ್ಪಿತ ಜಾನುಃ। ಕರತಲ ಭಿಕ್ಷಸ್–ತರುತಲ ವಾಸಃ ತದಪಿ ನ ಮುಂಚತ್ಯಾಶಾ ಪಾಶಃ॥" (ಮುಂದೆ ಅಗ್ನಿ, ಹಿಂದೆ ಸೂರ್ಯ, ರಾತ್ರಿಯ ಚಳಿಯಲ್ಲಿ ಮುದುರಿ ಮಲಗುವುದು, ಕೈಯೊಡ್ಡಿ ಬೇಡಿದ ಭಿಕ್ಷೆಯನ್ನುಣ್ಣುವುದು, ಮರದ ಕೆಳಗೆ ಮಲಗುವುದು– ಇಂತಹ ಸ್ಥಿತಿಯಲ್ಲಿದ್ದರೂ ಆಸೆ ಯಾರನ್ನೂ ಬಿಟ್ಟಿರುವುದಿಲ್ಲ) ಯಾವ ಪರಿಸ್ಥಿತಿಯಲ್ಲೇ ಇದ್ದರೂ, ಸಾವಿಗೆ ಎಷ್ಟೇ ಸನಿಹದಲ್ಲಿದ್ದರೂ ಆಸೆಯ ಪಾಶ, ಮೋಹದ ಜಾಲ ಮಾತ್ರಾ ಬಿಡುವುದಿಲ್ಲವಲ್ಲ!! ಕೆಲವೇ ನಿಮಿಷಗಳಲ್ಲಿ ನನ್ನ ಜ್ಞಾನ ತಪ್ಪಿತ್ತು. ಎಚ್ಚರವಾಗುವಾಗ ನನ್ನ ಗಂಟಲಿನ ಮೂಲಕ ವೆಂಟಿಲೇಟರ್ ದೇಹದೊಳಗಿಳಿದಿತ್ತು. ಸಣ್ಣ ಗುಂಜಿನ ಪೊರಕೆಯಂತದೊಂದನ್ನು ನನ್ನ ದವಡೆ ಕಚ್ಚಿ ಹಿಡಿದಿತ್ತು. ಪಕ್ಕದಲ್ಲೊಂದು ಫುಟ್‌ಬಾಲ್‌ನಂತಹ ಚೆಂಡೊಂದು ಕುಳಿತಿತ್ತು. ಈಗಾಗಲೇ ಇದ್ದ ಎಷ್ಟೆಲ್ಲಾ ಆಭರಣಗಳ ಜೊತೆಗೆ ಇದೂ ಒಂದು ಸೇರಿಕೊಂಡಿತ್ತು. ನನ್ನ ಮಾತು ಬಂದ್ ಆಗಿತ್ತು! ಆದರೆ ನಾನಿನ್ನೂ ಬದುಕಿದ್ದೆ. ಎಷ್ಟು ಸಮಯದವರೆಗೋ?! ಎರಡೂ ಪಕ್ಕದಲ್ಲಿ ಕುಳಿತಿದ್ದ ಯಮಕಿಂಕರರು ಗಹಗಹಿಸುತ್ತಿದ್ದರು!!

ಗಂಜಿಯೂ ಗಂಟಲೊಳಗಿಳಿಯುವಂತಿಲ್ಲ. ಡ್ರಿಪ್ ಮೂಲಕವೇ ದೇಹದ ಅವಶ್ಯಕತೆಗಳ ಪೂರೈಕೆ. ದಾಕ್ಷಾಯಿಣಿ ಸಿಸ್ಟರ್ ಬಂದಾಗ ಸನ್ನೆಯ ಮೂಲಕ 'ನನಗೊಂದು ಪೇಪರ್ ಮತ್ತು ಬರೆಯಲು ಪೆನ್ನು ಬೇಕು' ಎಂದೆ. "ಯಾಕೆ" ಎಂದು ಕೇಳಿದಳು. 'ಬರೆದು ತೋರಿಸಕ್ಕೆ' ಎಂದು ಮತ್ತೆ ಸನ್ನೆ ಮಾಡಿದೆ. ಪಾಪ! ಎಲ್ಲಿಂದಲೋ ಹುಡುಕಿ ಒಂದು ಪುಟ್ಟ ಪ್ಯಾಡ್ ಮತ್ತು ಪೆನ್ನನ್ನು ತಂದಿತ್ತಳು. ಬರೆಯಬಹುದು ನಿಜ; ಆದರೆ ಬರೆದ ಅಕ್ಷರಗಳು ತಂತಾನೇ ಜೋರಾಗಿ ಓದಿ ಯಾರಿಗೂ ಹೇಳುವುದಿಲ್ಲವಲ್ಲ, ಯಾರನ್ನೂ ಕರೆಯುವುದೂ ಇಲ್ಲವಲ್ಲ!! ಎದುರಿಗೆ ಯಾರು ಓಡಾಡುತ್ತಾ ನನ್ನ

ಮುಖ ನೋಡಿದರೂ ಸಾಕು; ಸನ್ನೆ ಮಾಡಿ ಕರೆದು ಬರೆದದ್ದನ್ನು ತೋರಿಸುತ್ತಿದ್ದೆ. ಅರ್ಥವಾದರೆ ನಾನು ಹೇಳಿದ್ದನ್ನು ಮಾಡುತ್ತಿದ್ದರು; ಇಲ್ಲವಾದರೆ ಅರ್ಥವಾಗುವ ಯಾರನ್ನಾದರೂ ಕರೆತರುತ್ತಿದ್ದರು. ಮರುದಿನ ಬಂದ ನನ್ನ ಡಾಕ್ಟರು ನನ್ನ ಸಂವಹನದ ಈ ರೀತಿಯನ್ನು ನೋಡಿ ಖುಷಿಪಟ್ಟರು. ನಾನು ಅವರನ್ನು ಕೇಳಬೇಕಾದ ಪ್ರಶ್ನೆಗಳನ್ನೆಲ್ಲಾ 1, 2 ಎಂದು ಅಂಕಿಗಳನ್ನು ಹಾಕಿ ಬರೆದು ಕೊಟ್ಟೆ. ಅವರೂ ಅದರ ಪ್ರಕಾರವೇ ಉತ್ತರಿಸಿದರೂ, ವೆಂಟಿಲೇಟರನ್ನು ಯಾವಾಗ ತೆಗೆಯುತ್ತೀರಿ ಎನ್ನುವ ನನ್ನ ಪ್ರಶ್ನೆಗೆ ಮಾತ್ರಾ ಉತ್ತರಿಸದೆ ನಕ್ಕು ಹೊರಟರು.

ಮಧ್ಯಾಹ್ನದ ಹೊತ್ತಿಗೆ ಸಿ.ಟಿ.ಸ್ಕ್ಯಾನ್ ಮಾಡಲು ನನ್ನನ್ನು ಕರೆದೊಯ್ಯುವ ಸೂಚನೆ ಬಂತು. ನಮ್ಮ ಪಯಣದ ವೈಖರಿಯ ವೈಭವವನ್ನು ಏನೆಂದು ಬಣ್ಣಿಸಲಿ. ಹಿಂದಿದ್ದ ಸಿಲಿಂಡರಿಗೆ ಸಂಪರ್ಕ ಕಲ್ಪಿಸಿದ್ದ ಆಮ್ಲಜನಕದ ಕೊಳವೆಯನ್ನು ಒಂದು ಟ್ರಾನ್ಸಿಸ್ಟರ್‌ನಂತಹ ಉಪಕರಣಕ್ಕೆ ಬದಲಾಯಿಸಿಕೊಂಡು ಅದನ್ನೂ ನನ್ನ ಹಾಸಿಗೆಯ ಮೇಲೆ ಜಾಗ ಮಾಡಿ ಕುಳ್ಳಿರಿಸಿದರು. ಬ್ಲಡ್ ಪ್ರೆಷರ್‌ನ್ನು ದಾಖಲಿಸುವ ಇನ್ನೊಂದು ಪುಟ್ಟ ಉಪಕರಣವೂ ಹಾಸಿಗೆಯ ಮೇಲೇರಿತು. ಮತ್ತೆಲ್ಲಾ ನಳಿಕೆಗಳು, ಯಂತ್ರಗಳು ಹಾಸಿಗೆಯ ಮೇಲೆ ಜಾಗಮಾಡಿಕೊಂಡವು. ಇವೆಲ್ಲಾ ಶೃಂಗಾರಗಳ ಮಧ್ಯೆ ನಾನು ರಾಣಿಯಂತೆ ಮಲಗಿದ್ದೆ. ಡ್ರಿಪ್‌ನ ನಿಲುಗಂಬ ಪಲ್ಲಕ್ಕಿಯ ಪಕ್ಕದಲ್ಲಿ ಬರುವ ಭಟನಂತೆ ನಿಂತುಕೊಂಡು ಅದನ್ನೊಬ್ಬ ಆಯಾ ಹಿಡಿದುಕೊಂಡಳು. ವೆಂಟಿಲೇಟರ್‌ನ ಚೆಂಡನ್ನು ಇನ್ನೊಂದು ಪಕ್ಕದಲ್ಲಿದ್ದ ಡ್ಯೂಟಿ ಡಾಕ್ಟರ್ ಮತ್ತೊಬ್ಬ ಭಟನಂತೆ ಹಿಡಿದುಕೊಂಡು ನಿಂತುಕೊಂಡರು. ಸ್ಟೆಚರಿನಂತೆ ಹಾಸಿಗೆಯನ್ನೇ ನೂಕುತ್ತಾ ಸ್ಕ್ಯಾನಿಂಗ್ ಕೋಣೆಗೆ ಕರೆದೊಯ್ಯಲು ವಾರ್ಡ್‌ಬಾಯ್ ಸಿದ್ಧನಾಗಿ ನಿಂತುಕೊಂಡ. ಹಿಂದೆ, ಅಕ್ಕ ಪಕ್ಕ ನನ್ನನ್ನು ಕಾಯುವಂತೆ ನಿಂತಿದ್ದ ಯೋಧರನ್ನು ತಪ್ಪಿಸಿಕೊಂಡು ಯಮಕಿಂಕರರು ವಾಲಗದವರಂತೆ ಮುನ್ನಡೆಯುತ್ತಿದ್ದರೆ ನನ್ನ ಪಲ್ಲಕ್ಕಿ ತೀವ್ರ ನಿಗಾ ಘಟಕದಿಂದ ಹೊರ ಆವರಣಕ್ಕೆ ಕಾಲಿಟ್ಟಿತು.

ಮೂರ್‍ನಾಲ್ಕು ದಿನಗಳ ನಂತರ ಆ ಹಜಾರವನ್ನು ಬಿಟ್ಟು ಹೊರಗಿನ ಪ್ರಪಂಚವನ್ನು ನೋಡುತ್ತಿರುವ ಸಂತಸ ನನಗೆ. ಮುನ್ನಡೆಯುತ್ತಿರುವ ಹಾದಿ ಬದಿಯಲ್ಲಿ ಅಲ್ಲೆಲ್ಲಾದರೂ ಮನೆಯವರು ಯಾರಾದರೂ ಕಾಣುತ್ತಾರೇನೋ ಎನ್ನುವ ಚಪಲ ನನಗೆ. ಮಲಗಿದಲ್ಲಿಂದಲೇ ಅತ್ತಿತ್ತ ಕಣ್ಣು ಹಾಯಿಸಿದೆ. ಓಡಾಡುತ್ತಿರುವವರೆಲ್ಲರಿಗೂ ಅವರವರ ವ್ಯಾಪಾರ ಅವರವರಿಗೆ. ನನ್ನ ಮನೆಯವರಿಗೆ ನನ್ನ ಈ ಪರ್ಯಟನೆಯ ವಿಷಯ ತಿಳಿದಿರಲಿಲ್ಲವಲ್ಲ, ಬಂದು ನಿಲ್ಲುವುದಕ್ಕೆ. ಹಾಗಾಗಿ ಯಾರೂ ಕಾಣಲಿಲ್ಲ. ಚಿತ್ರದಲ್ಲಿ, ವೀಡಿಯೋಗಳಲ್ಲಿ ಆಗೀಗ ನೋಡಿದ್ದ ಆ ಯಂತ್ರದೊಳಗೆ ಸಾಕ್ಷಾತ್ ನಾನೇ ಇದ್ದೆ. ನನ್ನ ಕಣ್ಣಿಗೆ ಕಾಣುವ ಎಲ್ಲ ವಿವರಗಳನ್ನೂ ಕಣ್ತುಂಬಿಕೊಂಡೆ. ಉಸಿರು ಬಿಗಿ ಹಿಡಿದು ಬಿಟ್ಟು ಆ ಪ್ರಸಂಗ ಮುಗಿದ ನಂತರ ಮತ್ತೆ ಅದೇ ಹಾದಿಯಲ್ಲಿ ನನ್ನ ಪಲ್ಲಕ್ಕಿಯ ಪಯಣ.

ನನಗಿಂತ ಮುಂಚಿತವಾಗಿ ಯಮದೂತರು ಓಡಿಹೋಗಿ ನನ್ನ ಹಾಸಿಗೆಯ ಪಕ್ಕೆ ವಿರಾಜಮಾನರಾಗಿ ನನಗಾಗಿ ಕಾಯುತ್ತಿದ್ದರು. 'ಇನ್ನೂ ನನ್ನ ಆಟ ಮುಂದುವರೆಸುತ್ತಿದ್ದೇನೆ. ಸೋತು ಬಿಟ್ಟುಕೊಟ್ಟಿಲ್ಲ' ಎಂದೆ ಅವರಿಗೆ. "ನೋಡೋಣ ಎಲ್ಲಿಯವರೆಗೆ ನಿನ್ನ ಆಟ" ಎಂದು ನಕ್ಕರು.

"ನನ್ನ ಉಸಿರಿರುವವರೆಗೂ ನಾನೇ ಗೆಲ್ಲುತ್ತಿರುತ್ತೇನೆ. ನಿಂತ ನಂತರ ನಿನ್ನದೇ ಗೆಲುವಾದರೇನು; ಸೋಲು ನನಗೆ ತಿಳಿಯುವುದಿಲ್ಲವಲ್ಲ" ಎಂದು ನಾನೂ ನಕ್ಕೆ.

***

ಕಾಲೇಜಿನಲ್ಲಿ ಮೊದಲ ದಿನ

– ಎನ್.ವಿ. ರಘುರಾಂ

ಜುಲೈ 1975.

ನನ್ನ ಹೆಸರು ದೇಶಿಕಾಚಾರ್. ನಿಮಗೆಲ್ಲರಿಗೂ ಕಾಲೇಜಿನ ಹೊಸ ಜೀವನಕ್ಕೆ ಸ್ವಾಗತ. ನಾನು ಗಣಿತ ತೆಗೆದು ಕೊಳ್ಳುತ್ತೇನೆ. ಆದರೆ ಅದಕ್ಕಿಂತ ಮೊದಲು ನಿಮ್ಮ ಪರಿಚಯ ಮಾಡಿಕೊಳ್ಳಿ. ನಿಮ್ಮ ಹೆಸರು, ಯಾವ ಊರಿನಿಂದ ಬಂದಿದ್ದೀರಿ, ಪಿಯುಸಿಯಲ್ಲಿ ಗಣಿತದಲ್ಲಿ ಎಷ್ಟು ಅಂಕಗಳನ್ನು ತೆಗೆದಿದ್ದೀರಿ ಎಂದು ಹೇಳಿ' ಎಂದರು ಉಪನ್ಯಾಸಕರು. ಮೊದಲಿನ ಬೆಂಚಿನಿಂದ ಪರಿಚಯ ಪ್ರಾರಂಭವಾಯಿತು.

ಪಿಯುಸಿ ಮುಗಿಸಿ, ಅಂಕಗಳು ಸ್ವಲ್ಪ ಹೆಚ್ಚಿಗೆ ಬಂದ ತಪ್ಪಿಗೆ ಸುರತ್ಕಲ್ ಇಂಜನಿಯರಿಂಗ್ ಕಾಲೇಜಿಗೆ ಸೇರಬೇಕಾಗಿ ಬಂತು! ಕಳೆದವಾರ ಬಂದು ಕಾಲೇಜಿಗೆ ಸೇರುವ ಪ್ರಕ್ರಿಯೆಗಳನ್ನು ಮುಗಿಸಿಕೊಂಡು ಹೋಗಿದ್ದೆ. ನಿನ್ನೆ ಸಂಜೆ ಊರಿನಿಂದ ಬಂದು ಹಾಸ್ಟೆಲಿನಲ್ಲಿ ಉಳಿದು, ಈ ದಿನ ಬೆಳಗ್ಗೆ ಪ್ರಥಮ ದಿನದ ಕಾಲೇಜಿಗೆ ಬಂದಿದ್ದೆ. ಪ್ರಥಮ ಬಾರಿ ಮನೆ ಬಿಟ್ಟು ಹೊರಬಂದಿರುವುದು ಒಂದು ಕಡೆಯಾದರೆ, ಯಾವಾಗಲೂ ಯೋಚಿಸಿರದ ಇಂಜನಿಯರಿಂಗ್ ವಿದ್ಯಾಭ್ಯಾಸಕ್ಕೆ ಬಂದಿರುವುದು ಒಂದು ರೀತಿಯ ಕುತೂಹಲದ ಜೊತೆಗೆ ಅನ್ಯಮನಸ್ಕತೆ ಕೂಡಾ ಮನೆಮಾಡಿತ್ತು.

'ನನ್ನ ಹೆಸರು...' ಎಂದು ಪ್ರಥಮ ಬೆಂಚಿನಿಂದ ಪರಿಚಯ ಪ್ರಾರಂಭವಾಯಿತು. ನನ್ನ ಊರಿನಿಂದ ನಾನೊಬ್ಬನೇ ಇಲ್ಲಿಗೆ ಬಂದಿದ್ದರಿಂದ ಇಲ್ಲಿ ಎಲ್ಲರೂ ನನಗೆ ಹೊಸಬರೆ. ಹಾಗಾಗಿ ಎಲ್ಲರ ಹೆಸರನ್ನು ಗಮನವಿಟ್ಟು ಕೇಳಿಸಿಕೊಳ್ಳಲು ಪ್ರಾರಂಭಮಾಡಿದೆ. ಗಣಿತದಲ್ಲಿ ನೂರಕ್ಕೆ ನೂರು ತೆಗೆದಿರುವವರ ಹೆಸರು ಮಾತ್ರ ಮನಸ್ಸಿನಲ್ಲಿ ಉಳಿಯಿತು. ಆದರೆ, ಅದೇನೂ ಒಬ್ಬಿಬ್ಬರ ಹೆಸರು ಆಗಿರಲಿಲ್ಲ. ರವಿಶಂಕರ್, ಶ್ರೀನಿವಾಸ್, ಜೈಶಂಕರ್, ...' ಹೀಗೆ ಮುಂದುವರೆಯಿತು. ನೂರಕ್ಕೆ ನೂರು ಅಂಕ ತೆಗೆದ ಬೇಕಾದಷ್ಟು ಹುಡುಗರು ಅಲ್ಲಿದ್ದರು. ಆದರೆ ನೋಡಿ.. ತರಗತಿಯಲ್ಲಿ ಇದ್ದ ಅರವತ್ತು ಜನ ಹುಡುಗರ ಪರಿಚಯದ ಕಾರ್ಯಕ್ರಮ ಹದಿನೈದು ನಿಮಿಷದಲ್ಲಿ ಮುಗಿದಿತ್ತು. ಎಷ್ಟೊಂದು ಅಚ್ಚುಕಟ್ಟಾಗಿ ಈ ಪರಿಚಯದ ಕೆಲಸ ಮುಗಿಯಿತು! ಹೌದು, ಎಷ್ಟೆಂದರೂ ಇದು ಪ್ರಥಮ ಸೆಮಿಸ್ಟರ್‌ನ ಪ್ರಥಮ ಪಿರಿಯಡ್ ಅಲ್ಲವೇ? ಅದೂ ಸಾಧಾರಣ ಪದವಿ ತರಗತಿಯಲ್ಲ, ಇಂಜನಿಯರಿಂಗ್ ಕಾಲೇಜು!

ಪರಿಚಯದ ನಂತರ ಉಪನ್ಯಾಸಕರು ಆ ದಿನವೇ ಪಾಠಮಾಡಲು ಪ್ರಾರಂಭಿಸಿಯೇಬಿಟ್ಟರು. ನನಗೆ ಒಂದು ಕ್ಷಣ ಗಲಿಬಿಲಿ ಆಯಿತು. ಇವರಿಗೇನು ಇಷ್ಟು ಅವಸರ. ನಾನು ತಕ್ಷಣ ಪಾಠ ಕೇಳಿಸಿಕೊಳ್ಳಲು ಸಾಧ್ಯವಾಗುತ್ತದೆಯೇ? ಸ್ವಲ್ಪವಾದರೂ ಹೊಸ ಜಾಗದಲ್ಲಿ ಹೊಸಬರ ಮಧ್ಯೆ ಕೂತುಕೊಂಡು ಹೊಂದಿಕೊಳ್ಳುವುದು ಬೇಡವೇ? ಆಗಿನ್ನೂ ಬೆಳಗ್ಗೆ ಎಂಟು ಗಂಟೆ ಹದಿನೈದು ನಿಮಿಷ ಆಗಿತ್ತು ಅಷ್ಟೆ. ಕಿಟಕಿಯಿಂದ ತಣ್ಣನೆ ಗಾಳಿ ಬರಲು ಪ್ರಾರಂಭವಾಯಿತು. ಅದರ ಜೊತೆಗೆ ಹೊರಗಡೆ ವಾಹನವೊಂದರಿಂದ ಒಂದು ಮ್ಯೂಜಿಕಲ್ ಹಾರ್ನ್‌ನಿಂದ ಬಂದ ಶಬ್ದ ಕೇಳಿಸಿತು. ನಿಧಾನವಾಗಿ ಸ್ವಲ್ಪ ಬಲಕ್ಕೆ ತಿರುಗಿ ಹೊರಗಡೆ ನೋಡುತ್ತಾ ಕೂತೆ. ಸಮುದ್ರದಿಂದ ಕೇವಲ ಒಂದು ಇನ್ನೂರು ಮೀಟರ್ ದೂರದಲ್ಲಿ ಕಾಲೇಜಿನ ಕಟ್ಟಡ. ನಮ್ಮ ತರಗತಿ ಎರಡನೆಯ ಮಹಡಿಯಲ್ಲಿ ನಡೆಯುತ್ತಿತ್ತು. ಹಾಗಾಗಿ ದೂರದಿಂದ ಸಮುದ್ರ ಕಾಣುತ್ತಿತ್ತು. ಕಾಲೇಜು ಮತ್ತು ಸಮುದ್ರದ ಮಧ್ಯೆ ಮಂಗಳೂರು-ಬಾಂಬೆಯ ರಾಷ್ಟ್ರೀಯ ಹೆದ್ದಾರಿ ಇದೆ, ಹಾಗಾಗಿ ಅಲ್ಲಿ ವಾಹನಗಳ ಓಡಾಟ ಹೇರಳವಾಗಿತ್ತು. ಅದರಲ್ಲೂ ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಸಂಚರಿಸುವ ಮಂಗಳೂರು-ಉಡುಪಿ ಖಾಸಗಿ ಬಸ್ಸುಗಳು ಮ್ಯೂಜಿಕಲ್ ಹಾರ್ನ್ ಮಾಡುತ್ತಾ ವೇಗವಾಗಿ ಹೋಗುವುದು ಸಾಮಾನ್ಯ ದೃಶ್ಯ. ಆದರೆ ಆ ಸಮಯದಲ್ಲೇ ಒಬ್ಬ ಹುಡುಗ ಎದ್ದು ನಿಂತು ಉಪನ್ಯಾಸಕರಿಗೆ

ಪ್ರಶ್ನೆಯೊಂದನ್ನು ಕೇಳಿದ. ಆಗ ಮತ್ತೆ ನನ್ನ ಗಮನ ತರಗತಿಯ ಕಡೆಗೆ ಸೆಳೆಯಿತು. ಆ ಹುಡುಗನ ಕಡೆ ನೋಡಿದೆ. ಅವನೇನು ಗಣಿತದಲ್ಲಿ ನೂರಕ್ಕೆ ನೂರು ತೆಗೆದ ವಿದ್ಯಾರ್ಥಿಯಲ್ಲ ಎಂದು ತಕ್ಷಣ ಮನಸ್ಸು ಹೇಳಿತು. ಹಾಗಾಗಿ ಅವನು ಕೇಳಿದ ಪ್ರಶ್ನೆಯ ಬಗ್ಗೆ ಕುತೂಹಲ ಮೂಡಲಿಲ್ಲ. ಆಗ ಕಣ್ಣು ಕಪ್ಪು ಹಲಗೆಯ ಕಡೆ ತಿರುಗಿದರೂ ಮನ ಉಡುಪಿ ಮಂಗಳೂರಿನ ನಡುವೆ ಸಂಚರಿಸುವ ಬಸ್ಸಿನ ತರಹ ಒಮ್ಮೆ ಆ ಕಡೆ, ಒಮ್ಮೆ ಈ ಕಡೆ ಚಲಿಸುತ್ತಾ ಅಲ್ಲಿ ಹೋಗುವ ಬಸ್ಸುಗಳನ್ನು ಎಣಿಸುತ್ತಿತ್ತು. 'ಇದೇನು ಮಾಡುತ್ತಿದ್ದೀಯಾ! ನೀನು ಬಂದಿರುವುದು ಬಸ್ಸು ಎಣಿಸಲು ಅಲ್ಲ' ಎಂದು ಒಮ್ಮೆ ಮನಸ್ಸು ಹೇಳಿದರೆ, ಈ ಎಣಿಸುವ ಸಂಖ್ಯಾಶಾಸ್ತ್ರ ಕೂಡ ಗಣಿತ ತಾನೆ' ಎಂದು ಇನ್ನೊಮ್ಮೆ ಅನಿಸಿತು!. 'ಗಣಿತ ಇರುವುದು ಈ ಬಸ್ ಎಣಿಸುವ ಸಂಖ್ಯಾಶಾಸ್ತ್ರಕ್ಕೆ ಮಾತ್ರ ಸೀಮಿತವಾಗಿಲ್ಲ. ಅದಕ್ಕಿಂತ ಗಹನವಾದದ್ದನ್ನು ಪಾಠ ಮಾಡುತ್ತಿದ್ದಾರೆ. ಗಮನವಿಟ್ಟು ಕೇಳಿಸಿಕೋ... ' ಎಂದು ನನ್ನ ಮನಸ್ಸು ಮತ್ತೊಮ್ಮೆ ಎಚ್ಚರಿಸಿತು. ಅಂತೂ ಇಂತೂ ಪಾಠ ಕೇಳಿಸಿಕೊಳ್ಳಲು ಪ್ರಾರಂಭ ಮಾಡುವ ಹೊತ್ತಿಗೆ ಆ ತರಗತಿಯೇ ಮುಗಿಯಬೇಕೇ?.

ಸಾಕಷ್ಟು ಉದ್ದ ಇದ್ದ ನನಗೆ ಒಂದೇ ಕಡೆ ಕೂರುವುದು ಸ್ವಲ್ಪ ಕಷ್ಟದ ಕೆಲಸವೇ ಸರಿ. ಕೂತಲ್ಲೇ ಕಾಲು ಸರಿ ಮಾಡಿಕೊಳ್ಳುವುದರೊಳಗೇ ಒಬ್ಬ ಹಿರಿಯ ಉಪನ್ಯಾಸಕರು ತರಗತಿಗೆ ಪ್ರವೇಶ ಮಾಡಿದರು. ತಲೆಯಲ್ಲಿ ವಿರಳವಾದ ಬೆಳ್ಳಿ ಕೂದಲುಗಳು. ಆದರೂ ದೃಢವಾದ ಹೆಜ್ಜೆ ಹಾಕುತ್ತಾ ಬಂದರು. 'ನಾನು ಭೌತಶಾಸ್ತ್ರದ ಪ್ರೊಫೆಸರ್... ಭಾರತಕ್ಕೆ ಮೊದಲಬಾರಿ ಟ್ರಾನ್ಸಿಸ್ಟರ್ (ಇದು ರೇಡಿಯೋ ಅಲ್ಲ. ಇದೊಂದು ಇಲೆಕ್ಟ್ರಾನಿಕ್ ಕಂಪೋನೆಂಟ್ ಮತ್ತು ಮುಂದೆ ಇಲೆಕ್ಟ್ರಾನಿಕ್ಸ್‌ನಲ್ಲಿ ಕ್ರಾಂತಿ ತಂದ ಒಂದು ಬಿಡಿಭಾಗ) ಬಂದಾಗ ಅದನ್ನು ನೋಡಲು ಕರೆದಿದ್ದ ವಿಜ್ಞಾನಿಗಳಲ್ಲಿ ನಾನೂ ಒಬ್ಬ... '. ಅವರು ಪಡೆದಿರುವ ಪದವಿಗಳ ಪಟ್ಟಿ ನೋಡಿದರೆ ಅಬ್ಬಾ! ಅನಿಸಿತು. ಅವರೇ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರು ಮತ್ತು ಪ್ರೊಫೆಸರ್ ಡಾ.ಬಾಗಲಕೋಟೆ. 'ನೋಡಿ, ಇಲ್ಲಿ ನಡೆಯುವ ಪ್ರತಿಯೊಂದು ಗಂಟೆ ಪಾಠಕ್ಕೆ ನೀವೆಲ್ಲ ಕನಿಷ್ಠ ಮೂರು ಗಂಟೆ ಕಾಲ ಲೈಬ್ರರಿಯಲ್ಲಿ ಅಭ್ಯಾಸ ಮಾಡಬೇಕು. ಪ್ರತಿಯೊಂದು ದಿನ ಎಂಟು ಗಂಟೆಗಳ ಕಾಲ ಪಾಠ ನಡೆಯುವುದರಿಂದ, ದಿನಕ್ಕೆ ಇಪ್ಪತ್ತನಾಲ್ಕು ಗಂಟೆ ಪಾಠ ಓದಬೇಕು! ಆದರೆ ಕಾಲೇಜು ಆದ ಮೇಲೆ ಉಳಿಯುವುದೇ ಹದಿನಾರು ಗಂಟೆ!. ಹಾಗಾಗಿ ಇದೊಂದು ನಿರಂತರ ಸಮಯದ ಹಿಂದೆ ಓಡುವ ಕೆಲಸವೇ ಸರಿ.' ಅವರು ಹೇಳಿದ್ದು ನಿಜವೇ ಸರಿ ಎಂದು ನನಗೆ ನಿಧಾನವಾಗಿ ಅರ್ಥವಾಗುತ್ತಾ ಸಾಗಿತು.

ಅದೆಲ್ಲಾ ಸರಿ, ಆದರೆ ಈ ಇಂಜಿನೀಯರಿಂಗ್ ಕಾಲೇಜಿನ ಪಾಠದಲ್ಲಿ ಇದೇಕೆ ಭೌತಶಾಸ್ತ್ರದ ಪಾಠ ಎಂದು ನನಗೆ ಅರ್ಥವಾಗಿರಲಿಲ್ಲ. ಈ ಭೌತಶಾಸ್ತ್ರದ ಪಾಠವನ್ನು ಓದುವುದಾದರೆ ಈ ಇಂಜಿನೀಯರಿಂಗ್ ಓದಲು ಯಾಕೆ ಬರಬೇಕಿತ್ತು. ಇದನ್ನು ನನ್ನ ಊರಿನಲ್ಲೇ ಬಿ.ಎಸ್ಸಿ.ಯಲ್ಲಿ ಓದಿ, ಆರಾಮವಾಗಿ ಮನೆಯಲ್ಲೇ ಇರಬಹುದಿತ್ತಲ್ಲ. ನನಗೇನು ನೂರಕ್ಕೆ ನೂರು ಬಂದಿಲ್ಲದಿದ್ದರೂ, ನನ್ನೂರಿನಲ್ಲಿ ನಾನೇ ರಾಜನ ತರಹ ಕೂಡ ಇದ್ದೆ. ಇಲ್ಲಿ ಹತ್ತರ ಜೊತೆಗೆ ಇನ್ನೊಬ್ಬ ಅಷ್ಟೆ. ಇಂಜನೀಯರಿಂಗ್ ತರಗತಿ ಎಂದರೆ ಮೊದಲ ಪಿರಿಯಡ್‌ನಲ್ಲಿ ಮನೆ ಕಟ್ಟುವ ಬಗ್ಗೆ ಪಾಠ, ಎರಡನೇಯ ಪಿರಿಯಡ್ ಕಾರು ವಿನ್ಯಾಸದ ಬಗ್ಗೆ, ಮೂರನೇಯ ಪಿರಿಯಡ್ ವಿದ್ಯುತ್ ಉತ್ಪಾದನೆ ಬಗ್ಗೆ,.. ಹೀಗೆಲ್ಲ ಪಾಠ ಮಾಡುತ್ತಾರೆ ಎಂದುಕೊಂಡಿದ್ದೆ. ಆದರೆ ಕಾಲೇಜಿನ ವೇಳಾಪಟ್ಟಿ (ಟೈಂ ಟೇಬಲ್) ನೋಡಿದರೆ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ, ಇಂಜನಿಯರಿಂಗ್ ಡ್ರಾಯಿಂಗ್, ವರ್ಕ‍ಷಾಪ್,... ಅಂತ ಇತ್ತು. ಗಣಿತ ಮತ್ತು ಡ್ರಾಯಿಂಗ್ ಇಂಜನೀಯರುಗಳ ಎರಡು ಭಾಷೆ ಎಂದು ಈಗಾಗಲೇ ಪದವಿ ಮುಗಿಸಿದ್ದ ನನ್ನ ಅಣ್ಣ, ನಾನು ಕಾಲೇಜಿಗೆ ಹೊರಡುವ ಮೊದಲು ಹೇಳಿದ್ದರು. ಹಾಗಾಗಿ ಗಣಿತ ಮತ್ತು ಡ್ರಾಯಿಂಗ್ ಎರಡು ವಿಷಯಗಳನ್ನು ಮಾತ್ರ ಓದಿದರೆ ಸಾಕು ಎಂದುಕೊಂಡಿದ್ದೆ. ಪ್ರೋಫೆಸರ್ ಪಾಠ ಪ್ರಾರಂಭ ಮಾಡಿದರು. ನಾನು ಮತ್ತೊಮ್ಮೆ ಬಸ್ಸು ಎಣಿಸಲು ಪ್ರಾರಂಭ ಮಾಡಿದೆ.

ಎರಡು ಪಿರಿಯಡ್ ಮುಗಿದ ಮೇಲೆ ಹದಿನೈದು ನಿಮಿಷದ ವಿರಾಮ. ಮೂರನೇ ಮಹಡಿಯ ಮೇಲೆ ಟೀ ಶಾಪ್ ಇತ್ತು. ಅಲ್ಲಿ ನಿಂತರೆ ಸಮುದ್ರ ದರ್ಶನ ಚೆನ್ನಾಗಿ ಆಗುತ್ತಿತ್ತು. ಹಾಗಾಗಿ ಆ ಟೀ ಶಾಪ್‌ಗೆ 'ಸಮುದ್ರ ದರ್ಶನ' ಎಂದೇ ಹೆಸರು. ನಾನು ಕಾಫೀ ತೆಗೆದುಕೊಂಡೆ. ಈ ಮಲೆನಾಡಿನವರಿಗೆ ಹೊರಗಡೆಯ ಕಾಫೀ ರುಚಿಸುವುದಿಲ್ಲ. ಇಲ್ಲೂ ಹಾಗೇ ಆಯಿತು. ಅಷ್ಟರಲ್ಲಿ ಸಮುದ್ರದ ಕಡೆಯಿಂದ ಬರುತ್ತಿರುವ ಮಳೆ, ಗಾಳಿಯ ಜೊತೆಗೆ ನಾಟ್ಯವಾಡುತ್ತಾ ನಿಧಾನವಾಗಿ ಕಾಲೇಜಿನ ಬಳಿಯೇ ಬಂದಿತು. ನಾನು ಕೆಳಗೆ ಹೋಗಿ ಅದರ ಜೊತೆ, ಊರಿನಲ್ಲಿ ಮಾಡುತ್ತಿದ್ದ ಹಾಗೆ, ಇಲ್ಲೂ ಒಂದೆರಡು ಹೆಜ್ಜೆಯನ್ನಾದರೂ ಹಾಕೋಣ ಅನಿಸಿತು. ' ಓ! ನಿನ್ನ ಮೇಲೆ ನಿನಗೆ ನಿಯಂತ್ರಣ ಇರಲಿ. ನೀನು ಇಲ್ಲಿಗೆ ಬಂದಿರುವುದು ನಾಟ್ಯ ಕಲಿಯಲು ಅಲ್ಲ. ಇಂಜನಿಯರಿಂಗ್ ಪದವಿ ಪಡೆಯಲು, ಪದವಿ ಪಡೆದು ನಿನ್ನ ಕಾಲ ಮೇಲೆ ನೀನು ನಿಂತುಕೊಳ್ಳಲು. ಕಂಟ್ರೋಲ್.. ಕಂಟ್ರೋಲ್ ಯುವರ್ಸೆಲ್ಫ್.. ' ಎಂದುಕೊಂಡು, ಸಮಯಕ್ಕೆ ಸರಿಯಾಗಿ ಮುಂದಿನ ಪಿರಿಯಡ್‌ಗೆ ಹೋದೆ.

ಆಗ ಅಧಿಕಾರಯುತವಾದ ಹೆಜ್ಜೆಗಳನ್ನು ಇಡುತ್ತಾ ಬಂದ ವ್ಯಕ್ತಿಯೊಬ್ಬರು ತರಗತಿಗೆ ಪ್ರವೇಶ ಮಾಡಿದರು. ಅವರ ಮುಖದಲ್ಲಿ ಒಂದು ಅಪೂರ್ವವಾದ ಕಾಂತಿ ಇತ್ತು, 'ನನ್ನ ಹೆಸರು ಗಜೇಂದ್ರಗಡ. ನಾನು ರಸಾಯನಶಾಸ್ತ್ರ ತೆಗೆದುಕೊಳ್ಳುತ್ತೇನೆ...'. ಅವರ ಮಾತುಗಳಲ್ಲಿ ಖಚಿತತೆ ಇತ್ತು. ಪ್ರಾರಂಭ ಮಾಡಿದ ಕೆಲವೇ ನಿಮಿಷಗಳಲ್ಲಿ ಆ ವಿಷಯದ ಬಗ್ಗೆ ಕುತೂಹಲ ಮೂಡಿಸುವುದರಲ್ಲಿ ಅವರು ಯಶಸ್ವಿಯಾಗಿದ್ದರು. ಇಡೀ ತರಗತಿಯೇ ತನ್ಮಯರಾಗಿ ಅವರ ಪಾಠ ಕೇಳಸಿಕೊಳ್ಳಲು ಪ್ರಾರಂಭಮಾಡಿತು. 'ನೋಡಿ, ನೀವೆಲ್ಲ ಮಹಾನ್ ಬರೆದಿರುವ ರಸಾಯನಶಾಸ್ತ್ರದ ಪುಸ್ತಕವನ್ನು ಓದಬೇಕು. ಅಂಕಗಳ ಬಗ್ಗೆ ಯೋಚಿಸದೆ ಈ ಪುಸ್ತಕ ಓದಿ. ಇದರಿಂದ ಖಂಡಿತವಾಗಿಯೂ ಜ್ಞಾನ ಬರುತ್ತದೆ...'. ಅದು 'ಮಹಾನ್' ಎಂಬ ಹೊರದೇಶದವರು ಬರೆದ ಪುಸ್ತಕವಾಗಿತ್ತು. ವಿದೇಶಿಯರೊಬ್ಬರು ಬರೆದ ಪುಸ್ತಕವೊಂದರ ಪರಿಚಯ ಮತ್ತು ಅದು ಹೇಗೆ ಇತರ ಪುಸ್ತಕಗಳಗಿಂತ ಭಿನ್ನವಾಗಿದೆ ಎಂದು ಅವರು ಹೇಳುತ್ತಾ ಸಾಗಿದರು. ನಾನು ಅವರ ರಸಾಯನಶಾಸ್ತ್ರದಲ್ಲಿ ಕಳೆದುಹೋದೆ. ಆದರೆ ಸಮಯ ಮುಗಿದ ಸೂಚನೆಯಾಗಿ ಗಂಟೆ ಬಾರಿಸಿದರು. ಆಗ ಎಷ್ಟು ಬೇಗ ಪಿರಿಯಡ್ ಮುಗಿಯಿತು ಎನಿಸುವುದರ ಜೊತೆಗೆ ರಸಾಯನಶಾಸ್ತ್ರದಲ್ಲೂ ಇಂಜನೀಯರಿಂಗ್ ಇದೆ ಅನಿಸಲು ಪ್ರಾರಂಭವಾಯಿತು. ಹೊರಗಡೆ ಬಸ್ಸಿನಿಂದ ಬರುತ್ತಿರುವ ಇಂಗಾಲದ ಡೈ ಆಕ್ಸೈಡ್‌ನ ಅಣುಗಳು ನನ್ನ ಸುತ್ತಲೂ ಸುತ್ತುತ್ತಿರುವಂತೆ ಭಾಸವಾಗಿ, ನಾನು ಅವನ್ನು ಒಂದೊಂದಾಗಿ ಗಾಳಿಯಿಂದ ಹಿಡಿದುಕೊಂಡು ಜೋಡಿಸುತ್ತಿರುವಂತೆ ಭಾಸವಾವಾಯಿತು. ಈ ಸಂಭ್ರಮದ ಭ್ರಮಾಲೋಕದಲ್ಲಿ ಕಳೆದುಹೋದ ನನಗೆ ಮುಂದಿನ ಪಿರಿಯಡ್ ಮುಗಿದು ಊಟಕ್ಕೆ ಬಿಡುವ ಗಂಟೆ ಹೊಡೆದಾಗ ಮತ್ತೆ ಈ ಲೋಕಕ್ಕೆ ಬಂದೆ.

ಮಧ್ಯಾಹ್ನ ಇಂಜನೀಯರಿಂಗ್ ಡ್ರಾಯಿಂಗ್, ನಂತರ ವರ್ಕ್‌ಷಾಪ್. ಇವೆರಡೂ ಇಂಜನೀಯರಿಂಗ್ ವಿಷಯಗಳೇ!. ಸರಿಯಾಗಿ ನೋಡಿಕೊಳ್ಳಬೇಕು ಎಂದು ಹಾಸ್ಟೆಲಲ್ಲಿ ಊಟ ಮಾಡುತ್ತಾ ಅಂದುಕೊಂಡೆ. ಅದೇರೀತಿ ಮಾಡಿದೆ ಕೂಡ.

ಆ ದಿನ ಸಂಜೆ ಸಮುದ್ರ ತೀರಕ್ಕೆ ತೆರಳಿದೆ. ಆಗ ಸ್ವಲ್ಪ ಹೊತ್ತು ಸೂರ್ಯ ಮೋಡಗಳ ಮಧ್ಯದಿಂದ ದರ್ಶನ ಕೊಟ್ಟ. ಸೂರ್ಯ ಕೆಂಪಾಗುತ್ತಾ ಹೊರಟಿದ್ದ. ಅಗ ಹೈಸ್ಕೂಲಿನಲ್ಲಿ ಶ್ರೀ ಗೋಪಾಲಕೃಷ್ಣ ಉಡುಪರು ಮಾಡಿದ ಕನ್ನಡದ ಪಾಠ ನೆನಪಾಯಿತು. ಮಹಾಭಾರತದ ಯುದ್ಧದಲ್ಲಿ ಮಡಿದ ಮಗ ಕರ್ಣನನ್ನು ಅಪ್ಪಿಕೊಂಡು ಮೈಯೆಲ್ಲಾ ರಕ್ತಮಯವಾದ ಸೂರ್ಯ, ರಕ್ತ ತೊಳೆದುಕೊಳ್ಳಲು ಸಮುದ್ರಕ್ಕೆ ಇಳಿದ ಎಂದಾಗ ಇಡೀ ತರಗತಿಯು ಆ ದಿನ ನಿಶಬ್ದವಾಗಿ ಕುಳಿತುಕೊಂಡಿತ್ತು. ಪ್ರಥಮ ಬಾರಿ ಸೂರ್ಯಾಸ್ತವನ್ನು ಸಮುದ್ರ ತೀರದಿಂದ ನೋಡಿದಾಗ ಆ ಪಾಠ ನೆನಪಾಯಿತು. ಹಾಗೆ ಸ್ವಲ್ಪ ಹೊತ್ತು ಭಾರವಾದ ಮನಸ್ಸಿನಿಂದ ಮೇಲಿಂದ ಮೇಲೆ ಬರುತ್ತಿದ್ದ ಅಲೆಗಳು, ಅವುಗಳು ಹಿಂತಿರುಗಿ

ಹೋಗುತ್ತಾ ಇರುವುದನ್ನು ನೋಡುತ್ತಾ ಕೂತೆ. ಆಗ ಅಚಾನಕ್ ಆಗಿ 'ನಿನ್ನ ಕಾಲ ಮೇಲೆ ನೀನು ನಿಲ್ಲಲು ಓದಿನಿಂದ ಮಾತ್ರ ಸಾಧ್ಯ' ಎಂದು ಹಿಂದುಗಡೆಯಿಂದ ಅಮ್ಮ ಹೇಳಿದ ಹಾಗೆ ಆಯಿತು. ಹಿಂತಿರುಗಿ ನೋಡಿದೆ. ಅಲ್ಲಿ ಯಾರೂ ಇರಲಿಲ್ಲ. ಮನೆಯಿಂದ ಹೊರಟಾಗ ಅಮ್ಮ ಹೇಳಿದ ಮಾತುಗಳು ಅವು. ಮತ್ತೆ ಅಲೆಗಳನ್ನು ಏಣಿಸುವ ಪ್ರಯತ್ನ ಮಾಡುತ್ತಾ ಕೂತೆ. ಸ್ವಲ್ಪ ಹೊತ್ತಿನ ನಂತರ ಪ್ರಮೇಯಗಳು, ನ್ಯೂಟನ್ ಲಾಗಳು, ಓಜೋನ್ ಅಣುಗಳನ್ನು ಸಮುದ್ರದ ಅಲೆಗಳು ತಂದು ನನ್ನ ಮೇಲೆ ಹಾಕಿದಂತೆ, ಹಿಂತಿರುಗುವಾಗ ನನ್ನ ಬೇಸರವನ್ನು ಹಿಂದಕ್ಕೆ ಸ್ವಲ್ಪ ಸ್ವಲ್ಪವಾಗಿ ತೆಗೆದುಕೊಂಡು ಹೋದಂತೆ ಭಾಸವಾಯಿತು. ಮೇಲಿಂದ ಮೇಲೆ ಬರುತ್ತಿದ್ದ ದೊಡ್ಡ ದೊಡ್ಡ ಅಲೆಗಳು ಹೊಸ ಭರವಸೆಗಳನ್ನು ತಂದವು. ಆ ಹೊಸ ಭರವಸೆಗಳೊಂದಿಗೆ ಎದ್ದು ಹಿಂತಿರುಗಿ ಹಾಸ್ಟೆಲಿಗೆ ಹೊರಟೆ. ಆ ಹೊಸ ಭರವಸೆಗಳು ನನ್ನ ಜೀವನವನ್ನು ನನ್ನ ಕಾಲ ಮೇಲೆ ಭದ್ರವಾಗಿ ನಿಲ್ಲಿಸುವ ಆಶಾಕಿರಣ ಮೂಡಿಸಿದುವು.

***



'ಬೊಂಬೆ ಊಟವಯ್ಯಾ...'

ಚಿತ್ರಕೃಪೆ: ಡಾ. ಶುಭಶ್ರೀ ಪ್ರಸಾದ್

ಹೂ ನಗೆಯ ಚೆಲುವೆ

– ಮಾಲತಿ ಶ್ರೀನಿವಾಸನ್

ಹೂ ನಗೆಯ ಚೆಲುವೆ
ಮುಸ್ಸಂಜೆಯಲ್ಲಿ ದಣಿವೆ,
ನೋಡದಿರು ನೀ ಅಸ್ತಮಿಸುವ
ನೇಸರನ, ನಿನಗಾಗಿ ಕಾದಿಹುದು
ಹೊಸ ಬೆಳಗು ಹೊಸಗಾನ,
ಚಿಲಿಪಿಲಿ ಹಕ್ಕಿಗಳ ತನನನ.
ಇಂದೇಕೆ ದಣಿವು, ಮನದಿ
ಗೊಂದಲವು, ಈ ಮುಸ್ಸಂಜೆಯ
ಮಬ್ಬಿನಲಿ ಹಿಡತಕ್ಕೆ ಸಿಗದಾ
ಜೀವನವು.

ದಣಿವಾರಿಸಿಕೋ, ಚಂದ್ರಮನ
ತಂಪಿನಲಿ, ಸುತ್ತಲಿನ ಮೌನರಾಗದ
ಇಂಪಿನಲಿ, ದಣಿವ ಮರೆತು
ತಣಿಯೋಣ ಬಾ ನಾವು
ಮುಸಂಜೆಯ ಮಬ್ಬಿನಲಿ
ಕಣ್ಣ ಮಂಜನು ದೂರ ಸರಿಸಿ.

ಕಾಲನೊಡನಾಟದಲ್ಲಿ ಏರಿಳಿತದಾ
ಜಂಜಾಟ, ತುಂಟಾಟ, ನಮ್ಮೀರ್ವರ
ಪಯಣ ಸಾಗಿತ್ತು ಎಲ್ಲಾ ದಾಟಿ,
ಅದೆಷ್ಟು ತಿರುವುಗಳು ಏಳು
ಬೀಳುಗಳು ಹಾದಿಯಲಿ,
ಹಿಂದಿದ್ದ ಗಮ್ಮತ್ತು ಇಂದಿಲ್ಲ
ಮುಂದೇನು ಅರಿತಿಲ್ಲ.

ಹರಿಯೋಣ ಬಾ ನಾವು ಶಾಂತ
ಗಂಭೀರ ನದಿಯಂತೆ, ಎಲ್ಲವನು
ಸಹಿಸುತ್ತ ಗಮ್ಯ ಸೇರುವ ತನಕ
ದಣಿವಾ ಮರೆತು.

***

ಮಡಚು ಕುರ್ಚಿ

-ಮಹಾಬಲ



ಇತ್ತೀಚೆಗೆ ನಮ್ಮ ವೇದಿಕೆಯ ಹಿರಿಯ ಕ್ರಿಯಾಶೀಲ ಸದಸ್ಯ ಶ್ರೀ ಎಂ.ಜಿ. ವೆಂಕಟೇಶ ಮೂರ್ತಿಯವರು ಅಮೆರಿಕಾದ ಸ್ಯಾಂಡಿಯಾಗೋದಲ್ಲಿ ತರಂಗ ಕನ್ನಡ ಕೂಟದ ಸಮಾರಂಭದಲ್ಲಿ ಭಾಗವಹಿಸಿ ಕನ್ನಡದ ಹಿರಿಮೆಯ ಬಗ್ಗೆ,ಮುಂದಿನ ಪೀಳಗೆಗೆ ಕನ್ನಡ ಕಲಿಸುವ ಅಗತ್ಯದ ಬಗ್ಗೆ ಮಾತನಾಡುತ್ತ ಇದ್ದ ದೃಶ್ಯದಲ್ಲಿ ಪಕ್ಕನೆ ನನ್ನ ಗಮನ ಸೆಳೆದದ್ದು ಸಭಾಸದರು ಕುಳಿತಿದ್ದ ಮಡಚುವ ಕುರ್ಚಿಗಳು.

ಭಾರತದಲ್ಲಿ ಈ ಕುರ್ಚಿಗಳು ನೇಪಥ್ಯ ಸೇರಲು ಹವಣಿಸುತ್ತಿರುವಾಗ ದೊಡ್ಡಣ್ಣನ ದೇಶದಲ್ಲಿ ಇಂಥವು ಇನ್ನೂ ತಮ್ಮ ಆಧಿಪತ್ಯ ಮುಂದುವರೆಸಿದ್ದನ್ನು ಕಂಡು ನನಗೆ ಆನಂದ ಆಶ್ಚರ್ಯ ಎರಡೂ ಏಕಕಾಲಕ್ಕೆ ಉಂಟಾದವು.

ಹೌದು, ಈಗ ಯಾವುದೇ ಮನೆಗೆ ಕಾಲಿಟ್ಟರೂ (ಅದೇನು ಅದಷ್ಟು ಸುಲಭವಲ್ಲ ಬಿಡಿ. ಮೊದಲೇ ಫೋನ್ ಮಾಡಬೇಕು, ಬನ್ನಿ ಎಂದರೆ ಹೋಗಬೇಕು. ಹಿಂದಿನ ಕಾಲದ ಹಾಗೆ ಕಬ್ಬಿನ ಗದ್ದೆಗೆ ಆನೆ ನುಗ್ಗಿದಂತೆ ಹೋಗಲಾಗದು) ನಿಮ್ಮ ಕಣ್ಣಿಗೆ ರಾಚುವುದು ಲುಕಿಂಗ್ ಗುಡ್ ಷೋ ರೂಮಿನಲ್ಲೋ, ದಮ್ರೋದಲ್ಲೋ ಅಥವಾ ಸೋಫಾ ಸೋ ಗುಡ್ ಮಳಿಗೆಯಿಂದಲೋ ಮತ್ತೆಲ್ಲಿಂದಲೋ ತಂದ ದಢೂತಿ ಸೋಫಾಗಳು. ಬನ್ನಿ, ಇಲ್ಲೇ ಕುಳಿತುಕೊಳ್ಳಿ ಎಂದು ಆತಿಥೇಯರೇ ನಿಮ್ಮನ್ನು ಸೋಫಾದತ್ತ ನಿರ್ದೇಶಿಸಿದ ಅಥವಾ ಆಜ್ಞೆ ಮಾಡಿದ ಮೇಲೆ ನಿಮಗೆಲ್ಲಿದೆ ಆಯ್ಕೆ? ಕೂರುತ್ತೀರಿ. ನಿಮ್ಮ ಶರೀರ (ಅದರ ತೂಕ ನನಗೆ ಗೊತ್ತಿಲ್ಲ) ಕನಿಷ್ಠ ಒಂದು ಅಡಿ ಕೆಳಗೆ ಹೋಗಲೇಬೇಕು. ತೂಕದವರಾಗಿದ್ದರೆ ಇನ್ನಷ್ಟು ಆಳ. ತಕ್ಷಣ ಏಳಬೇಕೆಂದರೆ ಇಬ್ಬರು ಬೌನ್ಸರುಗಳೇ ಬೇಕೇನೋ!

"ಚೆನ್ನಾಗಿದೆಯಾ? ಇದು ಮೊನ್ನೆ ಶುರುವಾದ ಹೊಸಾ ಶೋರೂಮಿನಿಂದ ತಂದದ್ದು. ತ್ರೀ ಪೀಸ್ ಸೆಟ್ಟಿಗೆ ಎರಡು ಲಕ್ಷ ರೂಪಾಯಿ ಬೇಕಾದರೆ ಇಎಂಐ ಸೌಲಭ್ಯ ಇದೆ (ಈ ಮಾತು ನಿಮ್ಮನ್ನು ಉದ್ದೇಶಿಸಿದ್ದೇ?)" ಮನೆಯ ಒಡೆಯ ಸೋಫಾದ ಬಗ್ಗೆ ವಿವರವಾದ ಪ್ರವರ ಆರಂಭಿಸುತ್ತಾರೆ. ಹೌದು, ನಿಮ್ಮದೇ ತಪ್ಪು. ಕೂತಾಗ ನೀವು ಸೋಫಾ ಸೊಗಸಾಗಿದೆ ಎಂದು ತಾರೀಫು ಮಾಡಲಿಲ್ಲ. ಎಲ್ಲಿ ಕೊಂಡಿರಿ ಎಂದು ಕೇಳಲಿಲ್ಲ, ಬೆಲೆಯನ್ನಂತೂ ವಿಚಾರಿಸಲೇ ಇಲ್ಲ. ಅದಕ್ಕೇ ಅವರು ತಾವೇ ವಿವರಿಸಿದ್ದರಲ್ಲಿ ಏನು ತಪ್ಪಿದೆ ಹೇಳಿ?

ಬಹಳ ಹಿಂದೆ ಹಳ್ಳಿಯಾದರೂ ಸರಿ, ಪಟ್ಟಣವಾದರೂ ಸರಿ. ಮನೆಗೆ ಅತಿಥಿಗಳು ಬಂದಾಗ ಜಂತಿಗೆ ಸಿಕ್ಕಿಸಿದ್ದ ಚಾಪೆ ಬಿಡಿಸಿ ಕುಳಿತುಕೊಳ್ಳಲು ಹೇಳುತ್ತಿದ್ದರು. (ಈ ಮೊದಲು ಮನೆ ಮನೆಗಳಲ್ಲಿ ನಡೆಯುತ್ತಿದ್ದ ನಮ್ಮ ಸಾಹಿತ್ಯ ದಾಸೋಹಗಳಲ್ಲೂ ಎಲ್ಲರೂ ಧರಾಶಾಯಿಗಳಾಗಿ ಸಾಹಿತ್ಯ ದಾಸೋಹವನ್ನ ಆಸ್ವಾದಿಸುತ್ತಿದ್ದರು) ನಂತರ ಮಡಚುವ ಕಬ್ಬಿಣದ ಕುರ್ಚಿಗಳಿಗೆ ಪದೋನ್ನತಿಯಾಯಿತು. ಇದಕ್ಕೆ ಪ್ರಮುಖ ಕಾರಣ ಫ್ಯಾಷನ್ ಜಗತ್ತಿಗೆ ಟೈಟ್ ಪ್ಯಾಂಟುಗಳ ಪ್ರವೇಶ. ಕ್ಲಿಯಟೋನ್, ಗೋದ್ರೆಜ್ ಇಂಥ ಖ್ಯಾತನಾಮರು ಈ ಕುರ್ಚಿಗಳನ್ನು ಪರಿಚಯಿಸಿದರು. ಮನೆಮನೆಗೆ ಕನಿಷ್ಠ ಎರಡು ಈ ಬಗೆಯ ಕುರ್ಚಿಗಳು ಅಡಿಯಿಟ್ಟವು. ಚಾಪೆಗಳು ಹಿಂಸರಿಯದಿದ್ದರೂ ಅವುಗಳ ಪ್ರಭಾವ ಕಡಿಮೆಯಾದುದಂತೂ ನಿಜ.

ಎಪ್ಪತ್ತರ ದಶಕದ ದಿನಗಳಲ್ಲಿ ನಮ್ಮ ಮನೆಯಲ್ಲೂ ಇದೇ ಹಣೆಬರಹ. ಒಂದೇ ಒಂದು ಸ್ಟೂಲು ನಮ್ಮ ಮನೆಯಲ್ಲಿ ಇತ್ತು. ಪ್ರಧಾನವಾಗಿ ಅದನ್ನು ಅಟ್ಟದಿಂದ ಬೇಕಾದ ಸರಕುಗಳನ್ನು ಇಡಲು ಮತ್ತು ಇಳಿಸಲು ಬಳಸಲಾಗುತ್ತಿತ್ತು. ಓದುವಾಗ ನಾವು ಅದನ್ನು ಸರದಿಯ ಮೇಲೆ ಬಳಸಬೇಕಾಗುತ್ತಿತ್ತು. ಮನೆಯಲ್ಲಿ ಓದುವ ಮಂದಿ ಹೆಚ್ಚಿದ್ದುದೇ ಅದಕ್ಕೆ ಕಾರಣ.

ನಮ್ಮ ತಂದೆ ಕೆ ಎಸ್ ನ ಅವರನ್ನು ಕಾಣಲು ಹಲವಾರು ಸಾರಸ್ವತ ಮಾನ್ಯರು ಬರುತ್ತಿದ್ದರಿಂದ ಮತ್ತು ಈ ಹಿಂದೆ ಹೇಳಿದಂತೆ ಟೈಟ್ ಪ್ಯಾಂಟ್ ಯುಗ ಆರಂಭವಾದ್ದರಿಂದ ಕಬ್ಬಿಣದ ಕುರ್ಚಿಗಳ ಅಗತ್ಯ ಮನಗಂಡು ಎರಡು ಕ್ಲಿಯರ್ ಟೋನ್ ಕುರ್ಚಿಗಳನ್ನು ಮನೆ ತುಂಬಿಸಿಕೊಳ್ಳಲಾಯಿತು. ದ ರಾ ಬೇಂದ್ರೆ, ಎಸ್ ಎಲ್ ಭೈರಪ್ಪ, ನಿಸಾರ್ ಅಹಮದ್, ಪರ್ವತವಾಣಿ, ಲಂಕೇಶ್ ಎಲ್ಲರೂ ಈ ಕುರ್ಚಿಗಳ ಮೇಲೇ ಕುಳಿತು ತಮ್ಮ ಸಾಹಿತ್ಯ ಸಲ್ಲಾಪ ನಡೆಸುತ್ತಿದ್ದುದು ಸರ್ವೇಸಾಧಾರಣವಾದ ದೃಶ್ಯವಾಗಿತ್ತು.

ನನ್ನ ಮದುವೆ ಬೆಂಗಳೂರಿನಲ್ಲಿ ತಕ್ಕಮಟ್ಟಿಗೆ ವೈಭವೋಪೇತವಾಗಿಯೇ ನಡೆಯಿತು. ಗ್ರಾಂಡ್ ಚೇರುಗಳ ಆರತ್ಯಕ್ಷತೆ, ದೀಪಾಲಂಕಾರ, ಸುಗ್ರಾಸ ಭೋಜನ ಎಲ್ಲ ಭರ್ಜರಿಯಾಗಿತ್ತು. ಆದರೆ ನನಗೆ ಇಂದೂ ಸ್ಮರಣೀಯವಾಗಿ ಇರುವುದು ನನ್ನ ಶ್ರೀಮತಿಯ ತವರು ಕಲಿಯೂರು ಎಂಬ ಟಿ ನರಸೀಪುರ ತಾಲೂಕು ಸಣ್ಣ ಹಾಗೂ ಸುಮನೋಹರ ಗ್ರಾಮಕ್ಕೆ ಹೋದಾಗ. ಸುಮಂಗಲಿಯರ ಕದಲಾರತಿಯೊಡನೆ ನಮ್ಮನ್ನು ಮಾವನ ಮನೆಯೊಳಗೆ ಬರಮಾಡಿಕೊಳ್ಳಲಾಯಿತು. 'ಮದುಮಕ್ಕಳ ಆರತ್ಯಕ್ಷತೆ ಇಲ್ಲವೇ ವಸಂತಮ್ಮ' ಎಂದು ಯಾರೋ ನಮ್ಮ ಅತ್ತೆಯವರನ್ನು ಕೇಳಿದಾಗ ಅವರು. "ಇದೆ... ಇದೆ... ನಾಳೆ ಇಲ್ಲೇ ಬಂದುಬಿಡಿ" ಎಂದು ಆಹ್ವಾನಿಸಿದರು.

ಮಾರನೆಯ ದಿನ ಮನೆಯ ವಿಶಾಲವಾದ ಹಜಾರದಲ್ಲಿ ಎರಡು ಗೋದ್ರೆಜ್ ಮಡಚುವ ಕುರ್ಚಿಗಳನ್ನು ಹಾಕಲಾಯಿತು. ನನಗೆ ಪೇಟೆ ಡ್ರೆಸ್ ಹಾಕಿಕೊಳ್ಳಲು ತಾಕೀತು ಮಾಡಿದರು (ಮನೆಯಾಕೆಗೆ ರೇಸಿಮೆ ಸೀರೆ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ ಬಿಡಿ). ನಾನು ಸಫಾರಿ ಸೂಟ್ ಧರಿಸಿದೆ. ಹಳ್ಳಿಯಲ್ಲಿ ಕರೆಂಟ್ ಕೈಕೊಡುವ ಸಂದರ್ಭ ಇದ್ದುದರಿಂದ ಮಾವನವರು ಪೆಟ್ರೋಮಾಕ್ಸ್ ದೀಪ ತರಿಸಿದ್ದರು.

ಬಂದವರೆಲ್ಲ ಅಕ್ಷತೆ ಹಾಕಿ ಕೈಗೆ ಮುಯ್ಯಿ ಕವರ್ (ಪ್ರಸಂಟೇಷನ್) ಇತ್ತು, ಗ್ರಾಮ್ಯ ಭಾಷೆಯಲ್ಲಿ ವಿಧವಿಧವಾಗಿ ಹಾರೈಸಿದರು. ಯಂತ್ರದಂತೆ ಕೈಮುಗಿಯುತ್ತ, ಹಸ್ತಲಾಘವ ನೀಡುತ್ತ, ಹೆಹ್ಹೆ ಎಂದು ನಗುವ ನಾಟಕವಾಡುವ ಪ್ರಮೇಯವೇ ಬರಲಿಲ್ಲ. ಕೂರಲು ಇದ್ದ ಕಬ್ಬಿಣದ ಕುರ್ಚಿಗಳು ಕೂತು ಎದ್ದು ಮಾಡಲು ಸುಲಭವಾದ ಆಸರೆಯಾಗಿತ್ತು..

ಕಂಬಾರರ 'ಜೋಕುಮಾರಸ್ವಾಮಿ' ನಾಟಕದ ಆರಂಭದ ದೃಶ್ಯದಲ್ಲಿ ಬಬಪಗಡಿ,ಕೋಟು, ಕಚ್ಚೆಪಂಚೆ ಧರಿಸಿ, ಮೀಸೆ ತಿರುವುತ್ತ ಕುಣಿಯುತ್ತ ಬರುವ ಸಾಹುಕಾರನ ಹಿಂದೆ ನೆರಳಿನಂತೆ ಬರುವ ಒಬ್ಬ ಚಾರ. ಅವನ ಒಂದು ಕೈಯಲ್ಲಿ ಬಿಡಿಸಿದ ಚತ್ರಿ ಸಾಹುಕಾರನಿಗೆ ಹಿಡಿಯಲು. ಮತ್ತೊಂದು ಕೈಯಲ್ಲಿ ಮಡಚಿದ ಕಬ್ಬಿಣದ ಕುರ್ಚಿ ಸಾಹುಕಾರ ಬಯಸಿದಲ್ಲಿ ಕೂರಲು. ಈ ದೃಶ್ಯ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ಈಗ ಹೇಳಿ ಅವನ ಕೈಲಿ ಸೋಫಾ ಕೊಟ್ಟಿದ್ದರೆ ಅದನ್ನು ಹೊತ್ತು ತಿರುಗಲು ಸಾಧ್ಯವಾಗುತ್ತಿತ್ತೆ? ರಂಗದ ಮೇಲೆ ಇಂಥ ವರ್ಣರಂಜಿತ ನೋಟ ಲಭಿಸುತ್ತಿತ್ತೆ.?

ಮನೆಗಳಲ್ಲಿ ಸಣ್ಣಸಣ್ಣ ಸಮಾರಂಭಗಳು ಏರ್ಪಾಟಾದಾಗ ಈ ಕಬ್ಬಿಣದ ಕುರ್ಚಿಗಳನ್ನು ಸುಲಭವಾಗಿ ಮಡಚಿ ಮೂಲೆಯಲ್ಲಿ ಇರಿಸಿ ದಾರದಿಂದಲೋ ಸರಪಣಿಯಿಂದಲೋ ಕಟ್ಟಿ ಇಡಬಹುದು ಅಥವಾ ಅವನ್ನು ಹಜಾರದಲ್ಲಿ ಬಿಡಿಸಿಹಾಕಿ ಸಮಾರಂಭಕ್ಕೆ ಬರುವ ತಾತ್ಕಾಲಿಕ ನಿರುದ್ಯೋಗಿ ಪುರುಷ ಆಹ್ವಾನಿತರಿಗೆ ಒಂದು ದಿಢೀರ್ ಹರಟೆ ಕಟ್ಟೆ ನಿರ್ಮಿಸಿಕೊಟ್ಟು ಅವರು ಪ್ರಪಂಚದ ಆಗುಹೋಗುಗಳ ಬಗ್ಗೆ ದೀರ್ಘ ಚರ್ಚೆ ನಡೆಸಲು ಅನುವುಮಾಡಿ ಕೊಡಬಹುದಿತ್ತು. ಆದರೆ ತ್ರೀಪೀಸ್ ಸೋಫಾಸೆಟ್ ಹೀಗೆ ಎತ್ತಂಗಡಿ ಮಾಡಬೇಕಾದರೆ ಅಕ್ಷರಶಃ ನಾಲ್ಕು ಜನರೇ ಬೇಕಾದೀತು. ಸರಳವಾದದ್ದು ಎಂದಿಗೂ ಸುಂದರವೇ.

ಆಧುನಿಕ ಆವಿಷ್ಕಾರ ಕೂರಕ್ಕಲ್ಲ, ದೊಡ್ಡಸ್ತಿಕೆಗೆ ಎಂಬುದು ನಿತ್ಯ ಸತ್ಯ. ಯಾವುದೇ ಸಿನಿಮಾ, ದೂರದರ್ಶನ ಧಾರಾವಾಹಿ ನೋಡಿ. ಅಲ್ಲಿನ ಸೇವಕ ಪಾತ್ರಧಾರಿಗಳು ತಮ್ಮ ಹೆಗಲ ಮೇಲಿನ ಟವಲಿನಿಂದ ಶುಚಿಮಾಡುವ ನೆಪದಲ್ಲಿ ಸೋಫಾವನ್ನು ಝಾಡಿಸುತ್ತಿರುತ್ತಾರೆ. ಯಾರಾದರೂ ಅಲ್ಲಿ ಕೂತದ್ದನ್ನು ಕಂಡಿರುವಿರಾ?

ಮೊನ್ನೆ ಮನೆಗೆ ಒಬ್ಬ ಮಿತ್ರ ಬಂದ. ನಾವು ಸೋಫಾದತ್ತ ಕೈ ತೋರಿಸಿ "ಆಸನಂ ಸಮರ್ಪಯಾಮಿ" ಎಂದರೂ ನಮ್ಮ ಆಹ್ವಾನ ತಿರಸ್ಕರಿಸಿ ಅವನು ಹುಡುಕುತ್ತಿದ್ದುದು ಮೂಲೆಯಲ್ಲಿದ್ದ ಆ ಕಬ್ಬಿಣದ ಕುರ್ಚಿಯತ್ತ; ಆರೋಗ್ಯದ ಹಿತದೃಷ್ಟಿಯಿಂದ.


ಇಷ್ಟೇ ಏಕೆ? ಕಬ್ಬಿಣದ ಮಡಚು ಕುರ್ಚಿಗಳು ವಾಪಸಾಗುತ್ತಿವೆ ಎಂಬುದಕ್ಕೆ ಇನ್ನೂ ಬೇಕಾದಷ್ಟು ಪುರಾವೆಗಳಿವೆ. ಆದರದಿಂದ ಅಂಥ ಮಡಚು ಕುರ್ಚಿಗಳನ್ನು ಬಾಗಿಲು ತೆರೆದು ಬರಮಾಡಿಕೊಳ್ಳಿ ಒಳಗೆ...

***



'ಗೊಂಬೆ ಮೇಳ' – ಚಿತ್ರಕೃಪೆ: ಡಾ. ಶುಭಶ್ರೀ ಪ್ರಸಾದ್

ಪುಸ್ತಕ ಪರಿಚಯ



ಪ್ರಕಟಣೆ 2022 – ವಸಂತ ಪ್ರಕಾಶನ
ಪುಟಗಳು 320; ಬೆಲೆ ರೂ. 300.00

ವ್ಯಕ್ತಿಚಿತ್ರಗಳ ಚಿತ್ರಕಾವ್ಯ 'ಪಂಕ್ತಿ ಪಾವನರು'

– ವಿಜಯ್ ಭರ್ತೂರ್

ಪುಸ್ತಕಗಳನ್ನು ಓದುವ ಹವ್ಯಾಸವಿರುವವರಿಗೆ ಅದೇ ಒಂದು ವೈವಿಧ್ಯಮಯ ಜಗತ್ತು. ಅದು ಜ್ಞಾನ ಭಂಡಾರ, ಮನ ರಂಜನೆಯ ತಾಣ, ವಿಷಯ ಪ್ರವೇಶದ ಬೆಳಕಿಂಡಿ. ನಮಗೆ ಆದರ್ಶವಾಗಬಲ್ಲ ಪ್ರಿಯರಾದ ವ್ಯಕ್ತಿಗಳ ಜೀವನದ ವಿಶೇಷ ಸಂದರ್ಭಗಳ ರಸಪಾಕವನ್ನು ಸವಿಯುವುದೇ ಒಂದು ರಸಘಟ್ಟ. ಇದು ಇತಿಹಾಸದ ಒಂದು ಭಾಗವೂ ಹೌದು. ಈ ರೀತಿಯ ಅನೇಕ ಪುಸ್ತಕಗಳು ಕನ್ನಡದಲ್ಲಿ ಬಂದಿವೆ. ಆ ಸಾಲಿಗೆ ಶತಾವಧಾನಿ ಡಾ। ರಾ.ಗಣೇಶರ "ಪಂಕ್ತಿ ಪಾವನರು" ಉತ್ತಮ ಕೊಡುಗೆ. ಹಲವು ಬಾರಿ ಲೇಖಕನ ಹೆಸರೇ ನಮಗೆ ಪುಸ್ತಕ ಪ್ರವೇಶಕ್ಕೆ ಮೊದಲ ಮೆಟ್ಟಿಲಾಗುತ್ತದೆ.

ಗಣೇಶರು ಸ್ವತಃ ವಾಗ್ಮಿಗಳು, ವಿದ್ವಾಂಸರು, ಆಶುಕವಿಗಳು. ಅವರೊಡನಾಡಿದ ವ್ಯಕ್ತಿಗಳೂ ಮೇರು ವ್ಯಕ್ತಿತ್ವದವರೇ. ಅಂತಹ ಒಂಭತ್ತು ಮಂದಿಯ ಜೀವನದ ಕುತೂಹಲಕರ ವಿಷಯಗಳನ್ನೊಳಗೊಂಡ ಪುಸ್ತಕವಿದು. ಇಲ್ಲಿ ಶ್ರೋತ್ರೀಯ ವೇದವಿದರಿದ್ದಾರೆ, ಪಂಡಿತರಿದ್ದಾರೆ, ವಿಮರ್ಶಕರಿದ್ದಾರೆ, ಚಿತ್ರಕಲಾ ಚತುರರಿದ್ದಾರೆ, ನೃತ್ಯ ಶಾರದೆಯಿದ್ದಾರೆ, ಕಾದಂಬರಿ ಲೋಕದ ಪ್ರಮುಖರಿದ್ದಾರೆ, ಯಕ್ಷಗಾನಪಟುವಿದ್ದಾರೆ. ಹೀಗೆ ಸಾಹಿತ್ಯ, ಸಂಗೀತ, ನೃತ್ಯ, ಚಿತ್ರಕಲಾ ಲೋಕದ ವರ್ಣಮಯ ವರ್ಣನೆ ಇಲ್ಲಿದೆ.

ವೇದಮೂರ್ತಿ ಶೇಷಣ್ಣ ಶ್ರೌತಿಗಳು ಗಣೇಶರಿಗೆ ಸಾಮವೇದದ ಪಾಠ ಹೇಳಿದ ಗುರುಗಳು. ಅವರನ್ನು ಕುರಿತಾದ ಲೇಖನದಲ್ಲಿ ಶೇಷಣ್ಣನವರ ಶ್ರದ್ಧೆ, ತಾಳ್ಮೆ, ಅಪರಿಗ್ರಹವ್ರತ, ಶಿಸ್ತು ಮೊದಲಾದ ಸಾತ್ವಿಕ ಗುಣಗಳನ್ನೂ ಹಾಗೂ ಅದಕ್ಕೆ ನಿದರ್ಶನವಾಗಬಲ್ಲ ಸಂಗತಿಗಳನ್ನೂ ವಿವರಿಸಿದ್ದಾರೆ. ಇಂತಹ ಮನೋಬಲವುಳ್ಳ ಆ ಕಾಲದ ವ್ಯಕ್ತಿಗಳ ಜೀವನ ರೀತಿಗಳು ನಮ್ಮ ಕಣ್ಣಮುಂದಾಗುವಂತಿದೆ ಇಲ್ಲಿನ ಚಿತ್ರಣ.

ಅವಧಾನ ಕ್ಷೇತ್ರದಲ್ಲಿ ಗಣೇಶರು ತೊಡಗಿಕೊಳ್ಳಲು ಕಾರಣರಾಗಿ ಮಾರ್ಗದರ್ಶಕರೂ ಆದ ಲಂಕಾ ಕೃಷ್ಣಮೂರ್ತಿ ಯವರು ಹಾಗೂ ಇವರ ಅವಧಾನ ಮಿತ್ರರೂ, ಡಿ.ವಿ.ಜಿ.ಯವರ ಶಿಷ್ಯರೂ ಆದ ಟಿ.ಎನ್.ಪದ್ಮನಾಭನ್‌ರವರನ್ನು ಕುರಿತ ಎರಡು ಆಪ್ತ ಲೇಖನಗಳು, ಅವರೊಡನೆ ಕಂಡ ಅವಧಾನಗಳ ಅನುಭವಗಳನ್ನು ಹಲವು ಸನ್ನಿವೇಶಗಳ ಗಂಭೀರತೆ ಹಾಗೂ ಹಾಸ್ಯ ಸಂಗತಿಗಳನ್ನೂ ಒಳಗೊಂಡಿದೆ. ಕನ್ನಡ, ತೆಲುಗು ಹಾಗೂ ಸಂಸ್ಕೃತಗಳ ಭಾಷಾ ಚಮತ್ಕಾರಗಳು, ಪ್ರಸಂಗಾವಧಾನಗಳು ರಂಜಿಸುತ್ತವೆ.

ಇನ್ನು ಕಾದಂಬರಿ ಕ್ಷೇತ್ರದ ದಿಗ್ಗಜ ಎಸ್.ಎಲ್.ಭೈರಪ್ಪನವರಿಗೆ ಗಣೇಶರೇ ಅಭಿಮಾನಿ. ಅವರ 'ಪರ್ವ'ದ ನಂತರದ ಕಾದಂಬರಿಗಳಲ್ಲಿ ಗಣೇಶರೂ ಸಕ್ರಿಯವಾಗಿ ಪಾಲ್ಗೊಂಡ ವಿವರಗಳು, ಇವರ ಪ್ರಶ್ನೆಗಳಿಗೆ ಸಿಕ್ಕ ಉತ್ತರಗಳು, ಹಲವಾರು ಕೃತಿಗಳ ಬಗೆಗಿನ ಚರ್ಚೆಗಳು, ಆಪ್ತ ಸಂಭಾಷಣೆಗಳು, ಬರೆಯುವ ಮುನ್ನಿನ ಪೂರ್ವಸಿದ್ಧತೆಗಳು, ಬರೆದ ನಂತರದ ಪ್ರವಾಸ ವಿವರ.. ಹೀಗೆ ನಮ್ಮ ನಡುವಿನ ಚಿಂತಕನೊಬ್ಬನನ್ನು ಹತ್ತಿರದಿಂದ ಕಂಡುಕೊಂಡ ಸಾಕ್ಷ್ಯಚಿತ್ರದಂತಿದೆ ಲೇಖನ.

ತಾವು ಬಹುವಾಗಿ ಗೌರವಿಸುವ ಡಿ.ವಿ.ಜಿಯವರ ನಿಕಟವರ್ತಿಗಳಾದ ಎಸ್.ಆರ್.ರಾಮಸ್ವಾಮಿಯವರನ್ನು ಕುರಿತ ಬರೆಹ ನಮಗೆ ರಾಮಸ್ವಾಮಿಯವರ ಹಿರಿದಾದ ಹಾಗೂ ಬಿರುಕಿಲ್ಲದ ಬದುಕನ್ನು ಮುಂದಿಡುತ್ತದೆ. ಅವರ ಮೂಲಕ ಡಿ.ವಿ.ಜಿ. ಹಾಗೂ ಜತೆಯವರ ಮಾತುಕತೆಗಳ ಪರಿಚಯವೂ ನಮಗೆ "ಬೋನಸ್".

ಎಸ್.ಎಲ್.ಭೈರಪ್ಪನವರ ಕಾದಂಬರಿ ಲೋಕದ ಪ್ರಬುದ್ಧ ವಿಮರ್ಶೆಯನ್ನು ವ್ಯಾಪಕ ವಿವೇಚನೆಯೊಂದಿಗೆ ಮಾಡಿರುವ ಎಲ್.ವಿ.ಶಾಂತಕುಮಾರಿಯವರ ಸಾಹಿತ್ಯ ಸೃಷ್ಟಿಯ ಒಳನೋಟದ ಲೇಖನವು ನಮಗೆ ಎಲ್ಲೋ ಕಳೆದು ಹೋಗಿಬಿಡ ಬಹುದಾಗಿದ್ದ ಚೇತನವೊಂದನ್ನು ಎದುರಿಗೆ ನಿಲಿಸುತ್ತದೆ.

ಗಣೇಶರು ಆರಾಧಿಸುವ ವ್ಯಕ್ತಿಗಳಲ್ಲೊಬ್ಬರಾದ 'ಅಭಿನವ ಭರತಾವತಾರ' ಎಂದೇ ಹೆಸರಿಸಿರುವ ನೃತ್ಯಶಾರದೆ ಪದ್ಮಾ ಸುಬ್ರಹ್ಮಣ್ಯಂರವರ ಕಲೆ, ಜೀವನ, ಗುಣಗಳೇ ಮೊದಲಾದ ಭವ್ಯ ವ್ಯಕ್ತಿತ್ವದ ಅನಾವರಣ ಮುಂದಿನ ಲೇಖನ. ನೃತ್ಯಕಲೆಯ ಸೂಕ್ಷ್ಮಗಳು, ಅದನ್ನು ಗ್ರಹಿಸಿ ಅನುಭವಿಸುವ ಆಕೆಯ ಮನಸು, ತಲ್ಲೀನತೆ, ಸೃಷ್ಟಿಶೀಲತೆಗಳೇ ಮೊದಲಾದುವು ಹಾಗೂ ಗಣೇಶರೂ ಭಾಗವಾದ ಸನ್ನಿವೇಶ ಕೌತುಕಗಳು ಕಣ್ಣರಳಿಸುತ್ತದೆ.

ಅವರು ಆರಾಧಿಸುವ ಮತ್ತೊಬ್ಬರಾದ ಕುಂಚ ವಿರಿಂಚಿ ಬಿ.ಕೆ.ಎಸ್. ವರ್ಮಾರವರ ಬಗೆಗೂ ಅದೇ ರೀತಿಯ ಪ್ರಸಂಗಾವಧಾನ ಇಲ್ಲಿದೆ. 'ಚಿತ್ರಕಾವ್ಯ'ವೇ ಮೊದಲಾಗಿ ಅನೇಕ ಜುಗಲ್‌ಬಂದಿಗಳಲ್ಲಿ ದೇಶ ವಿದೇಶಗಳಲ್ಲಿ ಅವರ ಅನುಭವಗಳು, ಸಂಭಾಷಣೆಗಳು ಹರಳುಗಟ್ಟಿವೆ. ಬೆರಗು ಹುಟ್ಟಿಸುವ ಅನೇಕ ವಿವರಗಳು ಸಿಗುತ್ತವೆ. ವಿಶ್ವಮಾನ್ಯ ಕಲಾವಿದನೊಬ್ಬನ ಶ್ರಮ, ಸಾಧನೆ, ಪ್ರತಿಭೆಗಳೊಂದಿಗೆ ಮಾನವೀಯ ಮುಖದರ್ಶನವೂ ದೊರೆಯುತ್ತದೆ.

ಇನ್ನು ಅವರ ಯಕ್ಷಗಾನ ಪ್ರದರ್ಶನಗಳ ಜೊತೆಗಾರ ಮಂಟಪ ಪ್ರಭಾಕರ ಉಪಾಧ್ಯರ ಕಲೋಪಾಸನೆಯ ಜತೆಜತೆಗೇ ಅವರ ಉದ್ದಿಮೆಯ ಕೌಶಲ, ಸಾಮಾಜಿಕ ಕಾಳಜಿ, ಅತಿಥಿ ಪ್ರೇಮ, ಮಾನವೀಯ ಮುಖ ಹೀಗೆ ಕಡೆದಿಟ್ಟ ಶಿಲ್ಪದ ಚಿತ್ರಣ ನಮಗೆ ರಸಾಭಿನಯದ ಮಲ್ಲಿಗೆಯ ಮಂಟಪ ಲೇಖನದಲ್ಲಿದೆ. ಸಹಸ್ರಾರು ಸ್ತ್ರೀ ವೇಷಗಳನ್ನು ಧರಿಸಿ ನರ್ತಿಸಿದ ಈ ಜೀವದ ಮೃದು ಹೃದಯದ ಭಾವಸಂಚಯನ ಹಾಗೂ ಕಲಾನಿಷ್ಠೆ ಇಲ್ಲಿ ಸೋದಾಹರಣವಾಗಿದೆ.

ಒಟ್ಟಿನಲ್ಲಿ ನವರತ್ನಗಳಂತಹ ಪ್ರಖರ ದೀಪಧಾರಿಗಳು ದಾರಿದೀಪವಾಗಿ ಮನಸಿನಲ್ಲುಳಿಯುವ "ಗದ್ಯಕಾವ್ಯ" ಎನ್ನಬಹುದಾದ ಬರಹವಿದು. ಅದಲ್ಲದೆ ಸಾಂದರ್ಭಿಕವಾಗಿ ಬರುವ ಹಲವು ಗಣ್ಯವ್ಯಕ್ತಿಗಳ ಚಿತ್ರಣಗಳೂ ಇಲ್ಲಿ ಸಿಗುತ್ತದೆಯಲ್ಲದೆ ಸ್ವತಃ ಗಣೇಶರನ್ನು ಅರ್ಥೈಸಿಕೊಳ್ಳಬಹುದಾದ ದಾಖಲೆಯ ಸಂಗತಿಗಳು ಇಲ್ಲಿ ನಮಗೆ ಲಭ್ಯ. ಆರಂಭದಲ್ಲಿ ಗಣೇಶರೇ ಒಪ್ಪಿಸಿಕೊಂಡಂತೆ ಇಂತಹ ಮತ್ತೂ ಹಲವು ಮಹಿಮಾನ್ವಿತರ ಬಗೆಗೆ ಅವರಿಗೆ ಬರೆಯಲಾಶೆಯಿದೆ. ಅದು ಈಡೇರಬೇಕು. ಮುಂದಿನ ಭಾಗವನ್ನು ನಿರೀಕ್ಷಿಸುವಂತೆ ಮಾಡುವ ಕೃತಿ ಇದು.

***

ದ್ರಾಕ್ಷಿ ತೋಟಗಳ ಒಂದು ಸುಂದರ ನೋಟ: ನಾಪಾ ವ್ಯಾಲಿ

– ನಾಗರತ್ನ ಚಂದ್ರಶೇಖರ



ನಾಪಾ ವ್ಯಾಲಿ ಕ್ಯಾಲಿಫೋರ್ನಿಯಾದ ಸ್ಯಾನ್‌ಫ್ರಾನ್ಸಿಸ್‌ಕೋದಿಂದ 70 ಮೈಲಿ ಅಂದರೆ 120 ಕಿಲೋಮೀಟರ್ ದೂರದಲ್ಲಿ, 35 ಮೈಲಿಗಳ ವಿಸ್ತಾರ, 5 ಮೈಲಿ ಅಗಲದಲ್ಲಿ ಹರಡಿಕೊಂಡಿರುವ ದ್ರಾಕ್ಷಿ ತೋಟಗಳ ಸುಮಾರು 500 ವೈನರಿಗಳಿಗೆ ಕೇಂದ್ರವಾಗಿದೆ. ನಾಪಾವ್ಯಾಲಿಯ 5 ಪಟ್ಟಣಗಳಲ್ಲಿ ಪ್ರತಿಯೊಂದುರಲ್ಲೂ ಸಾಕಷ್ಟು ದ್ರಾಕ್ಷಾರಸ (ವೈನ್) ರುಚಿ ನೋಡುವ ವ್ಯವಸ್ಥೆ ಕೂಡ ಇದೆ. ಈ ಸ್ಥಳಗಳ ಬಗ್ಗೆ ಮೊದಲಿಗೆ ಸ್ಥಳ ಕಾದಿರಿಸಿ ನಾವು ಪ್ರಯಾಣಿಸಿದರೆ ಒಳ್ಳೆಯದು. ರುಚಿ ನೋಡಲು 20 ಡಾಲರ್‌ನಿಂದ 200 ಡಾಲರ್‌ವರೆಗೂ ನಮ್ಮ ಹಣಕಾಸಿನ ಸ್ಥಿತಿ ನೋಡಿ ಸ್ಥಳ ಕಾಯ್ದಿರಿಸಬಹುದು. ನಾವು ಹೀಗೆ ಆರಿಸಿಕೊಂಡ ಸ್ಥಳ ಕ್ಯಾಸ್ಟ್ ಲೋ ಡಿ ಅಮರೋಸ ಎನ್ನುವ 13ನೇ ಶತಮಾನದಲ್ಲಿದ್ದ ಟಸ್ಕನ್ ಶೈಲಿಯ ಕೋಟೆಯ ಮರು ನಿರ್ಮಾಣದ ಕಲ್ಲಿನ ಕೋಟೆ. ನಾಸಾ ಪಟ್ಟಣ 175 ವರ್ಷಗಳ ಹಿಂದೆ ನಿರ್ಮಿಸಿದ್ದಾದರೂ, ಇಂದಿಗೂ ತನ್ನ ಆಕರ್ಷಣೆಯನ್ನು ಹೆಚ್ಚಿಸಿಕೊಳ್ಳುತ್ತಾ ಪ್ರವಾಸಿಗರನ್ನು ಸೆಳೆಯುತ್ತಿದೆ. ನೂರಾರು ಬಗೆಬಗೆಯ ರೆಸ್ಟೋರೆಂಟ್‌ಗಳಲ್ಲಿ ವೈವಿಧ್ಯಮಯ ದ್ರಾಕ್ಷಾರಸ ಹಾಗೂ ತಿಂಡಿ, ತಿನಿಸುಗಳನ್ನು ಸವಿಯಬಹುದಾದ ಆಯ್ಕೆ ಇಲ್ಲಿದೆ. ಮಗಳ ಮನೆಯಿಂದ ನಾವು ಎರಡು ಗಂಟೆ ಪ್ರಯಾಣಿಸುತ್ತಾ ನಿಗದಿತ ಸ್ಥಳ ತಲುಪಿದೆವು. ದಾರಿಯ ಇಕ್ಕೆಲಗಳಲ್ಲಿ ಬಣ್ಣಬಣ್ಣದ, ಗುಂಪುಗುಂಪಾದ ಗಣಿಗಲೇ ಹೂ ತುಂಬಿ ತುಳುಕುತ್ತಿದ್ದ ರಮ್ಯ ನೋಟ, ಜೊತೆಗೆ ಹತ್ತಿರ ಹೋಗುತ್ತಿದ್ದಂತೆ ಮಂಜು ಮುಸುಕಿದ ಬೆಟ್ಟಗುಡ್ಡಗಳು.



ದ್ರಾಕ್ಷಿ ಬಳ್ಳಿಗಳನ್ನು ಇಲ್ಲಿ ಚಪ್ಪರಗಳ ಮೇಲೆ ಬೆಳೆಸುವುದಿಲ್ಲ. ಚಿಕ್ಕ ಚಿಕ್ಕ ಪೊದೆಯಂತೆ ಕಾಣುವ ಗಿಡಗಳ ಸುತ್ತ ಗೊಂಚಲುಗಳು ತುಂಬಿದ ಬಳ್ಳಿಗಳನ್ನು ನಿರ್ದಿಷ್ಟ ಎತ್ತರಕ್ಕೆ ಕತ್ತರಿಸಿರುತ್ತಾರೆ. ಈ ಬಳ್ಳಿಗಳಲ್ಲಿ ಬೆಳೆಯುವ ದ್ರಾಕ್ಷಿ ಗೊಂಚಲುಗಳು ತಮ್ಮ ಜೀವಿತದ ಕೊನೆಗೆ ಎಚ್ಚರಿಕೆಯಿಂದ ಆರಿಸಿದ ಗುಣಮಟ್ಟದ ದ್ರಾಕ್ಷಾರಸವಾಗಿ ನಮ್ಮ ಗ್ಲಾಸುಗಳಲ್ಲಿ ತುಂಬಿಕೊಳ್ಳುತ್ತವೆ. ವೈನ್ ಸೇವಿಸುವುದು ಕೂಡ ಒಂದು ಕಲೆ ಎನ್ನಬಹುದು. ನಿರ್ದಿಷ್ಟ ಶೈಲಿಯಲ್ಲಿ ಬೆರಳುಗಳ ಮಧ್ಯೆ ತುಂಬಿದ ಗ್ಲಾಸ್‌ಗಳನ್ನು ಹಿಡಿದು ಅದರ ಸುವಾಸನೆಯನ್ನು ಮೆಲ್ಲಗೆ ಮೊದಲಿಗೆ ಗ್ರಹಿಸಬೇಕು. ಹೆಚ್ಚಿನ ಅನುಭವ ಇದ್ದವರು ಅದನ್ನು ಮೂಗಿನ ಬಳಿ ಹಿಡಿದು ಲೋಟವನ್ನು ಒಂದು ಸುತ್ತು ಅಲ್ಲಾಡಿಸುವುದರಿಂದ ದ್ರಾಕ್ಷಿಯ ಗುಣಮಟ್ಟವನ್ನು ಅರಿಯುತ್ತಾರೆ. ನಿಧಾನವಾಗಿ ಗುಟುಕರಿಸುತ್ತಾ ಕುಡಿದಾಗ ಮಾತ್ರ ನಿಜವಾದ ತೃಪ್ತಿ ಲಭ್ಯ.

ದ್ರಾಕ್ಷಿ ಗಿಡಗಳಲ್ಲಿ ಮೊಗ್ಗಾಗಿ ಅರಳಿದ ಹೂಗಳು ಕಾಯಾಗಿ ಕೊಯ್ಲಿಗೆ ಬರುವ ಸಮಯಕ್ಕೆ ಅದರ ಸಕ್ಕರೆ ಅಂಶ ಹಾಗೂ ರುಚಿ ನೋಡಿ ಅದನ್ನು ಕಟಾವು ಮಾಡುವ ಸಮಯ ನಿರ್ಧರಿಸಲಾಗುತ್ತದೆ. ದ್ರಾಕ್ಷಿ ಗೊಂಚಲುಗಳನ್ನು ಬೆಳಗಿನ ಜಾವ ಅಥವಾ ರಾತ್ರಿ ವೇಳೆ ಕೈಯಿಂದ ಕೀಳಲಾಗುತ್ತದೆ. ಹೀಗೆ ಸಂಗ್ರಹಿಸಿದ ದ್ರಾಕ್ಷಿಗಳಿಗೆ ಈಸ್ಟ್ (yeast) ಬೆರೆಸಿದಾಗ ಮಾತ್ರ ಅದು ಸಿಹಿಯಾದ ದ್ರಾಕ್ಷಾರಸವಾಗಿ ಪರಿವರ್ತನೆಯಾಗುತ್ತದೆ. ಹೀಗೆ ತಯಾರಾದ ವೈನ್‌ನ್ನು ದೊಡ್ಡ ದೊಡ್ಡ ಬ್ಯಾರಲ್‌ಗಳಲ್ಲಿ ತಿಂಗಳುಗಟ್ಟಲೆ, ವರ್ಷಗಟ್ಟಲೆ ಸಂಗ್ರಹಿಸಿಡಲಾಗುತ್ತದೆ. ಅಬ್ಬಾ ಎಷ್ಟು ದೊಡ್ಡ ಪಿಪಾಯಿಗಳಲ್ಲಿ ಅದೆಷ್ಟು ದ್ರಾಕ್ಷಾರಸವನ್ನು ಹೇಗೆ ತುಂಬಿಸುತ್ತಾರೋ ಎಂಬ ಕುತೂಹಲ ಮೂಡುತ್ತದೆ. ಈ ಬ್ಯಾರೆಲ್‌ಗಳಿಗೆ ಬಿಗಿಯಾಗಿ ಕಾರ್ಕ್ ಹಾಕಿ ಮುಚ್ಚಿದ ಮೇಲೆ, ಬಿರುಡೆಗಳಿಂದ ಬೇಕಾದಾಗ ಬೇಕಾದಷ್ಟು ದ್ರಾಕ್ಷಾ



ರಸವನ್ನು ಬಾಟಲುಗಳಿಗೆ ವರ್ಗಾಯಿಸಿಕೊಳ್ಳುತ್ತಾರೆ. ಈ ಮಾಹಿತಿಗಳು ನನಗೆ ನಾಪಾವ್ಯಾಲಿಯ ಭೇಟಿಯ ವೇಳೆ ತಿಳಿದುಬಂದದ್ದು.

ಸ್ಪಾರ್ಲಿಂಗ್ ವೈನ್ ನಾಪಾ ವ್ಯಾಲಿಯ ಒಂದು ಉತ್ತಮ ಪೇಯ ಎನ್ನುತ್ತಾರೆ. ವೈನ್ ಮಾಡಲು ಬೇಕಾದ ಮುಖ್ಯ ದ್ರವ್ಯಗಳೆಂದರೆ ಆಸಿಡ್, ಫ್ರೂಟ್ ಮತ್ತು ಆಲ್ಕೋಹಾಲ್. ಓಕ್ ಮರದ ಬೃಹದಾಕಾರದ ಬ್ಯಾರೆಲ್‌ಗಳಲ್ಲಿರುವ ಈ ರಸ ಹಳೆಯದಾದಷ್ಟು ಅದರ ರುಚಿ ಸುವಾಸನೆ ಹೆಚ್ಚುತ್ತಾ ಹೋಗುತ್ತದೆ. ವೈಟ್ ವೈನ್‌ನಲ್ಲಿ ನಿಂಬೆ, ಗ್ರೇಪ್ ಫ್ರೂಟ್ಸ್, ಸೇಬು, ಪೀಚ್ ಮಾವು ಪಿಯರ್, ಅನಾನಸ್, ಪಪ್ಪಾಯಿಗಳ ವಾಸನೆ ಇದ್ದರೆ, ರೆಡ್ ವೈನ್‌ನಲ್ಲಿ ಸ್ಟ್ರಾಬೆರಿ, ಬ್ಲೂ ಬೆರಿ, ಚೆರಿ, ರಾಸ್ಬೆರಿ, ಬ್ಲಾಕ್ ಬೆರಿ, ಫಿಗ್‌ಗಳಿಂದ ಗುರುತಿಸಲಾಗುತ್ತದೆ.

ಕ್ಯಾಸ್ಟ ಲೋ ಡಿ ಅಮರೋಸ. – ನಾವು ಆ ದಿನ ಭೇಟಿ ನೀಡಲು ಆರಿಸಿಕೊಂಡ ಸ್ಥಳ. ಮೂರು ಎಕರೆಯಷ್ಟು ವಿಶಾಲ ಭೂಮಿಯಲ್ಲಿ 30 ವರ್ಷಗಳ ಅವಧಿಯಲ್ಲಿ ನಿರ್ಮಾಣಗೊಂಡ ಈ ಕಲ್ಲಿನ ಕೋಟೆಗೆ ಐದು ಗೋಪುರಗಳಿವೆ. ಒಟ್ಟು 107 ಕೋಣೆಗಳಲ್ಲಿ 95 ಕೋಣೆಗಳನ್ನು ವೈನ್ ತಯಾರಿಕೆಗಾಗಿ ಇರಿಸಲಾಗಿದೆ. ನಾಲ್ಕು ಅಂತಸ್ತುಗಳ ತಳಮಹಡಿ ಸೇರಿ ಒಟ್ಟು ಎಂಟು ಅಂತಸ್ತುಗಳನ್ನು ಈ ಕೋಟೆ ಹೊಂದಿದೆ. ಇದರ ನಿರ್ಮಾಣಕ್ಕೆ ಇಟಲಿ, ಯೂರೋಪ್‌ಗಳಿಂದ ಹಲವಾರು ಕಟ್ಟಡ ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳಲಾಗಿದೆ. ಒಂದು ಚರ್ಚ್, ಒಂದು ಸೆರೆಮನೆ, ಶಸ್ತ್ರಾಸ್ತ್ರ ಕೊಠಡಿ, ಶಿಕ್ಷಾಗೃಹ, ಸೈನ್ಯಾಧಿಕಾರಿಗಳಿಗೆ, ರಾಜಪ್ರಮುಖರಿಗೆ, ಗಣ್ಯ ಅತಿಥಿಗಳಿಗೆ, ಹೀಗೆ ಬೇರೆ ಬೇರೆ ಕೊಠಡಿಗಳನ್ನು ವಿಂಗಡಿಸಲಾಗಿದೆ. ರುಚಿ ನೋಡುವ ಕೋಣೆಗಳು, ಪ್ರವಾಸಿಗಳು ತಂಗವ ಕೋಣೆಗಳು ಇತ್ಯಾದಿ ಕೂಡ ಇದರಲ್ಲಿ ಅಡಕವಾಗಿದ್ದು, 13ನೇ ಶತಮಾನದ ಗತವೈಭವವನ್ನು ಮರುಕಳಿಸುವಂತೆ ಮಾಡುವ ಎಲ್ಲಾ ಪ್ರಯತ್ನಗಳು ಎದ್ದು ಕಾಣುತ್ತವೆ.



ಇಲ್ಲಿ ತಯಾರಾಗುವ ವೈನ್ ಕೂಡ ಇಟಾಲಿಯನ್ ಶೈಲಿಯದೆ ಆಗಿತ್ತು. ಅಲ್ಲಿನ ಹವಾಗುಣ, ಮಣ್ಣು ಬೆಳವಣಿಗೆಯ ಕ್ರಮ ಕ್ಯಾಲಿಫೋರ್ನಿಯ ಹಾಗೂ ಜ್ಞಾಪಾವೇಲಿಯಲ್ಲಿಯೂ ಇರುವುದು ಕಾಕತಾಳೀಯ.

ಕೋಟೆಯ ಸುತ್ತಲಿನ ಕಂದಕದ ಮುಂಭಾಗ ಭಾರವಾದ ಎತ್ತರದ ಕಬ್ಬಿಣದ ಗೇಟುಗಳದ್ದು ಭದ್ರ ರಕ್ಷಣೆಯನ್ನು ನೀಡುತ್ತದೆ .ಸುಮಾರು 700-800 ವರ್ಷಗಳ ಹಿಂದೆ ಉಪಯೋಗಿಸಲಾಗುತ್ತಿದ್ದ ಉಪಕರಣಗಳನ್ನು ಬಳಸಿಕೊಂಡು ಇಡೀ ಕೋಟೆಯನ್ನು ಕಟ್ಟಲಾಗಿದೆ. ಕೋಟೆಯ ಸುತ್ತಮುತ್ತಲಿನ 171 ಎಕರೆಯಲ್ಲಿ 30 ಎಕರೆಯಲ್ಲಿ ಮಾತ್ರ



ದ್ರಾಕ್ಷಿಯನ್ನು ಬೆಳೆಯಲಾಗುತ್ತದೆ. ಇಲ್ಲಿ ತಯಾರಾಗುವ ದ್ರಾಕ್ಷಾರಸ ಅತ್ಯುತ್ತಮ ಗುಣಮಟ್ಟದಾಗಿದ್ದು, ಅವುಗಳನ್ನು ಇಲ್ಲಿ ಮಾತ್ರ ಗ್ರಾಹಕರು ಖರೀದಿಸಬಹುದು. ಹೊರಗೆ ಯಾವುದೇ ರೆಸ್ಟೋರೆಂಟ್‌ಗಳಲ್ಲಿ ಅಥವಾ ವೈನ್‌ಶಾಪ್‌ಗಳಲ್ಲಿ ಇವುಗಳನ್ನು ಮಾರಾಟ ಮಾಡಲಾಗುವುದಿಲ್ಲ. ಗ್ರಾಹಕರಿಗೆ ಬೇಕಾದರೆ ನೇರವಾಗಿ ಅವರ ಬೇಡಿಕೆಗಳನ್ನು ಅನುಸರಿಸಿ ಕಳಿಸಿಕೊಡುವ ವ್ಯವಸ್ಥೆಯು ಇಲ್ಲದೆ. ಇಲ್ಲ ನಾವು 250 ಡಾಲರ್ ಅಂದರೆ ಸುಮಾರು 20 ಸಾವಿರ ರೂ. ಪ್ರವೇಶ ಟಿಕೆಟ್ ಖರೀದಿಸಿದ್ದೆವು. ಮಕ್ಕಳಿಗೆ ಕೇವಲ ದ್ರಾಕ್ಷಾರಸ ಹಾಗೂ ವಯಸ್ಕರಿಗೆ ನಾವು ಆರಿಸಿಕೊಳ್ಳ ಬಹುದಾದ ಯಾವುದೇ ಐದು ಬಗೆಯ ವೈನ್‌ಗಳನ್ನು ರುಚಿ ನೋಡಲು ಅವಕಾಶ ಮಾತ್ರ ಇದ್ದು, ಅವನ್ನು ಕೂಡ ಅವರೇ ನಾವು ಕುಳಿತ ಟೇಬಲ್‌ಗೇ ತಂದು ನಮ್ಮ ನಮ್ಮ ಗ್ಲಾಸ್‌ಗಳಿಗೆ ತುಂಬಿಸಿ ಹೋಗುತ್ತಾರೆ. ಈ ಮೊದಲೇ ಹೇಳಿದಂತೆ ರುಚಿ ನೋಡಲು ಮಾತ್ರ ನಾವು ಅಲ್ಲಿ ಬಂದಿರುವುದು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಜೊತೆಗೆ ನಂಚಿಕೊಳ್ಳಲು ಬ್ರೆಡ್ ಸ್ಟಿಕ್, ವಿವಿಧ ಚೀಸ್ ತುಂಡುಗಳು, ಇನ್ನೂ ಬೇಕೆನಿಸಿದರೆ ಎರಡು ಡಾಲರ್‌ಗೆ ಒಂದರಂತೆ ಚಾಕಲೇಟುಗಳನ್ನು ಖರೀದಿಸಬಹುದು. ನಾವ್ಯಾರೂ ಪಾನಪ್ರಿಯರಾಗಿಲ್ಲದ ಕಾರಣ ಒಂದೆರಡು ಬಗೆಯ ವೈನ್ ರುಚಿ ನೋಡುವಷ್ಟರಲ್ಲಿ ಸಾಕು ಸಾಕೆನಿಸಿತ್ತು. ಮಟಮಟ ಮಧ್ಯಾಹ್ನದ ಬಿಸಿಲಲ್ಲಿ ನಾವು ನಮ್ಮ ಸುತ್ತಮುತ್ತಲಿನ ಟೇಬಲ್‌ನಲ್ಲಿ ಆಸೀನರಾಗಿದ್ದ ಗಂಡುಹೆಣ್ಣುಗಳು ತಂಪಾದ ದ್ರಾಕ್ಷಾರಸವನ್ನು ಅನಿಮಿತವಾಗಿಯೇ ಉದರದೊಳಗಿಳಿಸುತ್ತಾ ಸುಖ ಸಂತೋಷದಿಂದ ಓಲಾಡುತ್ತಿರುವುದನ್ನು ನೋಡುತ್ತಾ ಕಣ್ತುಂಬಿಸಿಕೊಂಡೆವು.

ಊಟದ ಸಮಯಕ್ಕೆ ನಾವು ಬೇರೊಂದು ಇಟಾಲಿಯನ್ ರೆಸ್ಟೋರೆಂಟ್‌ಗೆ ಹೋಗಬೇಕಾಗಿದ್ದರಿಂದ ಕೊನೆಯದಾಗಿ ಆ ಕೋಟೆಯನ್ನು ಒಂದು ಸುತ್ತು ಹಾಕಿ ಹೊರಬಿದ್ದೆವು. ಈ ಕ್ಯಾಸಲ್‌ನ ವಾಸ್ತುಶಿಲ್ಪಿ, ಡಾರಿಯೋ ಸಾಟ್ಟೈ ಮತ್ತು ನಿಮ್ಮಸ್ಕೋವ್ರ್.

ನಾಪಾವ್ಯಾಲಿಯ ಭೇಟಿ ಒಂದು ಮರೆಯಲಾಗದ ಅನುಭವದ ಸುಂದರ ನೆನಪಾಗಿ ಉಳಿದಿದೆ. ಹೆಚ್ಚಿನ ಮಾಹಿತಿ ಬೇಕೆನಿದಸಿರೆ. **Visit napavally.com/.inn** ಸಂಪರ್ಕಿಸಬಹುದು.

***

ಸಮನ್ವಯ ಸಮಿತಿ ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ 217 – 23.09.2023

ಅಧ್ಯಕ್ಷರ ಅನಿಸಿಕೆಗಳು

– ಮಾಧುರಿ ಕೃಷ್ಣ

ಎಲ್ಲರಿಗೂ ನಮಸ್ಕಾರ. ಇಂದಿನ ಸಾಹಿತ್ಯ ದಾಸೋಹ 217ರ ಸುಂದರ ಸಮಾರಂಭಕ್ಕೆ ಅಧ್ಯಕ್ಷಳಾಗುವ ಸದವಕಾಶವನ್ನು ನೀಡಿದ ನಮ್ಮ ಸಸಕಸ ಸಾಹಿತ್ಯ ವೇದಿಕೆಯ ಆದರಣೀಯ ಶ್ರೀಯುತ ಮಹಾಬಲರಿಗೂ, ಬೆಂ.ಶ್ರೀ.ರವೀಂದ್ರ ಅವರಿಗೂ, ಮಾನ್ಯ ಸಂಚಾಲಕ ಸಮಿತಿಯವರಿಗೂ ಮತ್ತು ಒಲವಿನ ಸದಸ್ಯರೆಲ್ಲರಿಗೂ ನಾನು ಮಾಧುರಿಕೃಷ್ಣ ಮಾಡುವ ವಿನಮ್ರಪೂರ್ವಕ ನಮಸ್ಕಾರಗಳು. ಇಂದಿನ ದಾಸೋಹದಲ್ಲಿ ಪ್ರಸ್ತುತಿಯಾದ ರಚನೆಗಳೆಲ್ಲ ಅತ್ಯಂತ ಸುಂದರವೂ ಮಹತ್ವಪೂರ್ಣವೂ ಆಗಿವೆಯಲ್ಲದೆ, ಸಂಪೂರ್ಣ ಕ್ರಿಯಾತ್ಮಕತೆಯಲ್ಲಿ ಸಫಲವಾಗಿವೆ ಎಂಬ ಸ್ಪಷ್ಟ ಭಾವ ನನ್ನದು. ಒಟ್ಟು 14 ಗಟ್ಟಿ ಬರಹಗಳು, ಎರಡು ಕವನಗಳು ಹಾಗೂ ಮೂರನೇ ಕವನದಲ್ಲಿ ಎರಡು ಪ್ರಸ್ತುತಿಗಳವೆ. ಈಗ ಒಂದೊಂದಾಗಿ ನನ್ನ ಅನಿಸಿಕೆಗಳನ್ನು ತಮ್ಮ ಮುಂದೆ ಇರಿಸುತ್ತೇನೆ.

1. ಗುರುರಾಜ ಶಾಸ್ತ್ರಿ – ರುದ್ರ ಭಟ್ಟನ ಪಾರಿಜಾತ ಹರಣ ಕಾವ್ಯ, ಪರಿಚಯ, ಸಂವಾದ

ಅದ್ಡೇಗೋ ಭಾರತೀಯರೆದೆಯಲ್ಲಿ ಸೇರಿ ನಿಂತ ಪಾರಿಜಾತ ಹರಣ ಕಾವ್ಯ ಬಾರಿ ಬಾರಿ ಓದಿನ ವಸ್ತುವಾಗಿ ಆಕರ್ಷಿಸುತ್ತದೆ. ಕವಿ ರುದ್ರ ಭಟ್ಟರ ರಚನೆ – ಜಗನ್ನಾಥ ವಿಜಯ ಕಾವ್ಯ– ಭೂಮಿಯಲ್ಲಿದ್ದ ಕೃಷ್ಣನಿಗೆ ಸ್ವರ್ಗದೊಂದು ಸಮಾರಂಭಕ್ಕೆ ತ್ರಿಲೋಕ ಸಂಚಾರಿ 'ಹಗರಣ ಪ್ರಿಯ' ನಾರದನ ಮೂಲಕ ಆಮಂತ್ರಣ ಬರುತ್ತದೆ. ನಾರದನಾದರೋ ಅಮರಾವತಿಯಲ್ಲರಳದ ಪಾರಿಜಾತ ಪುಷ್ಪವೊಂದನ್ನು ತಂದು ಶ್ರೀಕೃಷ್ಣನಿಗೆ ನೀಡುತ್ತಾನೆ. ಕೃಷ್ಣ ಅದನ್ನು ಪಕ್ಕದಲ್ಲಿ ಕುಳಿತಿದ್ದ ತನ್ನರಸಿ ರುಕ್ಮಿಣಿಗೆ ಮುಡಿಯಲು ಕೊಡುತ್ತಾನೆ. ನಾರದನ ಕೊಂಕು ದೃಷ್ಟಿಯ ಭಾವಾರ್ಥವನ್ನು ಅರಿತ ಕೃಷ್ಣನ ಇನ್ನೊಬ್ಬ ಅರಸಿ ಸತ್ಯಭಾಮೆ ಕೋಪದಿಂದ ಪ್ರವೇಶಿಸುತ್ತಾಳೆ. ಅಲ್ಲಿಗೆ ಕೃಷ್ಣಮೃಗದ ಇಂದ್ರನಿಗೆ ಯುದ್ಧವಾಗಲೇಬೇಕು. ಪಾರಿಜಾತ ವೃಕ್ಷವೇ ಭೂಮಿಗೆ ಬರುವಂತಾಗುತ್ತದೆ. ಇಲ್ಲಿ ಗುರುರಾಜ ಶಾಸ್ತ್ರಿಯವರ ಮನದಲ್ಲಿ ಹಸಿರಾಗಿರುವ ಉಳಿಯುವುದು ರುದ್ರ ಭಟ್ಟ ಕವಿಯ ಕಾವ್ಯ ಕಲ್ಪನೆ, ಕಾಲಮಾನ, ಕಾವ್ಯ ಲಹರಿಗಳು ಅಲ್ಲದೇ ನಾರದನ ಅನಾವಶ್ಯಕ ಪಾತ್ರ, ಪಾತ್ರಾಭಿನಯಗಳು. ಕವಿಯ ಕಾವ್ಯ ಚಾತುರ್ಯದ ಸೊಗಸು ಕೂಡಾ ಇಲ್ಲಿ ಶಾಸ್ತ್ರಿಯವರ ಮನದಂಗಳದಲ್ಲಿ ನಿಲ್ಲುವ ಪರಿ ಅದ್ಭುತವಾಗಿದೆ.

2, ಸರಸ್ವತಿ ನಟರಾಜ್ – ಭಿಕ್ಷೆ

ಸರಳ, ಸುಲಭ ಕತೆಯೆಂದು ಹೊರನೋಟಕ್ಕೆ ಅನಿಸಿದರೂ ಒತ್ತಡಗ್ರಾಹಿಯಾಗಿ, ಆಗುವ ಕತೆ ತುಡಿತ ಮತ್ತು ಪ್ರಕಟನಾ ಶಕ್ತಿಯ ಸೆಳೆತದಿಂದಾಗಿ ನಾಯಕಿ ವನಜಾ ಬಾಳನ ತಾಪದೋಷಗಳಗೆ ತನ್ನನ್ನು ತಾನೇ ದೂಷಿತಳನ್ನಾಗಿ ಮಾಡಿಕೊಳ್ಳುವುದು ಅಷ್ಟೇನೂ ಸಮಂಜಸವಲ್ಲದಿದ್ದರೂ ಮುಂದೆ ಕಾಣಿಸಿ ಬಂದ ಅನಿಷ್ಟಗಳಗೆ ದು:ಖಿತಳಾಗಿ ವಿಷಣ್ಣಳಾಗುವ ಪರಿ ಸರಸ್ವತಿಯವರ ಕತೆ ಭಿಕ್ಷೆಯಲ್ಲಿ ಕನಿಕರಕ್ಕೀಡಾಗುತ್ತದೆ. ಹಲವರ ಬಾಳನ ನೈಜ ಚಿತ್ರಣವೇ ಆಗುವ ಕತೆಯು ತೂಕ ಹೆಚ್ಚಿಸಿಕೊಳ್ಳುತ್ತದೆ ಮತ್ತು ಎಂದಿನಂತೇ ಓದುಗರ ಗಮನ ಸೆಳೆಯುತ್ತದೆ.

೩. ವಿಠ್ಠಲ ಇಜೇರಿ – ಮಕ್ಕಳ ಕತೆಗಳು

ಸಾಹಿತ್ಯಿಕ ಕ್ಷೇತ್ರದಲ್ಲಿ ವಿವಿಧ ಆಯಾಮದಲ್ಲಿ ಹೆಜ್ಜೆ ಮೂಡಿಸಿರುವ ವಿಠ್ಠಲ ಇಜೇರಿಯವರ ಚಿಂತನೆ ಮಕ್ಕಳ ಕತೆಯ ಕಡೆಗೆ ಸೊಗಸಾಗಿ ಹರಿದು ಈ ಬಾರಿಯ ವಿಶೇಷವಾಗುತ್ತದೆ. ಮಕ್ಕಳ ಬೆಳವಣಿಗೆ ಕಾಲದಲ್ಲಿ ಕತೆಗಳ ಅಸಾಧ್ಯ ಪ್ರಭಾವವನ್ನ ಮಂದಟ್ಟು ಮಾಡುತ್ತ ಅವರು ಶೋಧಿಸಿದ ತೆಗೆದ ಕತೆ ಮಹಾಭಾರತದಲ್ಲಿರುವ ನೂರಾರು ಉಪಕತೆ ದಂತಕತೆಗಳಲ್ಲಿ ಇದೂ ಒಂದು. ಪಾಂಡವರ್ಯಾರೂ ಅರಮನೆಯಲ್ಲಿ ಇಲ್ಲದಿರುವಾಗ ಅರಮನೆಗೆ ಬರುವ ದೂರ್ವಾಸ ಮುನಿಗಳ ಭೇಟಿ, ಮಾನವನಿಗೆ ಪಾಠದಂತಿರುವ ಪೂರ್ವ ನಿಯೋಜಿತವಾದದ್ದೇ ಆಗಿರಬೇಕು. ಯಾಕೆಂದರೆ ಅವರ ಸೇವಾ ನಿರ್ವಹಣೆಯನ್ನು ಉತ್ತಮವಾಗಿ ಪಾಲಿಸಿದ ಅಭಿಮನ್ಯುವಿನ ಪತ್ನಿಗೆ ಅವರೇಕೆ ಕನ್ನಡಿಯೊಂದನ್ನು ಬಹುಮಾನಿಸಬೇಕು? ಕೃಷ್ಣನ ಸಹಿತ ಪಾಂಡವರು ಹಿಂದಿರುಗಿ ಬಂದಾಗ ಅದರಲ್ಲಿ ಮುಖ ನೋಡಿಕೊಳ್ಳುವ ಪ್ರಕ್ರಿಯೆ ಆರಂಭವಾಗಿ ಕೃಷ್ಣನ ಸಲಹೆಯಂತೆ ಮೊದಲಾಗಿ ವತ್ಸಲೆ ನೋಡಿಕೊಂಡಾಗ ಅವಳಿಗೆ ಮೆಚ್ಚಿನ ಪತಿ ಅಭಿಮನ್ಯುವೇ ಕಾಣಿಸುವುದು ಸಹಜ ತಾನೇ! ಅದಕ್ಕನುಸಾರವಾಗಿ ಕೃಷ್ಣನಿಗೆ ಕನ್ನಡಿ ತೋರುತ್ತ ಪ್ರತಿಯೊಬ್ಬ ಪಾಂಡುಪುತ್ರನೂ, ತಾನು ಕೃಷ್ಣನ ಆಪ್ತ, ಅದ್ದರಿಂದ ಅದರಲ್ಲಿ ತನ್ನ ಪ್ರತಿಬಿಂಬವೇ ಕಾಣಿಸುತ್ತದೆ ಎಂಬ ವಿಶ್ವಾಸದಲ್ಲಿರುವಾಗ ಕಂಡು ಬಂದದ್ದು ಶಕುನಿಯ ಬಿಂಬ!! ಇದರಿಂದ ನಮಗೆ ದೊರೆಯುವ ಪಾಠವೇನು? ಹೊರನೋಟಕ್ಕೆ ನಾವೆಷ್ಟೇ ಆತ್ಮೀಯರು ಎಂದಂದುಕೊಂಡರೂ ಅಂತರಾಳದಲ್ಲಿ ನಾವು ನಡೆಸಿಕೊಳ್ಳುವ ಚಿಂತನೆಯೇ ಬೇರೆ! ಇನ್ಯಾವ ಯೋಚನೆಯೂ ಇಲ್ಲದೆ ಕುತಂತ್ರಿ ಶಕುನಿಯ ಮೋಸದಾಟಗಳ ಅರಿವಿರುವ ಕೃಷ್ಣ ಸದಾ ಆ ಕುರಿತೇ ಯೋಚಿಸುತ್ತಿದ್ದ. ಹಾಗಾಗಿ ಅವನ ಪ್ರತಿಬಿಂಬದಲ್ಲಿ ನಿರಾಯಾಸವಾಗಿ ಶಕುನಿಯು ತಳವೂರಿದ್ದ. ಅರ್ಥೈಸಿಕೊಳ್ಳಲು ತುಸು ಕಠಿಣವೆನಿಸಿದರೂ, ಮಾನವ ಸಹಜ ಪ್ರವೃತ್ತಿ ಸಿದ್ಧಾಂತಕ್ಕೊಂದು ನಿದರ್ಶನವಲ್ಲವೇ ಇದು?

4. ಕಮಲಾಕ್ಷಿ ಸಿ.ಆರ್. – ನಾನು ನಾಯಿಮರಿ ಕದ್ದಿದ್ದು

ತಿಳಿ ಹಾಸ್ಯಭರಿತ ನಗೆಭಾವನೆಗಳಿಂದ ಶೋಧಿಸಿ ಬಂದ ಬರಹ ನಮ್ಮನ್ನು ಮಂದಹಾಸದಿಂದ ಓದಿಸಿಕೊಳ್ಳುತ್ತದೆ. ಹೆತ್ತ ಮಕ್ಕಳ ಮೇಲೆ ಅದೆಷ್ಟು ವಾತ್ಸಲ್ಯ, ಪ್ರೀತಿ, ಮಮತೆಗಳಿರುತ್ತದೆಯೋ ಅದನ್ನು ಮೀಟರ್ ಹಾಕಿ ಅಳೆಯಲು ಸಾಧ್ಯವೇ! ಕಮಲಾಕ್ಷಿಯವರಿಗಾದದ್ದೂ ಅದೇ! ಪುಟ್ಟ ಮಗನಿಗಾಗಿ ಅವನಿಷ್ಟಪಡುವ ನಾಯಿಮರಿಯನ್ನು ಕದ್ದುಬಿಡುವ ಪ್ರಯಾಸಕ್ಕೂ ಇಳಿಯುತ್ತಾರೆ. 'ಕದ್ದೆ' ಎಂದುಕೊಂಡ ಮೇಲೆ ಕಳ್ಳತನದ ಭಾವಭಾರದಿಂದ ಬೆದರಿ ಬಿಟ್ಟೋಡಿ ಬರುವಾಗ ಎಡವಿ ಬೀಳುವುದು ಗಿಲ್ಟೀ ಕಾನ್ಷಿಯಸ್ ಅಲ್ಲದೆ ಮತ್ತಿನ್ನೇನು? ಕೊನೆಗೂ ಇದು ಕನಸು ಎಂದಾದಾಗ ಕಮಲಾಕ್ಷಿಯವರಿಗೆ ಮಾತ್ರವಲ್ಲ ನಮಗೂ ಹೃದಯ ಹಗುರಾಗುತ್ತದೆ.

5. ಎಲ್. ಗಿರಿಜಾರಾಜ್ – ಮಲ್ಲಿಗೆ ಅಂಗಳದಲ್ಲಿ ನಕ್ಕಾಗ

ಶೀರ್ಷಿಕೆಯಿಂದಲೇ ಮನಸ್ಸು ಹೃದಯವನ್ನು ಇಷ್ಟಗಲ ಅರಳಿಸಿ, ಮೇಲಷ್ಟು ಸುಗಂಧ ಪೂಸಿದ ಸುಂದರ ಕಥನವಿದು.. ವೈವಿಧ್ಯತೆಗೆ ಹೆಸರಾದ ಲೇಖಕಿ ಗಿರಿಜಾರಾಜ್ ಅವರು ಏಳು ಸುತ್ತಿನ ಮಲ್ಲಿಗೆಗಳನ್ನು ಕಿತ್ತು ಉದ್ದುದ್ದದ ದಂಡೆಗಳನ್ನಾಗಿ ಕನ್ಯೆಯರ ಮುಡಿಗೇರಿಸುವ ಅದ್ಭುತ ಹೂ ಬರಹವಿದು. ಪ್ರಸಿದ್ಧ ಕವಿವರೇಣ್ಯುಗಳ ಕಾವ್ಯ ಕುಸುಮಗಳಿಂದ ಸಿಂಗರಿಸಿ, ಸ್ವಂತ ಪದಲಾಲಿತ್ಯದಿಂದ ನವಿರಾಗಿ ಹೆಣೆಗೆಯೇರಿಸುತ್ತ, ಹೃದಯದಿಂದ ಹೃದಯಕ್ಕೆ ಮೃದು ಸೇತುವೆಯಾಗಿಸಿ, ಆಗಸದಲ್ಲಿ ಕತ್ತಲೆ ಕರಗಿ ಬೆಳಕಾಗುವ ಸಮಯಕ್ಕೆ ಲೋಕಾರ್ಪಣೆಗೊಳಿಸುವ ಹೊಸ ಆಸೆ, ಹೊಸ ಅಭಿರುಚಿ, ಹೊಸ ಶಿಲ್ಪ ನಿರ್ಮಾಣದ ಫಾರ್ಮೆಟ್ ಇದು! ತನ್ನದೇ ತೋಟದಲ್ಲರಳುವ ಮಲ್ಲಿಗೆ ಹೂವು ಅದೆಷ್ಟು ಪುಷ್ಪ ಚೋರರಿಗೆ ಮನಪ್ರಿಯ ಎಂದು ಸ್ಪಷ್ಟವಿದ್ದರೂ ಅದರಲ್ಲೇ ಮತ್ತೊಂದು ಮಗುದೊಂದು ಎಂಬ ಬಗೆ ಬಗೆಯ ನಾಟಕ ಕಲೆಯ ದೃಶ್ಯ ವೈಭವವಾಗಿಯೂ ತನ್ನ ಬರಹವನ್ನು ಪ್ರಸ್ತುತಪಡಿಸುತ್ತಾರೆ. ರೋಚಕ ನುಡಿ, ಸಾಹಿತ್ಯವನ್ನು

ಧಾರಾಳ ದುಡಿಸುವ ಗಿರಿಜಾರವರ ಸಾಧಿತ ಪರಿಕಲ್ಪನೆ ಅವಲೋಕನೀಯವೂ, ಸಂಸ್ಕೃತಿ ಶೋಧನ ಪ್ರಕ್ರಿಯೆ ಎಂದೂ ಹೇಳಬಹುದು. ಹಂಚಿ ಬದುಕುವ ಜೀವನದಲ್ಲಿನ ಸಂತೋಷವನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿರುವ ಲೇಖಕಿ ಗಿರಿಜಾರಿಗೆ ವಂದನೆಗಳು.

6. ರೇಣುಕಾ ದೇಸಾಯಿ – ರಕ್ಷಾ ಬಂಧನ– ರಾಖಿ ಹಬ್ಬ

ಅತ್ಯಂತ ಸಾರಪೂರ್ಣವಾಗಿ ಭಾರತೀಯ ಹಬ್ಬದಾಚರಣೆಗಳ ವಿಶಿಷ್ಟತೆ ಶೀಘ್ರವಾಗಿ ಬೆಳೆಯುತ್ತಿರುವ ರೇಣುಕಾ ದೇಸಾಯಿಯವರ ಪ್ರಬಂಧದಲ್ಲಿ ಕಂಡುಬರುತ್ತದೆ. ಅದರಲ್ಲೂ ಭಾರತೀಯ ಪ್ರೇಮ ಸ್ನೇಹ ಸಂಬಂಧಿತ ಆಸ್ಥೆ, ಕಾಳಜಿ, ಜ್ಞಾನ ವಿವೇಕಗಳು ಮನುಷ್ಯೇತರ ಸೃಷ್ಟಿಯಾಗಿರುವ ಪಶುಪಕ್ಷಿ ಗಿಡಮರಗಳೊಂದಿಗಿನ ಹೊಂದಾಣಿಕೆಯಾಗಿರುವುದು ಅತಿ ಮಹತ್ವದ ಸಂಗತಿಯಾಗುತ್ತದೆ. ಇದು ಸಮಾಜ ಪ್ರಜ್ಞೆ – ಸೋಶಿಯಲ್ ಸೆನ್ಸ್ ಆಗಿರುವುದೂ ಹೌದು. ಲೇಖಕಿ ಇಲ್ಲಿ ಉದ್ಗರಿಸುವುದೇನೆಂದರೆ ಸಹೋದರತ್ವ ಬಂಧು ಬಾಂಧವ್ಯ ಮತ್ತು ಕೌಟುಂಬಿಕ ಸಾಮರಸ್ಯತೆಯನ್ನು ಪ್ರಧಾನವಾಗಿ ರೂಪಿಸುವ ರಕ್ಷಾಬಂಧನ–ರಾಖಿ ಹಬ್ಬಗಳು ವಿಶ್ವ ಮಾನವತೆಯನ್ನು ಪ್ರತಿನಿಧಿಸುವ ರತ್ನ ಕಿರೀಟವಾಗಿದೆ. ನಯವಾದ ರೇಷ್ಮೆಯ ದಾರದಿಂದ ಮಾಡಿದ ಎಳೆಗಳು ತನ್ನೊಂದಿಗೆ ರಕ್ತ ಹಂಚಿಕೊಂಡು ಹುಟ್ಟಿದವರನ್ನು ಮಾತ್ರವಲ್ಲ ಜಗತ್ತಿನಾದ್ಯಂತದ ಜೀವಿಗಳನ್ನೂ ಪ್ರೇಮದಿಂದ ಆಲಂಗಿಸುವ ಸೂತ್ರದೆಳೆಯಾಗಿದೆ. ಕೆಲವಾರು ಪ್ರಚಲಿತ ದಂತಕಥೆಗಳ ಮೂಲಕ ಇದನ್ನು ಪ್ರತಿಪಾದಿಸುವ ಲೇಖನದ ಮಹತ್ವ ಭಾರತೀಯ ಜೀವ–ತತ್ವ ಮೀಮಾಂಸೆಯ ಸಾಮಾಜಿಕ ಬದ್ಧತೆಯ ಅರಿವಿನ ಕಣಜವೂ ಆಗಿದೆ. ಲೇಖನ ಅರ್ಥಪೂರ್ಣ.

7. ಡಾ. ಸತ್ಯವತಿ ಮೂರ್ತಿ – ಮ್ಯಾಥಮೆಟಿಕ್ಸ್ ಮಹಾಮೇಳ

ಗಣಿತ ಲೋಕದ ದಿಗ್ಗಜರಲ್ಲೊಬ್ಬನಾದ ಜ್ಯಾಮಿತ್ರಿಗೆ ಒಂದು ದಿನ ಉತ್ಸಾಹ ಬಂದು ಸರಳಗೆರೆಯ ನೇರದಲ್ಲಿ ಸಾಗುತ್ತಾ ಇನ್ನೊಬ್ಬ ದೈತ್ಯ ಅರಿತ್ಮೆಟಿಕ್ ನನ್ನು ಭೇಟಿಯಾಗಲು ಮುಂದುವರಿಯುತ್ತಿರುವಾಗ ಅಕಸ್ಮಾತ್ತಾಗಿ ಆಲ್ಜಿಬ್ರಾ ಸಿಗುತ್ತಾನೆ. ಇಬ್ಬರೂ ಕೂಡಿ ಕುಶಲವಾಗಿ ಮಾತನಾಡಿಕೊಂಡು ಬರುವಾಗ ಅರಿತ್ಮೆಟಿಕ್ ಕೊನೆಗೂ ಬರುತ್ತಾನೆ. ಅಂತೂ ಜ್ಯಾಮಿತ್ರಿ ಆವತ್ತು ಅಂದ್ಕೊಂಡ ಪ್ರೋಗ್ರಾಂನಂತೆ ಮೂವರೂ ಥಿಯೇಟರಿಗೆ ಹೋಗಿ ಕುಳಿತು ತಮಗಿಷ್ಟದ ಫಿಲ್ಮ್ ನೋಡುವುದೇ ತಮ್ಮದೇ ವಸ್ತು ವಿಷಯದಲ್ಲಿ ಪರಿಣಿತಿ ಹೊಂದಿರುವ ಲೇಖಕಿಯ ವಿಶೇಷತೆಯಾಗುತ್ತದೆ.

8. ರಾಧಿಕಾ ವಿ. ಗುಜ್ಜರ್ – ಸ್ವೀಕಾರ

ಪ್ರಾಯಶಃ ಒಂದು ಅನುಭವ ಕಥನವೂ ಆಗಿರುವ ಸಾಧ್ಯತೆಯಿರುವ ಕಥನ–ಬರಹ ಮನುಷ್ಯ ಹೃದಯಾಂತಕರಣದ ಉದಾತ್ತತೆಯ ಮೇರು ಚಿತ್ರವಾಗಿದೆ. ಮನೆ ಬದಲಾಯಿಸಿಕೊಂಡು ಹೋಗುತ್ತಿದ್ದ ಮಾಲೀಕರು ನಿರ್ಲಕ್ಷ್ಯದಿಂದ, ನಿರ್ದಾಕ್ಷಿಣ್ಯವಾಗಿ ತಮ್ಮ ಸಾಕು ನಾಯಿಯನ್ನು ಗೇಟಿಗೆ ಕಟ್ಟಿ ಹೋಗಿರಬೇಕು. ಲೇಖಕಿ ನೋಡುವಾಗ ರಾತ್ರಿಯಿಡೀ ಮಳೆಯಲ್ಲಿ ನೆನೆದ ನಾಯಿ ಸಾವಿನ ಹಂತಕ್ಕೆ ತಲುಪಿದ್ದು. ಕರುಣೆಯಿಂದ ಅದನ್ನು ಬಿಡಿಸಿಕೊಂಡು ಪಶು ಚಿಕಿತ್ಸಾಲಯಕ್ಕೆ ಕೊಂಡೊಯ್ದು ಚಿಕಿತ್ಸೆ ಮಾಡಿಸಿ ತಮ್ಮ ಮನೆಗೇ ಕರೆತರುವ ಲೇಖಕಿಯ ಆದರ್ಶ ಇಲ್ಲಿ ಪ್ರಶಂಸನೀಯವಷ್ಟೇ ಅಲ್ಲ, ಪಾಠವೂ ಆಗುತ್ತದೆ.

9. ಅನ್ನಪೂರ್ಣ ಸುಬ್ಬರಾವ್ – ಕುಕ್ಕರಾಯಣ

ಇದೊಂದು ಸರಸ ಸುಂದರ ಲೇಖನ. ಕಳೆದ ಶತಮಾನದ 70ರ ದಶಕದಲ್ಲಿ ವಿವಾಹವಾದ ಎಲ್ಲ ನವ ವಧುಗಳ ಅನುಭವ ಸೇಚನ ಎಂದೂ ಹೇಳಬಹುದು. ಮದುವೆಯಾದ ನಂತರವಷ್ಟೇ ಕೊಂಡುಕೊಂಡು ಉಪಯೋಗಿಸುವ

ಸೌಲಭ್ಯ ದೊರಕಿಸಿಕೊಳ್ಳುವ ಅವಸರದಲ್ಲಿ ನಾನೂ ಒಬ್ಬಳಾಗಿದ್ದೆ. ಮೊದಲ ಬಾರಿ ಸ್ಟೌವ್ ಮೇಲೆ ಕುಕ್ಕರೇರಿಸಿದಾಗ ಅದರಿಂದ ಹೊರಟ ಬುಸ್ ಬುಸ್ ಶಬ್ದಕ್ಕೆ ಸ್ವಲ್ಪ ಮುಜುಗರಪಡುತ್ತಲೇ ನಿಂತಿದ್ದಾಗ, ಪಕ್ಕದ ಹಿತ್ತಿಲಿನ ಮಾಯಿ ಬಿದಿರಿನ ಉದ್ದ ಗಳು ಹಿಡಿದುಕೊಂಡು ಅವರ ಹಿತ್ತಲನ್ನೆಲ್ಲ ಚುಚ್ಚಿ ಚುಚ್ಚಿ ನೋಡುವುದು ಕಣ್ಣಿಗೆ ಬಿತ್ತು. "ಏನ್ ಮಾಯಿ, ಏನ್ ವಿಷಯ? ಎನ್ನುತ್ತ ಹೊರಗೆ ಹೋಗಿ ಅಡ್ಡ ಮಣ್ಣಿನ ದರೆ ಬಳಿಗೆ ಹೋದರೆ, "ಬರ್ಬೇಡಾ, ಮುಂದೆ ಬರ್ಬೇಡಾ, ನಿಮ್ಮ ಮನೆ ಬಳಿಯಲ್ಲೇ ನಾಗರ ಹಾವಿದೆ!" ಎಂದು ಕಿರಿಚತೊಡಗಿದರು. ಬೆದರಿ ನಾನು ವಾಪಾಸು ಜಗುಲಿ ಹತ್ತಿದೆ. ಒಳಗಿನಿಂದ ಕುಕ್ಕರ್ ಕೂಗುತ್ತಲೇ ಇತ್ತು. ಆಗ ಜ್ಞಾಪಕಕ್ಕೆ ಬಂದು ಕುಕ್ಕರ್ ಆರಿಸಿ ಪುನಹ ಹೊರಬಂದೆ. ಮಾಯಿಯ ಹುಡುಕಾಟ ನಡೆದೇ ಇತ್ತು. ತುಸು ಸಮಯದ ನಂತರ ಸುಸ್ತಾಗಿದ್ದ ಮಾಯಿ ಹೇಳಿದರು, "ನೋಡಿದ್ಯಾ ಈಗ ಆ ಹಾವಿನ ಸದ್ದಿಲ್ಲ, ನನ್ನ ಭಯಕ್ಕೆ ಬಿಲ ಸೇರಿಕೊಂಡಿತು" ಎಂದು. ಪಾಪ! ಮಾಯಿಗೆ ಮೀಸೆಯಿರಲಿಲ್ಲ! ಅದನ್ನು ನೆನೆಸಿಕೊಂಡಂತೆ ನನಗೆ ನೆನಪಿಗೆ ಬಂದದ್ದು ನನ್ನ ಕುಕ್ಕರ್! ಅದರ ಬುಸುಗುಟ್ಟುವಿಕೆಯೇ ಹಿತ್ತಿಲ ತುಂಬ ಕೇಳಿಸಿಕೊಂಡು ಹಾವಿನ ಭಯ ಸೃಷ್ಟಿಸಿರಬಹುದೇ? ನನ್ನ ಸೋ ಕಾಲ್ಡ್ ಎಜುಕೇಷನ್ ಬಗೆಗಿನ ಅಹಂಕಾರಕ್ಕೆ ನನಗೇ ನಾಚಿಕೆಯಾಯ್ತು. ಅನ್ನಪೂರ್ಣ ಅವರೇ, ವರ್ಷಗಳ ಹಿಂದಿನ ಘಟನೆಯನ್ನು ಮತ್ತೊಮ್ಮೆ ತಮ್ಮ ಬರಹದಿಂದ ಜ್ಞಾಪಿಸಿದ್ದಕ್ಕೆ ಕೃತಜ್ಞತೆಗಳು.

10. ಟಿ.ಎಸ್. ಶ್ರವಣಕುಮಾರಿ – ತದಪಿ ನ ಮುಂಚತ್ಯಾಶಾ ಪಾಶ– ಆಶಾಪಾಶ, ಮೋಹಜಾಲ ಬಿಡದು ಯಾರನ್ನೂ...

ಹೌದು ಎಂಥೆಂಥ ಋಷಿಮುನಿಗಳೂ ಐಹಿಕ ಆಕರ್ಷಣೆಗಳಿಂದ ವಿರಕ್ತರಾಗಿ ವೈರಾಗ್ಯ ಪಡೆಯಲಾರರು! ಹೀಗಿರುವಾಗ ಪಾಮರರಾದ ನಾವೂ,ನೀವೂ ಯಾವ ಲೆಕ್ಕ! ಅದೂ ಆರೋಗ್ಯ ಕೆಟ್ಟು ಆಸ್ಪತ್ರೆವಾಸದಲ್ಲಿರುವಾಗ...? ತಮ್ಮ ವೈಶಿಷ್ಟ್ಯವಾಗಿರುವ ಗಟ್ಟಿ ಬರಹದ ಸ್ಪಷ್ಟತೆಯ ಸಾಕ್ಷ್ಯವಿರುವ ಕತೆಗಾರ್ತಿ ಶ್ರವಣಕುಮಾರಿಯವರಿಗೆ ಮನೋ ಪ್ರತಿಮೆಗಳ ವಿವರ್ಣತೆಯ ಶೀಘ್ರ ಚಿಕಿತ್ಸೆಯರಿವು ಇರಲೇಬೇಕು. ಸಾಮಾನ್ಯ ಕ್ಲೇಶಗಳೋ, ಆರೋಗ್ಯಾದಿ ಸಮಸ್ಯೆಗಳೋ– ಒಟ್ಟಿನಲ್ಲಿ ಸ್ವಯಂ ರಕ್ಷಣೆಯು ಪ್ರತಿಯೊಬ್ಬರಿಗೂ ಅಗತ್ಯ. ಸಂಕಲ್ಪ ಪೂರ್ವಕವಾಗಿ ಬೌದ್ಧೀಕರಣ ಪಡೆದು, ಭ್ರಾಮಕ ಹಗಲುಗನಸುಗಳನ್ನು ಛೇಡಿಸಿ, ಓಡಿಸಿ ದೂರ ತಳ್ಳುವುದರಿಂದಲೂ ರೋಗ ಲಕ್ಷಣಗಳ ಆತಂಕವನ್ನು ತಾತ್ಸಾರ ಮಾಡುವುದರ ಮುಖಾಂತರದಿಂದಲೂ ಮಾನಸಿಕ ವಿಷಣ್ಣತೆಗೆ ಉತ್ಕೃಷ್ಟ ಚಿಕಿತ್ಸೆವೇರ್ಪಡುತ್ತದೆ. ಉಸಿರಿರುವ ತನಕ ಗೆದ್ದು ನಿಲ್ಲುವುದು ಮಾನವ ಧ್ಯೇಯವಾಗಬೇಕು.

11. ಎನ್.ವಿ. ರಘುರಾಂ – ಕಾಲೇಜಿನಲ್ಲಿ ಮೊದಲ ದಿನ

1975ರಲ್ಲಿನ ತನ್ನ ಕಾಲೇಜು ಜೀವನದ ಮೊದಲ ದಿನದ ಸವಿ ನೆನಪಿಗೆ ನಮ್ಮನ್ನು ಕೊಂಡೊಯ್ಯುವ ರಘುರಾಮ ಅವರದ್ದು ಭಿನ್ನವಾದ ಭಾವಗಳಿಂದ ಕೂಡಿದ, ತನ್ನುದ್ದೇಶದ ಬಗ್ಗೆ ತಾನೇ ಸಜ್ಜನಿಕೆಯಿಂದ ನಿರಾಯಾಸವಾಗಿ ಬರೆದ ಅಪ್ರತಿಮ ಬರಹವಿದು ಎನ್ನಬಹುದು. ತನ್ನ ಬರಹವನ್ನು ಆತ್ಮವಿಶ್ವಾಸಕ್ಕೆ ಒಡ್ಡಿಕೊಳ್ಳುತ್ತ, ನಡೆದ ಘಟನೆಗಳಿಗೆ ಒಪ್ಪ ಓರಣವಿತ್ತು, ಪಠ್ಯ ಪಾಠಾದಿಗಳ ಶಿಸ್ತು ಅರಗಿಸಿಕೊಳ್ಳುತ್ತ, ಯಾವ ವಿರೋಧಾಭಾಸ, ಪೇಚಾಟಗಳಿಗೆ ಅವಧಿ ನೀಡದೆ ಮಂದಹಾಸದ ಮೃದು ಮೆಲುಕಗಳಾಗಿ ಪರಿವರ್ತಿಸಿದ ಚಾಣಾಕ್ಷ ಬರಹ. ಮಧ್ಯ ಮಧ್ಯದಲ್ಲಿ ಮೊದಲ ಬಾರಿ ದೂರಗೊಂಡು ಬಂದ ಅಮ್ಮನನ್ನು ನೆನಪಿಗೆ ತಂದುಕೊಳ್ಳುತ್ತ ರಾಷ್ಟ್ರೀಯ ಹೆದ್ದಾರಿ ದಿಟ್ಟಿಸಿದರೂ ಲೇಖಕರ ಅಧ್ಯಯನಶೀಲ ಮನಸ್ಸು ಗಮನ ಸೆಳೆಯುತ್ತದೆ ಹಾಗೂ ಓದು ಪ್ರಯೋಜನಕಾರಿಯಾಗುತ್ತದೆ.

12. ಕೆ.ಎನ್.ಮಹಾಬಲ – ಮಡಚುವ ಕುರ್ಚಿ

ಒಂದು ಕಾಲಕ್ಕೆ ಅಕಸ್ಮಾತ್ ದೊರಕಿ ಮನುಕುಲಕ್ಕೆ ಸುಖ ಸೌಲಭ್ಯವೇ ಆಗಿ ಹೋದ ಕಬ್ಬಿಣದ–ಸ್ಟೀಲ್ ಮಡಚು ಕುರ್ಚಿಗಳು ಸಾಹಿತಿ ಕೆ.ಎನ್. ಮಹಾಬಲರ ನೋಟದಲ್ಲಿ ಪ್ರಾಶಸ್ತ್ಯ ಪಡೆಯುವುದು ಮಹತ್ವವೆನಿಸುತ್ತದೆ. 'ಆದರದಿಂದ ಬಾಗಿಲು ತೆರೆದು ಬರಮಾಡಿಕೊಳ್ಳಿ' ಎಂದು ಲೇಖಕರು ತೋರುವ ಒಲುಮೆ ನಲುಮೆಗಳು ಬಲು ಉಪಯೋಗ ಪೂರ್ಣವೂ–ಆಗಿ ಶ್ರೀ ಸಾಮಾನ್ಯರ ಮನೆಯಾತಿಥ್ಯಕ್ಕೆ ವರಪ್ರಸಾದವಾಗುತ್ತದೆ. 1970ರಲ್ಲಿರಬಹುದು, ಯಾರೋ ಜಾಣ ಲೋಹ ಕರ್ಮಾಚಾರಿಯೊಬ್ಬರ ಕೈಗಳಲ್ಲಿ ಹುಟ್ಟು ಕಂಡು ಬಳಕೆಗೆ ಬಂದ ಈ ಮಡಚುವ ಬಿಡಿಸುವ ಕುರ್ಚಿಗಳ ಕಾರ್ಯವ್ಯಾಪ್ತಿ ನಾವು ತಿಳಿದುಕೊಂಡಿರುವುದಕ್ಕಿಂತಲೂ ದೊಡ್ಡದು ಎಂಬ ಲೇಖಕ ಮಹಾಬಲರ ಗಮನಕ್ಕೆ ಬಂದ ಇತ್ತೀಚಿಗಿನ ಕೆಲ ಘಟನೆಗಳೇ ಕಾರಣವಾಗಿ ಕಾಂಪಾಕ್ಟ್ ಹೋಮ್‌ಗೆ ಈ ಸುಲಭದಲ್ಲಿ ಕುಳಿತೇಳುವ ಆಸನ ವ್ಯವಸ್ಥೆ ಬಿಟ್ಟರೆ ಬೇರಾವುದೂ ಇಲ್ಲವೆನಿಸುತ್ತದೆ. ಬೇಡವೆಂದಾದಾಗ ಮೂಲೆ ಸೇರುವ, ಬೇಕೆಂದಲ್ಲಿಗೆ ಬಗಲು ಸೇರಿಕೊಂಡು ನಡೆದಾಡುವ ಈ ಫರ್ನೀಚರ್ ಊರಿಂದೂರಿಗೆ ಪಯಣಿಸುವುದರಲ್ಲೂ ಅತಿ ಉತ್ಸಾಹಿ. ಮಕ್ಕಳಿಂದ ಹಿಡಿದು ವೃದ್ಧರ ವರೆಗೂ ಸರ್ವೋಪಕಾರಿಯಾದ ಈ ಕುರ್ಚಿಗಳ ಮಹಾತ್ಮೆಯನ್ನು ಲೇಖಕರು ಸರಿಯಾಗಿಯೇ ಗುರುತಿಸಿದ್ದಾರೆ. 'ಲೋಕಾ ಸಮಸ್ತಾ ಸುಖಿನೋ ಭವಂತು'.

13. ಭ.ರಾ. ವಿಜಯಕುಮಾರ್ –'ಪಂಕ್ತಿ ಪಾವನರು' (ಪುಸ್ತಕ ಪರಿಚಯ)

ವ್ಯಕ್ತಿ ಚಿತ್ರಗಳ ಚಿತ್ರಕಾವ್ಯ ಈ 'ಪಂಕ್ತಿ ಪಾವನರು' ಎನ್ನುವ ಭ.ರಾ ವಿ.ಯವರು ತನ್ನ ಪ್ರಿಯ ಬರಹಗಾರ ಶತಾವಧಾನಿ ಡಾ. ರ.ಗಣೇಶರ ಕುರಿತು ಬರೆಯುತ್ತ ,ಹಲವು ಬಾರಿ ಲೇಖಕನ ಹೆಸರೇ ಪುಸ್ತಕ ಪ್ರವೇಶಕ್ಕೆ ಮೊದಲ ಮೆಟ್ಟಿಲಾಗುತ್ತದೆ ಎಂದದ್ದನ್ನು ಅಕ್ಷರಶ: ನಾನೂ ಒಪ್ಪುತ್ತೇನೆ. ಶ್ರೀಯುತ ಗಣೇಶರ ನವೀನ ಕೃತಿ 'ಪಂಕ್ತಿ ಪಾವನರು' ವಿಶೇಷ ದರ್ಶನ ದಲ್ಲಿ ಕೃತಿಯ ಕರ್ತೃ ಆರಿಸಿ ಪರಿಚಯಿಸಿದ ಒಂಭತ್ತು ಅಸಾಮಾನ್ಯರೊಂದಿಗಿನ ಅನುಭವವನ್ನು ಸ್ವಾರಸ್ಯಕರವಾಗಿ ಮಂಡಿಸಿದ ರೀತಿ ನನಗಿಷ್ಟವಾಯಿತು ಎಂದ ಲೇಖಕ ವಿಜಯಕುಮಾರರ ಪರಿಚಯವೂ ಅಮೋಘವಾಗಿ ಮೂಡಿ ಬಂದಿದೆ. ಸ್ಪಷ್ಟ ವಿಚಾರಧಾರೆ, ಸರಳ ಗ್ರಹಿಕೆಗೆ ಒಗ್ಗಿಕೊಳ್ಳುವ ಒಳನೋಟಗಳ ವಿವೇಚನೆ ಹಾಗೂ ತೆರೆದು ಬಣ್ಣಿಸಿದ ವ್ಯಕ್ತಿ ವಿಶೇಷವನ್ನು ವಿಶುದ್ಧ ಭಾಷಾ ಸಾಮರ್ಥ್ಯದಲ್ಲಿ ಓದುಗರ ಪ್ರಶಂಸೆಗೆ ತಂದದ್ದು ಭ.ರಾ.ವಿ.ಯವರ ಉತ್ತಮ ಕಾರ್ಯವೆಂದೇ ಗಣಿಸಲಾಗುತ್ತದೆ.

14. ನಾಗರತ್ನ ಚಂದ್ರಶೇಖರ್ – ದ್ರಾಕ್ಷಿ ತೋಟಗಳ ಒಂದು ಸುಂದರ ನೋಟ– ನ್ಯಾಪಾ ವ್ಯಾಲಿ

ಉತ್ತಮ ಬರಹಗಾರ್ತಿ ಎನಿಸಿಕೊಂಡಿರುವ ನಾಗರತ್ನ ಕೆ.ಎಸ್. ತನ್ನ ಅಮೇರಿಕಾ ಪ್ರವಾಸದಲ್ಲಿನ ಒಂದು ಸುಂದರ ನೋಟ ತೆರೆದಿರಿಸಿದ್ದಾರೆ. ಕ್ಯಾಲಿಫೋರ್ನಿಯಾದ ನ್ಯಾಪಾ ವ್ಯಾಲಿಯ ದ್ರಾಕ್ಷಾರಸದ (ವೈನ್) ರುಚಿಯನ್ನು ಕಲ್ಪಿಸಿ ಕೊಳ್ಳುವ ಅವಕಾಶವನ್ನು ವಿಶೇಷವಾಗಿ ಕಟ್ಟಿಕೊಟ್ಟಿದ್ದಾರೆ. ಅವರವರ ಆರ್ಥಿಕ ವ್ಯವಸ್ಥೆಗನುಗುಣವಾಗಿ ಪ್ಯಾಕೇಜ್ ಖರೀದಿಸುವುದರಿಂದ ತೊಡಗಿ, ಎಲ್ಲಾ ರೀತಿಯ ಮಾರ್ಗದರ್ಶನ ಮಾತ್ರವಲ್ಲ, ದ್ರಾಕ್ಷಿ ಬೆಳೆಯ ಸಮಗ್ರ ಪರಿಚಯ ಮಾಡಿ, ರಸ ತುಂಬಿದ ಗ್ಲಾಸುಗಳನ್ನು ತುಟಿಗೇರಿಸುವ ತನಕದ ವರ್ಣನೆಯನ್ನು ರಸವತ್ತಾಗಿ ನೀಡುತ್ತಾರೆ. 13ನೇ ಶತಮಾನದ ಹಳೆಯ ಕೋಟೆ ಕಟ್ಟಡಗಳಿಗೆ ಕರೆದೊಯ್ದು, ವಿಶ್ವದ ಪ್ರಸಿದ್ಧ ತಾಣವೊಂದನ್ನು ಪರಿಚಯಿಸುತ್ತಾರೆ.

ಇಲ್ಲಿಗೆ 217ನೇ ದಾಸೋಹದ ಅಮೃತ ಬರಹಗಳ ಮೇಲಿನ ಅನಿಸಿಕೆಗಳನ್ನು ಕೊನೆಗೊಳಿಸಿ ಕವಿ–ಕಾವ್ಯಗಳ ಯಥಾಶಕ್ತಿ ವಿವರಣೆಗೆ ಬರುತ್ತೇನೆ. ಹಾಗೆ ನೋಡಿದರೆ ಕವಿತೆಗಳಿಗೆ 'ಫಿಕ್ಸ್' ಆದ, 'ಇದೇ' ಎನ್ನುವ ಯಾವ ಅರ್ಥವೂ ಇರುವುದಿಲ್ಲ. ಕವಿಗಳ ಅನುಭವ–ಭಾವಲೋಕದಲ್ಲಿ ವಿಹರಿಸಿ ಬರುವ ಭಾವಾನುಭಾವಗಳೇ ಕಾವ್ಯ ರಸವಾಗಿ

ಒಸರುತ್ತವೆ. ಓದುಗನಿಗಾದರೋ 'ಯಾವ ಶಬ್ದ' ಮೊದಲು ಅವನನ್ನು ಆಕರ್ಷಿಸುವುದೋ ಅದರ ಸುತ್ತಲೇ ಅವನು ಕಾವ್ಯ ಶರೀರವನ್ನು ಕಟ್ಟಿಕೊಳ್ಳುತ್ತಾನೆ. ಸಹೃದಯದ ಕವಿಗೆ ಇದು ಒಪ್ಪಿತವಾದರೆ ಸಂತಸದ ಸಂಗತಿ.

1. ಈಗ ಮೊದಲನೆಯದಾಗಿ, **ಪೋಲೇನಹಳ್ಳಿ ರಮೇಶರ ಕವನ– 'ಬುದ್ಧ, ಬಸವ ಮತ್ತು ಗಾಂಧಿ.** ಗಂಧದ ಪ್ರತಿಮೆಯಾಗಿ ಸರ್ಕಾರಿ ಕಚೇರಿಗಳಲ್ಲಿ, ಪುಸ್ತಕದ ಕಪಾಟುಗಳಲ್ಲಿ ಅಲ್ಲದೆ ತೊರೆದು ಕಸಗುಪ್ಪೆಗೆ ಬಿಸುಡಿ ಬಿಟ್ಟ ಪಠ್ಯದ ಹರಿದ ಹಾಳೆಗಳಾಗಿಯೂ ಈ ಬುದ್ಧ, ಬಸವ, ಗಾಂಧಿಯವರನ್ನು ನಾವು ನೋಡುತ್ತೇವೆ. ದೊಡ್ಡ ದೊಡ್ಡ ತೈಲ ಪಠವಾಗಿ ರೋಮಾಂಚನ ಹುಟ್ಟಿಸುವ ಈ ಮಹಾತ್ಮರುಗಳೆಲ್ಲ ಕೋಟಿ ಕೋಟಿಗೆ ಮಾರಾಟವಾದರೂ ಮನುಷ್ಯ ನಾಲ್ಕು ಕಡೆ ಕಟ್ಟು ಹಾಕಿಸಿ, ಅಡ್ಡ ಗಾಜು ಹೊದಿಸಿ, ಎಟುಕದಷ್ಟು ಎತ್ತರಕ್ಕೇರಿಸಿದರೆ, ಬಾಕಿ ಎಲ್ಲ ಕಾಳಸಂತೆ ವ್ಯವಹಾರ, ಅನೈತಿಕತೆ ಮತ್ತು ಬರಿ ಹಿಂಸಾಚಾರಗಳೇ! ಪೋರ ಕಾವ್ಯಾಂಕಿತರದ್ದು ವರ್ತಮಾನಕ್ಕೆ ಬೆಸೆದ ಕವನ.

2. ಎರಡನೇ ಕವನ 'ಜಾನಕಿರಾಮ' ನಾಮಾಂಕಿತ **ಸೀತಾರಾಮ ಕಟ್ಟಿಯವರ 'ನಾ ಜೀವ ತಡೆದಿರುವೆ.'** ಲವ್ ಆಟ್ ಫಸ್ಟ್ ಸೈಟ್ ಎಂಬ ಹೊನ್ನುಡಿಗೆ ಸರಿಯಾಗಿ ಅನುರಾಗ ಬೆಳೆಸಿಕೊಂಡ ಪ್ರೇಮಿಯೊಬ್ಬನ ಅಂತರ್ ವಿಲಾಪವಾಗಿ ನನಗೆ ಕೇಳಿಸಿತು. ಚೆಲುವೆಯೊಬ್ಬಳ ಪ್ರೀತಿಯನ್ನು ಗಳಿಸಿಕೊಳ್ಳುವ ಹಂಬಲವಾಗಿ ಕಾವ್ಯ 'ನಾ ಜೀವ ತಡೆದಿರುವೆ' ಹೊಮ್ಮಿ ಬರುತ್ತದೆ. ಇದು ನಿಜ ಹೃದಯದ ಪ್ರೀತಿಯೂ ಹೌದು, ಮನಸ್ಸಿನ ಭಾವ ಸಂಕೇತವೂ ಹೌದು! ಆದರೂ ಆ ಚೆಲುವೆ ಅದೇಕೋ ಪ್ರತಿ ಸ್ಪಂದಿಸುವುದು ಕಾಣಬರದೆ ಕವಿಯು 'ಸಿಟ್ಟು ಸೆಡುವುಗಳನ್ನು ಬಿಸುಟು, ವೀಣೆಯ ಝೇಂಕಾರವಾಗು ' ಎನ್ನುವುದು ಕನಿಕರಕ್ಕೆ ಕಾರಣವಾಗುತ್ತದೆ.

3. ಮೂರನೇದಾಗಿ ಕವಯಿತ್ರಿ **ಮಾಲತಿ ಶ್ರೀನಿವಾಸನ್ ಅವರ ಎರಡು ಕವನಗಳು – 'ಗಡಿಬಿಡಿ ಗೌರಿ' ಮತ್ತು 'ಹೂ ನಗೆಯ ಚೆಲುವೆ'.** ಒಂದಕ್ಕೊಂದು ಅನುಬಂಧಿಸಿಕೊಂಡಿರುವಂತೆ ಕಾಣುವ ಈ ಕವನಗಳು ಕವಯಿತ್ರಿಯ ನಿಜ ಭಾವಶೋಧನೆಗಾಗಿ ಆದರ ಪಡೆಯುತ್ತವೆ. ಮನೆಯ ಗೌರಿಯರು ನಿಜಕ್ಕೂ ಸದಾ ಗಡಿಬಿಯಿಂದಿ ರುತ್ತಾರೆ. ದಿನಕರನಿಗಿಂತ ಬೇಗ ಏಳುವ ಹೆಂಗಳೆ ಉದ್ಯೋಗಸ್ಥಳಾದರಂತೂ ಅವಳ ಹರಿಯುವ ಹುರುಪು ಹತ್ತಾರು ವರ್ಷಗಳಗೂ ಏಕಪ್ರಕಾರವಾಗಿರುತ್ತದೆ. ರಾತ್ರಿ ಚಂದಿರನ ಮಡಿಲಲ್ಲಿ ಸುಖವಾಗಿ 'ನಿದ್ರಿಸು' ಎಂಬ ಕವಯಿತ್ರಿಯ ಅಂತ:ಕರಣದ ವಾತ್ಸಲ್ಯ ಆ ಜಗನ್ಮಾತೆ ಗೌರಿಯಿಂದಲೇ ಬಂದಿರಬೇಕು. ಎರಡನೇ ಕವನ 'ಹೂ ನಗೆಯ ಚೆಲುವೆಯೂ' ಇದೇ ಗಡಿಬಿಡಿ ಗೌರಿಯೇ ಆಗಿರುವುದರಲ್ಲಿ ಸಂದೇಹವೇ ಇಲ್ಲ. ಅಂದು ಜೀವನದುದ್ದಕ್ಕೂ ನಗುನಗುತ್ತ ದುಡಿದ ಚೆಲುವೆ ಇಂದು ದಣಿದಂತಿದೆ. ಏಳುಬೀಳುಗಳ ತೊಟ್ಟು ತಿರುವುಗಳಲ್ಲಿ ಅವಿರತ ತೊಡಗಿ ಕೊಂಡು, ಅಂದಿನ ಗತ್ತುಗಮ್ಮತ್ತುಗಳ ದಾಂಪತ್ಯದ ಸವಿಗಳೂ ಮರೆತುಹೋಗುವಂತಾಗಿದೆ. ಕವಿಯಿತ್ರಿ ಇಲ್ಲಿ ಸಮಾಧಾನಿಸುತ್ತಿದ್ದಾಳೆ– ಪ್ರಶಾಂತ ನದಿಯಾಗಿ ಹರಿದು ಗಮ್ಯ ಸೇರು ಎಂಬ ಸಲಹೆ ಎಲ್ಲ ಗೌರಿಯರಿಗೂ ಸೂಕ್ತ ಎನಿಸುತ್ತದೆ.

ಇಲ್ಲಿಗೆ ಅತ್ಯದ್ಭುತವಾಗಿ ಪ್ರಸ್ತುತಿಯಾದ 217ನೇ ದಾಸೋಹದ ಕಾರ್ಯಕಲಾಪಗಳಲ್ಲಿ ನನ್ನನಿಸಿಕೆಗಳು ಕೊನೆಗೊಳ್ಳತ್ತವೆ. ಸನ್ಮನಸಿನಿಂದ ಅಮೃತ ಅವಕಾಶವನ್ನು ನನಗೆ ನೀಡಿದ ಶ್ರೀಯುತ ಮಹಾಬಲ ಮತ್ತು ಸಸಕಸ ಸಂಚಾಲಕ ಸಮಿತಿಗೂ ಮತ್ತು ನನ್ನನ್ನು ಸದಾ ಪೋಷಿಸುತ್ತಿರುವ ಸದಸ್ಯ ಬಂಧುಗಳಗೂ ನನ್ನ ಆಭಾರಗಳು.

ಕನ್ನಡವೇ ಸತ್ಯ – ಕನ್ನಡವೇ ನಿತ್ಯ.

***



‘ಗೊಂಬೆ ಮನೆ’

ಚಿತ್ರಕೃಪೆ: ಡಾ. ಶುಭಶ್ರೀ ಪ್ರಸಾದ್